ಸಂಪುಟ : 13 Volume | ಸಂಚಿಕೆ : 248 Issue | ಪುಟಗಳು : 08 Pages | ಬುಧುವಾರ 19 ನವೆಂಬರ 2025 | ₹2 | PRGINO. 120927(RNINO:KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

ಸತ್ಯಮೇವ ಜಯತೆ

Mallammanudi Regional News Paper

ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ

**ಬೆಳಗು**

ಗುರಿ ಅಥವಾ ಸಮಸ್ಯೆ ದೊಡ್ಡದೆಂದು ಭಯ ಅಥವಾ ಗಾಬರಿಪಡುವವನು ಜೀವನದಲ್ಲಿ ಏನನ್ನೂ ಸಾಧಿಸುವುದಿಲ್ಲ.

ಡಾ: ಬಿ.ಆರ್.ಅಂಬೇಡ್ಕರ್

4 ಬೆಳೆ ವಿಮೆ: ರೈತರು ನೋಂದಣಿ ಮಾಡಿ | 2 ಸಂಪುಟ ಪುನಾರಚನೆ ಸಾಧ್ಯತೆ | 8 ಎಫ್‌ಆರ್‌ಪಿ ದರ ಮರು ಪರಿಶೀಲನೆ | 3 ನೀರು ಸರಬರಾಜಿನಲ್ಲಿ ವ್ಯತ್ಯಯ

## ಅನೈತಿಕ ಸಂಬಂಧಕ್ಕೆ ಅಡ್ಡಿ ಸುಪಾರಿ ಕೊಟ್ಟು ಪತಿ ಕೊಲೆ

**ಮಲ್ಲಮ್ಮ ನುಡಿ ವಾರ್ತೆ**

**ಕಲಬುರಗಿ:** ಅನೈತಿಕ ಸಂಬಂಧಕ್ಕೆ ಅಡ್ಡಿ ಪಡಿಸಿದ ಪತಿಯನ್ನು ಪತ್ನಿ ಮತ್ತು ಆಕೆಯ ಪ್ರಿಯಕರರು ಸೇರಿ ಸುಪಾರಿ ನೀಡಿ ಕೊಲೆ ಮಾಡಿರುವ ಪ್ರಕರಣ ತಡವಾಗಿ ಬೆಳಕಿಗೆ ಬಂದಿದೆ.

ಕಣ್ಣಿ ಗ್ರಾಮದ ಬೀರಪ್ಪ ಅಲಿಯಾಸ್ ಬಸ್ಯಾ ತಂದೆ ಶಿವಶರಣಪ್ಪ ಪೂಜಾರಿ ಕೊಲೆಯಾದವರು.

ಬೀರಪ್ಪ ಅಲಿಯಾಸ್ ಬಸ್ಯಾ ಅವರ ಪತ್ನಿ ಶಾಂತಾಬಾಯಿ ಜೊತೆ ಗ್ರಾಮದ ಸಿದ್ದು ಅಲಿಯಾಸ್ ಜೆಸಿಬಿ ಸಿದ್ದು ತಂದೆ ಮಲ್ಲಣ್ಣ ಬಾಗಲಕೋಟೆ ಮತ್ತು ಶಂಕರ ತಂದೆ ದೇವಿಂದ್ರಪ್ಪ ಬಿಚಗತ್ತಿ ಅನೈತಿಕ ಸಂಬಂಧ ಹೊಂದಿದ್ದರು ಎನ್ನಲಾಗಿದೆ. ಈ ಸಂಬಂಧ ಬೀರಪ್ಪ ಇವರಿಬ್ಬರಿಗೆ ಬುದ್ಧಿವಾದ ಹೇಳಿದ್ದರೂ ಅವರು ಈತನ ಮಾತು ಕೇಳಿರಲಿಲ್ಲ ಎನ್ನಲಾಗಿದ್ದು, ಇದೇ ಕಾರಣಕ್ಕೆ ಬೀರಪ್ಪ ಕುಡಿತದ ಚಟಕ್ಕೆ ಒಳಗಾಗಿದ್ದ. 2016ರ ಮಾರ್ಚ್/ಏಪ್ರಿಲ್ ತಿಂಗಳಲ್ಲಿ ಗ್ರಾಮದ ಸುಭಾಷ ಸಾಹುಕಾರ ಗೋಧಿಪಟ್ಟಿ ಹೊಲದಲ್ಲಿ (ಸದ್ಯ ಲೇಔಟ್) ಈತನ ಶವ ಪತ್ತೆಯಾಗಿತ್ತು. ಈತನ ಮನೆಯವರು ಮತ್ತು ಸಂಬಂಧಿಕರು ಬೀರಪ್ಪ ಕುಡಿದ ನಶೆಯಲ್ಲಿ ಸತ್ತಿರಬಹುದು 2ನೇ ಪುಟನೋಡಿ

## ಸಹಖೈದಿಗಳ ಕಿರುಕುಳಕ್ಕೆ ಬೇಸತ್ತು ವಿಚಾರಣಾಧೀನ ಖೈದಿ ಆತ್ಮಹತ್ಯೆ

**ಮಲ್ಲಮ್ಮ ನುಡಿ ವಾರ್ತೆ**



**ಬೀದರ:** ಕಾರಾಗೃಹದಲ್ಲಿ ಸಹಖೈದಿಗಳ ಕಿರುಕುಳಕ್ಕೆ ಬೇಸತ್ತು ವಿಚಾರಣಾಧೀನ ಖೈದಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಬೀದರ್ ಜಿಲ್ಲೆಯ ಹುಮನಾಬಾದ್ ಕಾರಾಗೃಹದಲ್ಲಿ ನಡೆದಿದೆ.

ಬಸವಕಲ್ಯಾಣ ತಾಲೂಕಿನ ಗೌರ್ ಗ್ರಾಮದ ಖಂಡಪ್ಪ ಮೇತ್ರೆ (46) ಮೃತ ಖೈದಿ. ಜೈಲು ಸಿಬ್ಬಂದಿ ನಿರ್ಲಕ್ಷ್ಯ, ಸಹ ಖೈದಿಗಳ ಕಿರುಕುಳದಿಂದ ಖಂಡಪ್ಪ ಸಾವನ್ನಪ್ಪಿದ್ದಾನೆ ಎಂದು ಕುಟುಂಬಸ್ಥರು ಆರೋಪಿಸಿದ್ದಾರೆ.

ಮೃತ ಖಂಡಪ್ಪ 2025ರ ಏಪ್ರಿಲ್ 14ರಂದು ಸ್ವಂತ ತಾಯಿ ಸುಂದರಾಬಾಯಿ ಕೊಲೆ ಪ್ರಕರಣದಲ್ಲಿ ಜೈಲು ಸೇರಿ ವಿಚಾರಣೆ ಎದುರಿಸುತ್ತಿದ್ದ. ಹೆತ್ತತಾಯಿಯನ್ನೇ ಕೊಲೆ ಮಾಡಿದ್ದಾನೆ ಎಂದು ಸಹೋದರಿಯರು ಆತನ ವಿರುದ್ಧ ಹುಲಸೂರು ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು.

ವಿಚಾರಣೆ ಹಿನ್ನೆಲೆ ಎರಡೂವರೆ ತಿಂಗಳ ಹಿಂದೆ ಹುಮನಾಬಾದ್ ಜೈಲು ಸೇರಿದ್ದ. ಸಹಖೈದಿಗಳ ಕಿರುಕುಳದಿಂದ ಬೇಸತ್ತು ಭಾನುವಾರ ಸಂಜೆ ಮರ ಏರಿ, ಬಿಲ್ಡಿಂಗ್‌ನಿಂದ ಜಿಗಿದು ಮೃತಪಟ್ಟಿದ್ದಾನೆ. ಸಹಖೈದಿಗಳ ಕಿರುಕುಳ ಕುರಿತು ಜೈಲರ್ ಗಮನಕ್ಕೆ ತಂದರೂ ಕ್ರಮಕ್ಕೆ ಗೊಳ್ಳದ ಹಿನ್ನೆಲೆ ಸಾವನ್ನಪ್ಪಿದ್ದಾನೆ ಎಂದು ಆರೋಪಿಸಲಾಗಿದೆ. ಜೈಲು ಸಿಬ್ಬಂದಿಯ ನಿರ್ಲಕ್ಷ್ಯದಿಂದಲೇ ನಮ್ಮ ತಂದೆ ಸಾವನ್ನಪ್ಪಿದ್ದಾರೆ ಎಂದು ಮೃತನ ಮಕ್ಕಳ ಅಳಲು ತೋಡಿಕೊಂಡಿದ್ದಾರೆ. ಸಹಖೈದಿಗಳು ಕಿರುಕುಳ 2ನೇ ಪುಟನೋಡಿ

## ಸೌದಿ ಅಪಘಾತದಲ್ಲಿ ಬೀದರ ಮಹಿಳೆ ಸಾವು ರಹೀಂ ಖಾನ್ ಸಂತಾಪ: ಎಲ್ಲಾ ರೀತಿಯ ಸಹಾಯಕ್ಕೆ ಕ್ರಮ

**ಮಲ್ಲಮ್ಮ ನುಡಿ ವಾರ್ತೆ**



**ಬೀದರ:** ದಿನಾಂಕ 17-11-2025 ರಂದು ಸೌಧಿ ಅರೆಬಿಯಾದ ಮಕ್ಕಾದಿಂದ ಮದಿನಾಗೆ ಯಾತ್ರಿಕರು ಹೊಗುವಾಗ ಹೆದ್ದಾರಿಯಲ್ಲಿ ಬಸ್ ಹಾಗೂ ಟ್ಯಾಂಕರ್ ಮಧ್ಯೆ ಭೀಕರ ಅಪಘಾತ ಸಂಭವಿಸಿ ಬೀದರ ನಗರದ ಸಿ.ಎಂ.ಸಿ. ಕಾಲೋನಿಯ ರಹೆಮತ್.ಬಿ. (80) ಮೃತಪಟ್ಟಿದ್ದು, ಪೌರಾಡಳಿತ ಹಾಗೂ ಹಜ್ ಸಚಿವರಾದ ರಹೀಂ ಖಾನ್ ಅವರು ಸಂತಾಪ ಸೂಚಿಸಿದ್ದಾರೆ.

ಸಚಿವರು ಉಮ್ರಾ ಯಾತ್ರಿಕರ ಕುಟುಂಬ ಸದಸ್ಯರೊಂದಿಗೆ ಮಾತನಾಡಿ ಮತ್ತು ಪ್ರತಿ ದೂರವಾಣಿ ಕರೆಗೆ ಸಹಾಯ ನೀಡಲಾಗುವುದೆಂದು ಭರವಸೆ ನೀಡಿದರು. ಹಾಗೂ ರಾಜ್ಯ ಸರ್ಕಾರವು ಮೃತಪಟ್ಟ ಕುಟುಂಬಗಳನ್ನು ಬೆಂಬಲಿಸಲು ಎಲ್ಲ ಪ್ರಯತ್ನಗಳನ್ನು ಮಾಡುತ್ತಿದೆ ಎಂದು ಸಹ ತಿಳಿಸಿದರು.

ನಾವು ಸೌದಿ ಅಧಿಕಾರಿಗಳೊಂದಿಗೆ ಸಂಪರ್ಕದಲ್ಲಿದ್ದು ಮತ್ತು ಸಾಧ್ಯವಿರುವ ಎಲ್ಲ ಸಹಾಯವನ್ನು ನೀಡುತ್ತಿದ್ದೇವೆ ಹಾಗೂ ಅವರ ಸಂಬಂಧಿಕರಿಗೆ ಸಹಾಯ ಮಾಡುವುದು ನಮ್ಮ ಆದ್ಯತೆಯಾಗಿದೆ ಎಂದು ಅವರು ತಿಳಿಸಿದರು.

# ಸಂಪುಟ ಪುನಾರಚನೆ ಸಂಕಟ

## ಮಲ್ಲಿಕಾರ್ಜುನ ಖರ್ಗೆ ಜಾಣ ನಡೆ, ರಾಹುಲ್ ಗೆಹೊಣೆ, ಸಿಎಂ ಪರ ಹರಿಪ್ರಸಾದ್ ಬ್ಯಾಟ್

**ಮಲ್ಲಮ್ಮ ನುಡಿ ವಾರ್ತೆ**

**ಬೆಂಗಳೂರು:** ಸಚಿವಸಂಪುಟ ಪುನಾರಚನೆ ಚರ್ಚೆ ರಾಜ್ಯ ರಾಜಕಿಯದಲ್ಲಿ ಮತ್ತೆ ಚರ್ಚೆಗೆ ಗ್ರಾಸವಾಗಿದೆ ದೆಹಲಿಯಲ್ಲಿ ರಾಹುಲ್ ಗಾಂಧಿ ಮತ್ತು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಸಿಎಂ ಸಿದ್ದರಾಮಯ್ಯ ಭೇಟಿಆಗಿದ್ದಾರೆ. ಖರ್ಗೆ ಜೊತೆಗಿನ ಮಾತುಕತೆ ವೇಳೆ ಸಂಪುಟ ಪುನಾರಚನೆ ಬಗ್ಗೆ ತಮ್ಮ ಅಭಿಪ್ರಾಯ ತಿಳಿಸಿರುವ ಸಿಎಂ, ಸಂಪುಟ ಪುನಾರಚನೆಗೆ ಒಪ್ಪಿಗೆ ನೀಡುವಂತೆ ಮನವಿ ಮಾಡಿದ್ದಾರೆ. ಈ ನಡುವೆ ಡಿಕೆ ಶಿವಕುಮಾರ್ ಸಂಪುಟ ಪುನಾರಚನೆಗೆ ವಿರೋಧ ವ್ಯಕ್ತಪಡಿಸಿದ್ದು, ನಾಯಕತ್ವ ಬದಲಾವಣೆಗೆ ಸಂಬಂಧಿಸಿದಂತೆ ಗೊಂದಲ ಬಗೆಹರಿಸಿ ಎಂದು ಪಟ್ಟು ಹಿಡಿದಿದ್ದಾರೆ.

### ರಾಹುಲ್ ತೀರ್ಮಾನವೆ ಅಂತಿಮ

ಹೀಗಾಗಿ ಸಂಪುಟ ಪುನಾರಚನೆಯ ಬಗ್ಗೆ ಸ್ಪಷ್ಟವಾದ ಸೂಚನೆ ಸಿದ್ದರಾಮಯ್ಯ ಅವರಿಗೆ ಇನ್ನೂ ಸಿಕ್ಕಿಲ್ಲ. ರಾಹುಲ್ ಗಾಂಧಿ ಜೊತೆಗೆ ಒಂದು ಸುತ್ತಿನ ಚರ್ಚೆಯನ್ನು ನಡೆಸಿ ಅಂತಿಮ ನಿರ್ಧಾರಕ್ಕೆ ಮಲ್ಲಿಕಾರ್ಜುನ ಖರ್ಗೆ ಅವರು ಬರುವ ಸಾಧ್ಯತೆ ಇದೆ. ರಾಹುಲ್ ಗಾಂಧಿ ಸಂಪುಟ ಪುನಾರಚನೆಗೆ ಬಹುತೇಕ ಒಪ್ಪಿಗೆ ಸೂಚಿಸಿದ್ದಾರೆ. ಆದರೆ, ಖರ್ಗೆ ಜೊತೆಗಿನ ಅವರ ಮಾತುಕತೆ ಮಹತ್ವ ಪಡೆದುಕೊಳ್ಳಲಿದೆ. ಈ ಮಾತುಕತೆ ಫಲಶ್ರುತಿ ಏನು ಎಂಬುವುದೇ ಕುತೂಹಲ.



### ಖರ್ಗೆ ಜೊತೆ ಸಿಎಂ ಚರ್ಚೆ

ಸಿದ್ದರಾಮಯ್ಯ ದೆಹಲಿಯಿಂದ ಶನಿವಾರ ವಾಪಸ್ ಆಗಿ ಮತ್ತೊಮ್ಮೆ ದೆಹಲಿಗೆ ತೆರಳಿದ್ದರು. ದೆಹಲಿಯಲ್ಲಿ ಅವರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರು. ಈ ಸಂದರ್ಭದಲ್ಲಿ ಸಂಪುಟ ಪುನಾರಚನೆಯ ಕುರಿತಾಗಿ ಪ್ರಸ್ತಾಪ ಮಾಡಿದ್ದಾರೆ. ಸಿದ್ದರಾಮಯ್ಯ ಅವರ ಮಾತನ್ನ ಸುದೀರ್ಘವಾಗಿ ಆಲಿಸಿದ ಖರ್ಗೆ, ರಾಹುಲ್ ಗಾಂಧಿ ಜೊತೆಗೆ ಚರ್ಚೆ ನಡೆಸಿ ಅಂತಿಮ ತೀರ್ಮಾನ ಕೈಗೊಳ್ಳುವುದಾಗಿ ತಿಳಿಸಿದ್ದಾರೆ.



### ಸಿಎಂಗೆ ದನಿಯಾದ ಬಿ.ಕೆ

ಒಂದು ಕಾಲಕ್ಕೆ ಹಾವು ಮುಂಗಸಿಯಂತಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಬಿ.ಕೆ. ಹರಿಪ್ರಸಾದ ನಡುವೆ ಇದೀಗ ಒಪ್ಪಂದ ಆದಂತಿದೆ ಸಂಪುಟ ಪುನಾರಚನೆ ವಿಷಯವಾಗಿ ಬಿ.ಕೆ. ಹರಿಪ್ರಸಾದರವರು ಮುಖ್ಯಾಮಂತ್ರಿ ಸಿದ್ದರಾಮಯ್ಯ ಪರ ಬ್ಯಾಟ ಬಿಸಿರುವುದು ರಾಜ್ಯ ರಾಜಕಿಯದ ಕುತುಹಲಕ್ಕೆ ಕಾರಣವಾಗಿದೆ. ಮುಖ್ಯಾಮಂತ್ರಿ ಸಿದ್ದರಾಮಯ್ಯರವರು ಅಹಿಂದ ಅಗ್ರಗಣ್ಯ ನಾಯಕರಾಗಿದ್ದಾರೆ ಎಂದು ಹೇಳಿರುವುದು ಗಮನ ಸೇಳೆದಿದೆ.



### ಕೊಟ್ಟ ಮಾತು ತಪ್ಪುವುದು ಬೇಡ

ಇದೇ ಸಂದರ್ಭದಲ್ಲಿ ಡಿಸಿಎಂ ಡಿಕೆ ಶಿವಕುಮಾರ್ ಹಾಗೂ ಅವರ ಸಹೋದರ ಡಿಕೆ ಸುರೇಶ್ ಅವರು ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿದ್ದಾರೆ. ಖರ್ಗೆ ಜೊತೆಗೆ ಸುಮಾರು 1 ಗಂಟೆಗಳ ಕಾಲ ಮಾತುಕತೆ ನಡೆಸಿದ್ದಾರೆ. ಈ ಸಂದರ್ಭದಲ್ಲಿ ಅವರು ನಾಯಕತ್ವ ಬದಲಾವಣೆ ವಿಚಾರವಾಗಿ ಸೂಕ್ತ ನಿರ್ಧಾರಕ್ಕೆ ಬರುವಂತೆ ಆಗ್ರಹಿಸಿದ್ದಾರೆ. ಎರಡುವರೆ ವರ್ಷಗಳ ಹಿಂದೆ ದೆಹಲಿಯಲ್ಲಿ ಹೈಕಮಾಂಡ್ ನಾಯಕರ ಸಮ್ಮುಖದಲ್ಲಿ ನಡೆದ ಮಾತುಕತೆಯನ್ನು ಉಲ್ಲೇಖಿಸಿದ್ದಾರೆ. ಕೊಟ್ಟ ಮಾತನ್ನು ಉಳಿಸಿಕೊಳ್ಳುವಂತೆ ಅವರು ಪಟ್ಟು ಹಿಡಿದ್ದಾರೆ. ಸಂಪುಟ ಪುನಾರಚನೆ ಮಾಡುವುದಕ್ಕಿಂತ ಮೊದಲ ಈ ಕುರಿತಾಗಿ ಸೃಷ್ಟಿಯಾಗಿರುವ ಗೊಂದಲ ಬಗೆಹರಿಸಿ ಎಂದು ತಮ್ಮ ಬೇಡಿಕೆ ಇಟ್ಟಿದ್ದಾರೆ.

## ಊರಿಗೊಂದು ಸಹಕಾರಿ ಸಂಘವಿದ್ದರೆ ದೇಶದ ಅಭಿವೃದ್ಧಿ ಸಾಧ್ಯ: ಗುರುನಾಥ ಜ್ಯಾಂತಿಕರ್



**ಮಲ್ಲಮ್ಮ ನುಡಿ ವಾರ್ತೆ**

ಹುಮ್ನಾಬಾದ್: ಅಮುಲ್, ಕೆಎಮ್ಎಫ್, ಪ್ಯಾಕ್ಸ್ ಸಹಕಾರಿಗಳು, ಹಾಲು ಉತ್ಪಾದಕ ಸಹಕಾರಿ ಸಂಘಗಳು, ಮೀನುಗಾರಿಕಾ ಸಹಕಾರಿ ಸಂಘಗಳು, ಕೇಂದ್ರ ಸಹಕಾರಿ ಬ್ಯಾಂಕುಗಳು, ಭೂ ಅಭಿವೃದ್ಧಿ ಬ್ಯಾಂಕುಗಳು, ಸೌಹಾರ್ದ ಸಹಕಾರಿ ಸಂಘಗಳು, ಹೀಗೆ ಇಡಿ ಸಮಸ್ತ ಸಹಕಾರಿ ಕ್ಷೇತ್ರವನ್ನು ಉದಾಹರಣೆಗೆ ತೆಗೆದುಕೊಂಡು, ಆತ್ಮನಿರ್ಭಾರ ಭಾರತದ ಗುರಿ ತಲುಪಲು ಸಹಕಾರ ಸಂಸ್ಥೆಗಳು ಮುಂದಾಗಲು ಪ್ರಮುಖ ಪಾತ್ರವನ್ನು ನಿರ್ವಹಿಸುತ್ತಿವೆ. ಸಹಕಾರ ಸಂಸ್ಥೆಗಳು ಆರ್ಥಿಕ ಸ್ವಾವಲಂಬನೆ ಸುಸ್ಥಿರ ಅಭಿವೃದ್ಧಿ ಸ್ಥಳೀಯ ಸಂಸ್ಥೆಗಳ ಪ್ರಕ್ರಿಯೆ ಯಶಸ್ಸಿಗೆ ಕಾರಣವಾಗಲಿದೆ ಎಂದು ಪಟ್ಟಣದ ಮಾಣಿಕನಗರ ಗ್ರಾಮಕ್ಕೆ ತೆರಳುವ ಮಾರ್ಗದಲ್ಲಿರುವ ಶ್ರೀ ವೀರಭದ್ರೇಶ್ವರ ಚಿತ್ರಕಲಾ ಮಹಾವಿದ್ಯಾಲದ ಆವರಣದಲ್ಲಿ ಹಮ್ಮಿಕೊಂಡಿದ್ದ 72ನೇ ಅಖಿಲ ಭಾರತ ಸಹಕಾರ ಸಪ್ತಾಹ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಾ ನುಡಿದರು. ಊರಿಗೊಂದು ಸಹಕಾರಿ ಸಂಘವಿದ್ದರೆ ದೇಶದ ಅಭಿವೃದ್ಧಿ ಸಾಧ್ಯ ಎಂಬುದನ್ನು ಮನಗೊಂಡ ಮಾಜಿ ಪ್ರಧಾನಿ ಜವಹಾರ್ ಲಾಲ್ ನೆಹರು ಈ ಪರಿಕಲ್ಪನೆಯನ್ನು ಹುಟ್ಟುಹಾಕಿದರು. ಹಾಗೂ ಸಹಕಾರ ಕ್ಷೇತ್ರದ ಅಭಿವೃದ್ಧಿಗಾಗಿ ನೆಹರೂ ಅವರು ಪಂಚವಾರ್ಷಿಕ ಯೋಜನೆಗಳನ್ನು ಜಾರಿಗೆ ತಂದಿದ್ದರು. ಆ ಮೂಲಕ, ಸಹಕಾರ ಕ್ಷೇತ್ರಕ್ಕೆ ವಿಶೇಷ ಪ್ರೋತ್ಸಾಹ ಮತ್ತು ನೆರವು ನೀಡಿದ್ದರು. ಸಹಕಾರ ಕ್ಷೇತ್ರ ಬಲಗೊಳಿಸಿದ ನೆಹರೂ ಅವರ ಸ್ಮರಣಾರ್ಥ ಅಖಿಲ ಭಾರತ ಸಹಕಾರ ಸಪ್ತಾಹ ನಡೆಸಲಾಗುತ್ತಿದೆ ಅವರಿಗೆ ಕೃತಜ್ಞತೆ ಸೂಚಿಸುವ ನಿಟ್ಟಿನಲ್ಲಿ ಅವರ ಹುಟ್ಟುಹಬ್ಬವಾದ ನ.14 ರಿಂದ 20ರವರೆಗೆ ಕಾರ್ಯಕ್ರಮ 2ನೇ ಪುಟನೋಡಿ

## ಸೌದಿ ಬಸ್ ಅಪಘಾತ: ಮೃತ ಮಹಿಳೆ ಕುಟುಂಬಕ್ಕೆ 5 ಲಕ್ಷ ಪರಿಹಾರ ಘೋಷಣೆ



**ಮಲ್ಲಮ್ಮ ನುಡಿ ವಾರ್ತೆ**

**ಬೀದರ:** ಸೌದಿ ಅರೇಬಿಯಾದಲ್ಲಿ ಸೋಮವಾರ ಸಂಭವಿಸಿದ ಬಸ್ ಅಪಘಾತದಲ್ಲಿ ಮೃತಪಟ್ಟ ನಗರದ ಮಹಿಳೆಯ ಕುಟುಂಬಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು 5 ಲಕ್ಷ ಪರಿಹಾರ ಘೋಷಿಸಿದ್ದಾರೆ. ಸೌದಿಯಲ್ಲಿ ಬಸ್ ಅಪಘಾತ; ಬೀದರ್ ಮಹಿಳೆ ಸಾವು ಸೌದಿಯಲ್ಲಿ ಸೋಮವಾರ ಸಂಭವಿಸಿದ ಬಸ್ ಅಪಘಾತದಲ್ಲಿ ನಗರದ ಮೈಲೂರಿನ ಸಿಎಂಸಿ ಕಾಲೊನಿಯ ನಿವಾಸಿ ರಹಮತ್‌ಬೀ (80) ಮೃತಪಟ್ಟಿದ್ದರು. ಇವರು ಹೈದರಾಬಾದ್ ಮೂಲಕ ಸೌದಿಗೆ ಪ್ರಯಾಣ ಬೆಳೆಸಿದ್ದರು. ಸೌದಿ ಅರೇಬಿಯಾದ ಮಕ್ಕಾದಿಂದ ಮದೀನಾಕ್ಕೆ ಉಮ್ರಾ ಯಾತ್ರಿಕರನ್ನು ಕರೆದೊಯ್ಯುತ್ತಿದ್ದ ಬಸ್ ಟ್ಯಾಂಕರ್‌ಗೆ ಡಿಕ್ಕಿಯಾಗಿ ಹೊತ್ತಿ ಉರಿದ ಪರಿಣಾಮ ಅದರೊಳಗಿದ್ದ 45 ಮಂದಿ ಮೃತಪಟ್ಟಿದ್ದರು. ಅದೇ ಬಸ್ಸಿನಲ್ಲಿ ಬೀದರ್ ಮಹಿಳೆ ಕೂಡ ಪ್ರಯಾಣಿಸುತ್ತಿದ್ದರು.

’ಘಟನೆಯ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಜೊತೆ ಚರ್ಚಿಸಿದ್ದೇನೆ. ಅವರು ಆಘಾತ ವ್ಯಕ್ತಪಡಿಸಿದ್ದಾರೆ. ಮೃತರ ಕುಟುಂಬಕ್ಕೆ 5 ಲಕ್ಷ ಪರಿಹಾರ ಘೋಷಿಸಿದ್ದಾರೆ. ಮೃತರ ಕುಟುಂಬದವರೊಂದಿಗೆ ನಾನು ಮಾತನಾಡಿದ್ದೇನೆ. ಸೌದಿ ಅರೇಬಿಯಾದ ಅಧಿಕಾರಿಗಳೊಂದಿಗೆ ಸಂಪರ್ಕದಲ್ಲಿದ್ದು, ಎಲ್ಲಾ ರೀತಿಯ ಅಗತ್ಯ ನೆರವು ಕಲ್ಪಿಸಲಾಗುವುದು. ಮೃತದೇಹವನ್ನು ಬೀದರ್‌ಗೆ ತರಲು ಜಿಲ್ಲಾಡಳಿತಕ್ಕೆ ಸೂಚನೆ ಕೊಡಲಾಗಿದೆ’ ಎಂದು ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ತಿಳಿಸಿದ್ದಾರೆ. ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ್ ಗುಂಟಿ, ಬೀದರ್ ಮಹಾನಗರ ಪಾಲಿಕೆ ಆಯುಕ್ತ ಮುಕುಲ್ ಜೈನ್ ಅವರು ಮಂಗಳವಾರ ಮೃತ ಮಹಿಳೆಯ ಮನೆಗೆ ಭೇಟಿ ನೀಡಿ, ಕುಟುಂಬ ಸದಸ್ಯರಿಗೆ ಸಾಂತ್ವನ ಹೇಳಿದರು. ಮೃತದೇಹ ತರಲು ವ್ಯವಸ್ಥೆ ಮಾಡಲಾಗಿದೆ ಎಂದು ಹೇಳಿದರು.

## ಕಬ್ಬಿನ ದರ: ನಿರ್ದೇಶನ ಪಾಲಿಸುವಂತೆ ನಮೋಶಿ ಆಗ್ರಹ

**ಮಲ್ಲಮ್ಮ ನುಡಿ ವಾರ್ತೆ**



**ಕಲಬುರಗಿ:** ಕರ್ನಾಟಕ ರಾಜ್ಯದಲ್ಲಿ ಪ್ರತಿ ಟನ್ ಕಬ್ಬಿಗೆ ರೂ.3300 ದರ ಘೋಷಣೆ ಮಾಡಿರುವ ರಾಜ್ಯ ಸರ್ಕಾರದ ನಿರ್ದೇಶನವನ್ನು ಪಾಲಿಸಲು ಕಲಬುರಗಿ ಜಿಲ್ಲೆಯ ಸಕ್ಕರೆ ಕಾರ್ಖಾನೆಗಳು ಒಪ್ಪದೆ ಇರುವುದರಿಂದ ರೈತರು ಗೊಂದಲಕ್ಕೀಡಾಗಿದ್ದಾರೆ. ಈ ವಿದ್ಯಮಾನದಿಂದಾಗಿ ಕಬ್ಬು ಬೆಳೆಯುವ ರೈತರು ಪುನಃ ಹೋರಾಟಕ್ಕೆ ಧುಮುಕುವಂತೆ ಪ್ರೇರೇಪಿಸುವ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ ಎಂಬುದನ್ನು ಮುಖ್ಯಮಂತ್ರಿಗಳ ಗಮನಕ್ಕೆ ಪತ್ರ ಬರೆದು ವಿಧಾನ ಪರಿಷತ್ ಸದಸ್ಯ ಶಶೀಲ್ ನಮೋಶಿ ಕೂಡಲೆ ಆದೇಶ ಮಾಡಲು ಆಗ್ರಹಿಸಿದ್ದಾರೆ.

ರಾಜ್ಯದಲ್ಲಿ ಇತ್ತೀಚೆಗೆ ನಡೆದ ರೈತರ ಬಿರುಸಿನ ಹೋರಾಟದಿಂದಾಗಿ ತಾವು ಮಧ್ಯೆ ಪ್ರವೇಶಿಸಿರುವುದರಿಂದ ಕಬ್ಬಿನ

ಇಳುವರಿಯನ್ನು ಪರಿಗಣಿಸದೇ ಪ್ರತಿ ಟನ್ ಕಬ್ಬಿಗೆ ರಾಜ್ಯದ ಎಲ್ಲಾ ಕಾರ್ಖಾನೆಗಳು 3,250 ರೂ. ಹಾಗೂ ಇದಕ್ಕೆ

ರಾಜ್ಯ ಸರ್ಕಾರದಿಂದ 50 ರೂ. ಸೇರ್ಪಡೆ ಮಾಡಿ ಒಟ್ಟು 3,300ರೂ. ಗಳನ್ನು ನೀಡುವ ನಿರ್ಧಾರಕ್ಕೆ ಬರಲಾಗಿತ್ತು. ಆದರೆ ತಮ್ಮ ನಿರ್ದೇಶನಕ್ಕೆ ಕಲಬುರಗಿ ಜಿಲ್ಲೆಯ ಸಕ್ಕರೆ ಕಾರ್ಖಾನೆಗಳ ಮಾಲಿಕರು ಸಕಾರಾತ್ಮಕವಾಗಿ ಸ್ಪಂದಿಸದೆ ಕಲಬುರಗಿ ಜಿಲ್ಲಾಧಿಕಾರಿಗಳು ಹಾಗೂ ಗ್ರಾಮೀಣಾಭಿವೃದ್ಧಿ ಮತ್ತ ಪಂಚಾಯತ್ ರಾಜ್, ಐಟಿ, ಬಿಟಿ ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ರಾಜ್ಯ

ಸರ್ಕಾರದ ಆದೇಶವನ್ನು ಪರಿಗಣಿಸದೇ ಪ್ರತಿ ಟನ್ ಕಬ್ಬಿಗೆ ಕಾರ್ಖಾನೆಯಿಂದ 2,950 ರೂ. ಹಾಗೂ ಸರ್ಕಾರದಿಂದ 50ರೂ. ಒಟ್ಟು 3,000ರೂ. ಗಳನ್ನು ಮಾತ್ರ ನೀಡುವ ಬಗ್ಗೆ ನಿರ್ಣಯ ಕೈಗೊಂಡಿರುವುದು ಅತ್ಯಂತ ವಿಷಾಧನೀಯ ಸಂಗತಿಯಾಗಿದ್ದು. ಈ ಬೆಳವಣಿಗೆಯಿಂದಾಗಿ ಜಿಲ್ಲೆಯ ರೈತರು ಮತ್ತೊಮ್ಮೆ ಹೋರಾಟಕ್ಕೆ ಇಳಿಯುವ ಕುರಿತು ಚಿಂತನೆ ನಡೆಸಿದ್ದಾರೆ. ಹಾಗಾಗಿ, ಕಬ್ಬಿನ ದರ ಕುರಿತಂತೆ ತಾವು ಸಕ್ಕರೆ ಕಾರ್ಖಾನೆಗಳಿಗೆ ನೀಡಿರುವ ನಿರ್ದೇಶನವನ್ನು 2ನೇ ಪುಟನೋಡಿ

## ಕರ್ನಾಟಕವು ಜಾಗತಿಕ ತಂತ್ರಜ್ಞಾನ ಕ್ರಾಂತಿಯನ್ನು ಮುನ್ನಡೆಸುತ್ತಿದೆ: ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆ




**ಮಲ್ಲಮ್ಮ ನುಡಿ ವಾರ್ತೆ**

**ಬೆಂಗಳೂರು:** ಸರ್ಕಾರದ ಸ್ಪಷ್ಟ ನೀತಿಗಳು, ಸುಗಮ ಅನುಮತಿಗಳು, ಕೌಶಲ್ಯ, ಮೂಲಸೌಕರ್ಯ ಹಾಗೂ ಪೂರಕ ವಾತಾವರಣಗಳು, ಕರ್ನಾಟಕವನ್ನು ಭಾರತದ ಅತ್ಯಂತ ವಿಶ್ವಾಸಾರ್ಹ ಹೂಡಿಕೆ ತಾಣವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಅವರು ಇಂದು ವಿದ್ಯುನ್ಮಾನ, ಮಾಹಿತಿತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ, ಸಾಫ್ಟ್‌ವೇರ್ ಟೆಕ್ನಾಲಜೀ ಪಾರ್ಕ್ಸ್ ಆಫ್ ಇಂಡಿಯಾ, ಬೆಂಗಳೂರು ಇವರ ವತಿಯಿಂದ ಆಯೋಜಿಸಲಾದ ‘ಬೆಂಗಳೂರು ಟೆಕ್ ಸಮ್ಮಿಟ್’ 28ನೇ ಆವೃತ್ತಿಯನ್ನು ಉದ್ಘಾಟಿಸಿ ಮಾತನಾಡಿದರು.

ಈ ಶೃಂಗಸಭೆಯಲ್ಲಿ, ಕರ್ನಾಟಕ ಮಾಹಿತಿತಂತ್ರಜ್ಞಾನನೀತಿ 20252030, ಬಾಹ್ಯಾಕಾಶ ತಂತ್ರಜ್ಞಾನ ನೀತಿ 2025-2030, ಮತ್ತು ಸ್ಟಾರ್ಟ್‌ಅಪ್ ನೀತಿ 2025-2030 ಗಳಂತಹ ಮೂರು ಪ್ರಮುಖ ನೀತಿಗಳನ್ನು ರಚಿಸುವ ಮೂಲಕ ಐತಿಹಾಸಿಕ ಹೆಜ್ಜೆಯನ್ನು ಇಡಲಾಗಿದೆ. ದತ್ತಾಂಶ ಚಾಲಿತ ಹಾಗೂ ಆಧುನಿಕ ತಂತ್ರಜ್ಞಾನಕ್ಕೆ ಪೂರಕವಾದ ಕರ್ನಾಟಕ ಮಾಹಿತಿ ತಂತ್ರಜ್ಞಾನ ನೀತಿಯಿಂದ, ರಾಜ್ಯವನ್ನು 2ನೇ ಪುಟನೋಡಿ

## ನ.20ರಂದು 10ನೇ ಬಾರಿಗೆ ಬಿಹಾರ್ ಸಿಎಂ ಆಗಿ ನಿತೀಶ್ ಪ್ರಮಾಣ

# ಎಸ್.ಎಸ್.ಎಲ್.ಸಿ ಫಲಿತಾಂಶ ಸುಧಾರಣೆಗೆ ಶಿಕ್ಷಣ ಇಲಾಖೆಯಿಂದ ದಿಟ್ಟ ಹೆಜ್ಜೆ –ಬಸವರಾಜ ಶೆಟ್ಟಿ



**ಮಲ್ಲಮ್ಮ ನುಡಿ ವಾರ್ತೆ**

**ಕಲಬುರಗಿ:** ನ, ಪ್ರಸಕ್ತ ವರ್ಷ ಎಸ್.ಎಸ್.ಎಲ್.ಸಿ ಫಲಿತಾಂಶ ಸುಧಾರಣೆಗೆ ಶಿಕ್ಷಣ ಇಲಾಖೆ ದಿಟ್ಟ ಹೆಜ್ಜೆ ಕೈಗೊಂಡಿದ್ದು, ಅದಕ್ಕೆ ಪೂರಕವಾಗಿ ಶಿಕ್ಷಕರು ಅದನ್ನು ಅನುಷ್ಠಾನ ಮಾಡಬೇಕಿದೆ ಅಗತ್ಯವಿದೆ ಎಂದು ಕಲಬುರಗಿ ಡಯಟ್ ಉಪನಿರ್ದೇಶಕ ಬಸವರಾಜ ಶೆಟ್ಟಿ ಹೇಳಿದರು.

ಶನಿವಾರ ಜಿಲ್ಲೆಯ ಶಹಾಬಾದ ಪಟ್ಟಣದ ಸೇಂಟ್ ಥಾಮಸ್ ಶಾಲೆಯಲ್ಲಿ ಶಾಲಾ ಶಿಕ್ಷಣ ಇಲಾಖೆಯಿಂದ ಎಸ್.ಎಸ್.ಎಲ್.ಸಿ ಫಲಿತಾಂಶ ಸುಧಾರಣೆಗಾಗಿ ಆಯೋಜಿಸಲಾದ ವಿಷಯವಾರು ಶಿಕ್ಷಕರ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

ಕಳೆದ ವರ್ಷ ಫಲಿತಾಂಶದಲ್ಲಿ ಜಿಲ್ಲೆ ಇಳಿಕೆ ಕಂಡಿದ್ದು, ತಮಗೆ ತಿಳಿದಿರುವ ವಿಚಾರ. ಈ ವರ್ಷ ಅದು ಮರುಕಳಿಸಬಾರದು. ಈ ಬಾರಿ ನೂರಕ್ಕೆ ನೂರರಷ್ಟು ಫಲಿತಾಂಶ ಬರುವ ನಿಟ್ಟಿನಲ್ಲಿ ಶಿಕ್ಷಕರು ಕಾರ್ಯಪ್ರವೃತ್ತರಾಗಬೇಕು. ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ಹೆಚ್ಚಿನ ಒತ್ತು ನೀಡಬೇಕು. ಸಿ ಹಾಗೂ ಎನ್‌ಸಿ ವಿದ್ಯಾರ್ಥಿಗಳಿಗೆ 40 ಅಂಕಗಳನ್ನು ತೆಗೆದುಕೊಳ್ಳುವ ನಿಟ್ಟಿನಲ್ಲಿ ಕಾರ್ಯಯೋಜನೆ ರೂಪಿಸಲಾಗಿದ್ದು, ಅದನ್ನು ತಮ್ಮ ಶಾಲೆಯಲ್ಲಿ ಅನುಷ್ಠಾನಗೊಳಿಸಿದರೆ ಶೇ.100 ಫಲಿತಾಂಶ ಬರಲು ಸಾಧ್ಯವಾಗಲಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಚಿತ್ತಾಪೂರ ಕ್ಷೇತ್ರ ಶಿಕ್ಷಣಾಧಿಕಾರಿ ಶಶಿಧರ ಬಿರಾದಾರ ಮಾತನಾಡಿ, ಕಲಿಕೆಯಲ್ಲಿ ಹಿಂದುಳಿದ ಮಕ್ಕಳ ಪಟ್ಟಿ ಮಾಡಿ ಅಂತಹ ವಿದ್ಯಾರ್ಥಿಗಳಿಗೆ ವಿಶೇಷಗಮನ ಹರಿಸಬೇಕು. ಪರೀಕ್ಷೆಯಲ್ಲಿ ಬರಬಹುದಾದ ಸಂಭಾವ್ಯ ಪ್ರಶ್ನೆಗಳ ಬಗ್ಗೆ ತಿಳಿ ಹೇಳಬೇಕು. ಹಳೆ ಪ್ರಶ್ನೆಪತ್ರಿಕೆಗಳನ್ನು ಬಿಡಿಸಿ ವಿವರಿಸಬೇಕು ಮತ್ತು ವಿದ್ಯಾರ್ಥಿಗಳು ಸಲಭವಾಗಿ ಕಲಿಯುವಂತೆ ಮತ್ತು ಅರ್ಥವಾಗುವಂತೆ ಕಲಿಕಾ ವಿಧಾನದಲ್ಲಿ ತಿಳಿಸಬೇಕು. ಹೀಗೆ ಮಾಡುವ ಮೂಲಕ ಈ ಬಾರಿ ನೂರಕ್ಕೆ ನೂರರಷ್ಟು ಫಲಿತಾಂಶ ತರುವ ನಿಟ್ಟಿನಲ್ಲಿ ಎಲ್ಲಾ ಶಿಕ್ಷಕರು ಕಾರ್ಯಪ್ರವೃತ್ತರಾಗಬೇಕು ಎಂದು ಕರೆ ನೀಡಿದರು.

ಕಾರ್ಯಾಗಾರದಲ್ಲಿ ಭಾಗವಹಿಸಿದ ಸಂಪನ್ಮೂಲ ವ್ಯಕ್ತಿಗಳು, ಆರು ವಿಷಯಗಳ ಕುರಿತು ಶಿಕ್ಷಕರಿಗೆ ಪ್ರೊಜೆಕ್ಟರ ಸ್ಕ್ರೀನ್ ಮೂಲಕ ಪ್ರಾತ್ಯಕ್ಷಿಕೆ ಮೂಲಕ ತರಬೇತಿ ನೀಡಲಾಯಿತು.

ಕಲಬುರಗಿ ಡಯಟ್‌ನ ಉಪನ್ಯಾಸಕರಾದ ಡಾ.ಲಿಂಗರಾಜ ಮೂಲಿಮನಿ, ಪ್ರಕಾಶ ನಾಯ್ಕೋಡಿ, ಸುಮಂಗಲಾ ವೇದಿಕೆಯ ಮೇಲಿದ್ದರು. ಇಸಿಓ ಅಬ್ಬಿಗೇರಿ ಶರಣಪ್ಪ ನಿರೂಪಿಸಿದರು, ಸುಜಾತಾ ಹಿರೇಮಠ ಪ್ರಾರ್ಥಿಸಿದರು, ಕ್ಷೇತ್ರ ಸಮನ್ವಯಾಧಿಕಾರಿ ಮಲ್ಲಿಕಾರ್ಜುನ ಸೇಡಂ ಸ್ವಾಗತಿಸಿದರು, ಇಸಿಓ ರವೀಂದ್ರ ವಂದಿಸಿದರು.

# ರಾಜ್ಯದ ವೈದ್ಯಕೀಯ ಶಿಕ್ಷಣ ಸಚಿವರ ಮುಂದುವರೆದ ಪ್ರವಾಸ

**ಮಲ್ಲಮ್ಮ ನುಡಿ ವಾರ್ತೆ**

**ಕಲಬುರಗಿ:** ನ,ರಾಜ್ಯದ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರಾದ ಡಾ. ಶರಣಪ್ರಕಾಶ ಆರ್. ಪಾಟೀಲ್ ಅವರು ನವೆಂಬರ್ 19 ರಂದು ಬುಧವಾರ ಕಲಬುರಗಿಯಲ್ಲಿ ಸ್ಥಳೀಯ ಕಾರ್ಯಕ್ರಮದಲ್ಲಿ ಭಾಗವಹಿಸಿ ವಾಸ್ತವ್ಯ ಮಾಡುವರು. ನವೆಂಬರ್ 20 ರಂದು ಗುರುವಾರ ಬೆಳಿಗ್ಗೆ 4.30 ಗಂಟೆಗೆ ಕಲಬುರಗಿಯಿಂದ ರಸ್ತೆ ಮೂಲಕ ಬೀದರಿಗೆ ಪ್ರಯಾಣಿಸಿ, ಬೆಳಿಗ್ಗೆ 7.30 ಗಂಟೆಗೆ ಬೀದರದಿಂದ ವಿಮಾನದ ಮೂಲಕ ಬೆಂಗಳೂರಿಗೆ ಪ್ರಯಾಣಿಸುವರು.

# ವಿಶ್ವ ವಿಕಲಚೇತನ ದಿನಾಚರಣೆ ಪ್ರಯುಕ್ತ ನ. 24 ರಂದು ವಿವಿಧ ಸ್ಪರ್ಧೆಗಳು

**ಮಲ್ಲಮ್ಮ ನುಡಿ ವಾರ್ತೆ**

**ಕಲಬುರಗಿ:** ನ.ವಿಶ್ವ ವಿಕಲಚೇತನರ ದಿನಾಚರಣೆ–2025ರ ಪ್ರಯುಕ್ತ ಇದೇ ನವೆಂಬರ್ 24 ರಂದು ಕಲಬುರಗಿ ನಗರದ ಚಂದ್ರಶೇಖರ ಪಾಟೀಲ ಜಿಲ್ಲಾ ಕ್ರೀಡಾಂಗಣದಲ್ಲಿ ವಿಕಲಚೇತನರಿಗಾಗಿ ಜಿಲ್ಲಾಮಟ್ಟದ ಕ್ರೀಡಾ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಕಲಬುರಗಿ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ತಿಳಿಸಿದ್ದಾರೆ.

ಕ್ರೀಡಾ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳ ವಿವರ ಇಂತಿದೆ. 18 ವರ್ಷ ಮೇಲ್ಪಟ್ಟ ವಯೋಮಾನದವರಿಗೆ ದೈಹಿಕ ವಿಕಲಚೇತನ ವಿಭಾಗದಲ್ಲಿ 100 ಮೀಟರ್ ಓಟ, ಗುಂಡು ಎಸೆತ, ಬಕೇಟ್‌ನಲ್ಲಿ ರಿಂಗ್ ಹಾಕುವ ಸ್ಪರ್ಧೆ, ವಯೋಮಿತಿ 6 ರಿಂದ 17 ವರ್ಷದ ದೈಹಿಕ ವಿಕಲಚೇತನರಿಗೆ 100 ಮೀಟರ್ ಓಟ, ಗುಂಡು ಎಸೆತ, ಥ್ರೋಬಾಲ ಎಸೆತ ಸ್ಪರ್ಧೆ, 18 ವರ್ಷ ಮೇಲ್ಪಟ್ಟ ದೃಷ್ಠಿದೋಷ ವಿಕಲಚೇತನ ವಿಭಾಗದಲ್ಲಿ 50 ಮೀಟರ್ ಅಂಧರ ಕೆನ ನಡಿಗೆ, ಗುಂಡು ಎಸೆತ, ಮ್ಯೂಜಿಕಲ್ ಚೇರ್ ಸ್ಪರ್ಧೆಗಳು, 6 ರಿಂದ 17 ವರ್ಷದ ದೃಷ್ಠಿದೋಷ ವಿಕಲಚೇತನರಿಗೆ 50 ಮೀಟರ್ ಅಂ–ಧರ ಕೆನ ನಡಿಗೆ, ಗುಂಡು ಎಸೆತ, ಕೆರೆದಡ ಸ್ಪರ್ಧೆ, 18 ವರ್ಷ ಮೇಲ್ಪಟ್ಟ ಶ್ರವಣದೋಷವುಳ್ಳ ವಿಕಲಚೇತನರಿಗೆ 100 ಮೀಟರ್ ಓಟ, ಗುಂಡು ಎಸೆತ, ಉದ್ದ ಜಿಗಿತ ಸ್ಪರ್ಧೆ, 6 ರಿಂದ 17 ವರ್ಷದ ಶ್ರವಣದೋಷವುಳ್ಳ ವಿಕಲಚೇತನರಿಗೆ 100 ಮೀಟರ್ ಓಟ, ಗುಂಡು ಎಸೆತ, ಉದ್ದ ಜಿಗಿತ ಸ್ಪರ್ಧೆ ಹಾಗೂ ಸಾಂಸ್ಕೃತಿಕ ಸ್ಪರ್ಧೆ, ಗಾಯನ ಸ್ಪರ್ಧೆ, ಏಕಪಾತ್ರ ಅಭಿನಯ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿದೆ.

ಆಸಕ್ತಿಯುಳ್ಳ ಅರ್ಹ ವಿಕಲಚೇತನರು ಹೆಚ್ಚಿನ ಸಂಖ್ಯೆಯಲ್ಲಿ ಕ್ರೀಡೆ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಭಾಗವಹಿಸಬೇಕು. ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ ದೂರವಾಣಿ ಸಂಖ್ಯೆ 08472–235222, ಪ್ರಕಾಶ ಜಾಧವ–9972563646 ಹಾಗೂ ಸ್ವಪ್ನ ಪಾಟೀಲ ಇವರ ಮೊಬೈಲ್ ಸಂಖ್ಯೆ 7411612044ಕ್ಕೆ ಕಚೇರಿ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

# ಸರ್ಕಾರ ಹೂಗಾರ ನಿಗಮ ಮಂಡಳಿಗೆ ಅನುಮೋದನೆ ನೀಡಬೇಕು :– ಶಂಕರ ಹೂಗಾರ.




**ಮಲ್ಲಮ್ಮ ನುಡಿ ವಾರ್ತೆ**

**ಬಸವಕಲಾಣ:** ನ.ಬೊಮ್ಮಾಯಿ ಸರ್ಕಾರದ ಅವಧಿಯಲ್ಲಿ ಹೂಗಾರ ಅಭಿವೃದ್ಧಿ ನಿಗಮ ಘೋಷಣೆಯಾಗಿದ್ದು, ಇಂದಿಗೂ ನೆನೆಗುದಿಗೆ ಬಿದ್ದಿದೆ. ಹೂಗಾರ ಸಮಾಜದ ಶೈಕ್ಷಣಿಕ ಪ್ರಗತಿಗಾಗಿ ಕೂಡಲೆ ಸರಕಾರ ಹೂಗಾರ ನಿಗಮ ಮಂಡಳಿಗೆ ಅನುಮೋದನೆ ನೀಡಬೇಕು ಎಂದು ಹೂಗಾರ ಸಮಾಜದ ರಾಜ್ಯಾಧ್ಯಕ್ಷರಾದ ಶಂಕರ ಹೂಗಾರ ಒತ್ತಾಯಿಸಿದ್ದಾರೆ.

ಇಲ್ಲಿನ ಅನುಭವ ಮಂಟಪದಲ್ಲಿ ಹೂಗಾರ ಸಮಾಜದ ಮುಖಂಡರ ಸಭೆ ಹಾಗೂ ನೂತನ ಜಿಲ್ಲಾಧ್ಯಕ್ಷರ ಆಯ್ಕೆ ಸಭೆಯಲ್ಲಿ ಮಾತನಾಡಿದ ಅವರು, ಗ್ರಾಮೀಣ ಭಾಗದಲ್ಲಿ ಹೂವು ಪತ್ರೆ ನೀಡಿ ಉಪಜೀವನ ನಡೆಸುತ್ತಿರುವ ಹೂಗಾರ್ ಸಮಾಜವನ್ನು ಮುಖ್ಯವಾಹಿನಿಗೆ ತರಬೇಕಾಗಿದೆ. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಹಿಂದುಳಿದ ಹೂಗಾರ್ ಸಮಾಜವನ್ನು ಗುರುತಿಸಿ ಕೂಡಲೆ ಹೂಗಾರ್ ಅಭಿವೃದ್ಧಿ ನಿಗಮವನ್ನು ಅಧಿಕೃತವಾಗಿ ಕಾರ್ಯಕ್ರಮ ಮಾಡಬೇಕೆಂದು ಒತ್ತಾಯಿಸಿದರು.

ಈ ಹಿಂದೆ ಹೂಗಾರ್ ಸಮಾಜದ ಅನೇಕರು ಲಿಂಗಾಯತ್ ಹೂಗಾರೆಂದು ದಾಖಲೆಗಳಲ್ಲಿ ನಮೂದಿಸಿಕೊಂಡಿದ್ದು, ಈ ಕುರಿತು ನ್ಯಾಯಾಲಯದಲ್ಲಿ ದಾವೆ ಹೋಡಲಾಗುತ್ತಿದ್ದು, ಲಿಂಗಾಯತ್ ಹೂಗಾರ್ ಬದಲಿಗೆ ಹಿಂದೂ ಹೂಗಾರ ಎಂದು ಬದಲಿಸುವಂತೆ ನ್ಯಾಯಾಲಯಕ್ಕೆ ಮನವಿ ಸಲ್ಲಿಸಲಾಗುತ್ತಿದೆ. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಪ್ರವಾಸ ಮಾಡುತ್ತಿದ್ದು, ಹೂಗಾರ್ ಸಮಾಜವನ್ನು ಒಗ್ಗೂಡಿಸುವ ಕೆಲಸ ಮಾಡುತ್ತಿದ್ದೇನೆ. ಬೀದರ್ ಜಿಲ್ಲೆಯಲ್ಲಿ ಹೂಗಾರ್ ಸಮಾಜದ ನೂತನ ಜಿಲ್ಲಾಧ್ಯಕ್ಷರಾಗಿ ರಾಜಕುಮಾರ್ ಮದಕಟ್ಟಿ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಗಿದೆ. ಜಿಲ್ಲೆಯ ಎಲ್ಲಾ ಸಕ್ರಿಯ ಪದಾಧಿಕಾರಿಗಳನ್ನು ಗುರುತಿಸಿಕೊಂಡು ಕೊಡಗಬೇಕೆಂದು ತಿಳಿಸಿದರು. ಬೀದರ ಜಿಲ್ಲಾ ನೂತನ ಅಧ್ಯಕ್ಷರಾಗಿ ರಾಜಕುಮಾರ ಮದಕಟ್ಟಿ ಅವರನ್ನು ಆಯ್ಕೆಮಾಡಿ ಸನ್ಮಾನಿಸಲಾಯಿತು.ಸಮಾಜದ ಮುಖ್ಯಂಡರಾದ ಅಫಜಲಪುರದ ಅಶೋಕ ಹೂಗಾರ, ಲಿಂಗಸೂರ ಅಧ್ಯಕ್ಷ ಮಲ್ಲಣ್ಣ ಹೂಗಾರ, ಚಿಟಗುಪ್ಪ ರೇವಣ್ಣಪ್ಪ ಹೂಗಾರ, ಬಸವಕಲ್ಯಾಣ ವಿಠಲ ಹೂಗಾರ, ರಾಜಕುಮಾರ ಹೂಗಾರ ಭಾಲ್ಕಿ, ಕಾಶೀನಾಥ್ ಹೂಗಾರ ಬೀದರ,ಶಿವಪುತ್ರ ಹೂಗಾರ ಖೇಳಗಿ, ರಾಜಕುಮಾರ ಹೂಗಾರ,ರಾಜಕುಮಾರ ಗೌರ್,ದುರ್ಯೋಧನ ಹೂಗಾರ, ಲಕ್ಷ್ಮಿವಾಯಿ ಪಾಟೀಲ, ವಿಜಯಲಕ್ಷ್ಮಿ ಹೂಗಾರ, ರೇಖಾ ಹೂಗಾರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ನವೆಂಬರ್ 21 ರಂದು ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ

**ಮಲ್ಲಮ್ಮ ನುಡಿ ವಾರ್ತೆ**

**ಕಲಬುರಗಿ:** ನ.ಕಲಬುರಗಿ ಜೆಸ್ಕಾಂ ಕಾರ್ಯ ಮತ್ತು ಪಾಲನೆ ವಿಭಾಗ–2ರ ವತಿಯಿಂದ ಪ್ರಸ್ತುತ 110/33/11ಕೆ.ವಿ. ನಾಲವಾರ ವಿದ್ಯುತ್ ಉಪ–ಕೇಂದ್ರದಲ್ಲಿ ಮೆಂಟೇನನ್ಸ್ ಕಾರ್ಯಕೈಗೊಳ್ಳಬೇಕಾಗಿರುವ ಹಿನ್ನೆಲೆಯಲ್ಲಿ ಇದೇ ನವೆಂಬರ್ 21 ರಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 3 ಗಂಟೆಯವರೆಗೆ ವಿದ್ಯುತ್ ಸಂಪರ್ಕ ಕಡಿತಗೊಳಿಸಲಾಗುತ್ತಿದ್ದು, ಕೆಳಕಂಡ ಗ್ರಾಮಗಳಿಗೆ ಸಾರ್ವಜನಿಕರು ಇದಕ್ಕೆ ಸಹಕರಿಸಬೇಕೆಂದು ಕಲಬುರಗಿ ಜೆಸ್ಕಾಂ ಕಾರ್ಯ ಮತ್ತು ಪಾಲನೆ ವಿಭಾಗ–2ರ ಕಾರ್ಯನಿರ್ವಾಹಕ ಅಭಿಯಂತರರು ತಿಳಿಸಿದ್ದಾರೆ.

ಶಹಾಬಾದ ಉಪವಿಭಾಗದ 110/33/11 ಕೆ.ವಿ ನಾಲವಾರ ವಿದ್ಯುತ್ ವಿತರಣಾ ಕೇಂದ್ರ: ಚಿತ್ತಾಪೂರ ತಾಲೂಕಿನ ನಾಲವಾರ (ಐ.ಪಿ), ತರಕಸಪೇಟ್, ಸನ್ನತ್ತಿ, ಯರಗೋಳ, (ಐ.ಪಿ), ಕೊಂಚೂರ, ಕುಂಬಾರಹಳ್ಳಿ, ರಾಂಪುರಳ್ಳಿ (ಐ.ಪಿ), ಕೊಲ್ಲೂರ (ಐ.ಪಿ) ಗ್ರಾಮ




ಕಲಬುರಗಿ: ನಗರದ ಸೂಪರ ಮಾರ್ಕೆಟ್‌ನಲ್ಲಿರುವ ಕೃಷ್ಣಭೀಮ ಸಮೃದ್ಧಿ ಲೋಕಲ್ ಏರಿಯಾ ಬ್ಯಾಂಕಿನ 25ನೇ ವರ್ಷದ ವಾರ್ಷಿಕೋತ್ಸವವನ್ನು ಗುಲಬರ್ಗಾ ವಕೀಲರ ಸಂಘದ ಅಧ್ಯಕ್ಷರಾದ ಎಸ್.ವಿ.ಪಸಾರ ಅವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಬ್ಯಾಂಕಿನ ಎಜಿಎಂ ಚಂದ್ರಕಾಂತ ಕುಲಕರ್ಣಿ, ಮಧುಸುಧನರಾವ, ಶ್ರೀನಿವಾಸ ಸಿರನೂರಕರ್, ರವಿಂದ್ರ ಪಾಟೀಲ ಕೆಎಸ್‌ಆರ್‌ಟಿಸಿ, ಚಿದಂಬರಾವ ಪಾಟೀಲ, ಗಂಗಾಧರ ಪಾಟೀಲ, ಎಂ.ಎನ್.ಪಾಟೀಲ ನ್ಯಾಯವಾದಿಗಳು, ಉದಯಕುಮಾರ ಉಪ್ಪಿನ್ ಸೇರಿದಂತೆ ಬ್ಯಾಂಕಿನ್ ಸಿಬ್ಬಂದಿ ವರ್ಗದವರು ಇದ್ದರು.

# ನವೆಂಬರ್ 24ಕ್ಕೆ ಹಾಪಕಾಮ್ಸ್ ವಿಶೇಷ ವಾರ್ಷಿಕ ಮಹಾಸಭೆ

**ಮಲ್ಲಮ್ಮ ನುಡಿ ವಾರ್ತೆ**

**ಕಲಬುರಗಿ:** ನ. ಕಲಬುರಗಿ–ಯಾದಗಿರಿ ಹಾಪಕಾಮ್ಸ್ (ನಿ) ಇದರ ವಿಶೇಷ ವಾರ್ಷಿಕ ಮಹಾಸಭೆಯು ಸಂಘದ ಅಧ್ಯಕ್ಷ ಗುರುಶಾಂತ ವಿ. ಪಾಟೀಲ ಅವರ ಅಧ್ಯಕ್ಷತೆಯಲ್ಲಿ ಇದೇ ನವೆಂಬರ್ 24 ರಂದು ಬೆಳಿಗ್ಗೆ 11.30 ಗಂಟೆಗೆ ಸಂಘದ ಕಛೇರಿ ಆವರಣದಲ್ಲಿ ನಡೆಯಲಿದ್ದು, ಸಭೆಗೆ ಸಂಘದ ಎಲ್ಲಾ ಸದಸ್ಯರುಗಳು ಭಾಗವಹಿಸಬೇಕೆಂದು ವ್ಯವಸ್ಥಾಪಕ ನಿರ್ದೇಶಕ ಅನೀಲ ರಾಠೋಡ ತಿಳಿಸಿದ್ದಾರೆ.

# ನವೆಂಬರ್ 19 ರಂದು ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ

**ಮಲ್ಲಮ್ಮ ನುಡಿ ವಾರ್ತೆ**

**ಕಲಬುರಗಿ:** ನ.ಕಲಬುರಗಿ ಜೆಸ್ಕಾಂ ಕಾರ್ಯ ಮತ್ತು ಪಾಲನೆ ವಿಭಾಗ–2ರ ವತಿಯಿಂದ ಪ್ರಸ್ತುತ 110ಕೆ.ವಿ ವಾಡಿ ವಿತರಣಾ ಕೇಂದ್ರದಲ್ಲಿ ಮೆಂಟೇನನ್ಸ್ ಕೈಗೊಳ್ಳಬೇಕಾಗಿರುವ ಹಿನ್ನೆಲೆಯಲ್ಲಿ ಇದೇ ನವೆಂಬರ್ 19 ರಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 3 ಗಂಟೆಯವರೆಗೆ ವಿದ್ಯುತ್ ಸಂಪರ್ಕ ಕಡಿತಗೊಳಿಸಲಾಗುತ್ತಿದ್ದು, ಕೆಳಕಂಡ ಗ್ರಾಮಗಳ ಸಾರ್ವಜನಿಕರು ಇದಕ್ಕೆ ಸಹಕರಿಸಬೇಕೆಂದು ಕಲಬುರಗಿ ಜೆಸ್ಕಾಂ ಕಾರ್ಯ ಮತ್ತು ಪಾಲನೆ ವಿಭಾಗ–2ರ ಕಾರ್ಯನಿರ್ವಾಹಕ ಅಭಿಯಂತರರು ತಿಳಿಸಿದ್ದಾರೆ.

ಶಹಾಬಾದ ಉಪವಿಭಾಗದ 110 ಕೆ.ವಿ. ವಾಡಿ ವಿದ್ಯುತ್ ವಿತರಣಾ ಕೇಂದ್ರ: ರಾವೂರ, ಮಾಲಗತ್ತಿ, ಕಮರವಾಡಿ, ಹಲಕಟ್ಟಾ, ಇಂಗಳಗಿ, ವಾಡಿ ಟೌನ ಗ್ರಾಮ ಪಂಚಾಯತಿಯ ಎಲ್ಲಾ ಗ್ರಾಮಗಳು ಮತ್ತು ಎಮ್/ಎಸ್ ಎಸಿಸಿ ವಾಡಿ ಲಿಮಿಟೆಡ್.

# ಜಿಲ್ಲಾ ಮಟ್ಟದ ಸಮಿತಿಗೆ ನಾಮ ನಿರ್ದೇಶಿತ ಸದಸ್ಯರನ್ನು ನೇಮಕ ಮಾಡಲು ಅರ್ಜಿ ಆಹ್ವಾನ

**ಮಲ್ಲಮ್ಮ ನುಡಿ ವಾರ್ತೆ**

**ಕಲಬುರಗಿ:** ನ.ಕರ್ನಾಟಕ ಪರಿಶಿಷ್ಟ ಪಂಗಡಗಳ ಮೇದಾರ ಅಲೆಮಾರಿ ಅಭಿವೃದ್ಧಿ ನಿಗಮದಿಂದ ಸರ್ಕಾರ ಜಾರಿಗೆ ತರುವ ಯೋಜನೆಗಳ ಅನುಷ್ಠಾನಕ್ಕಾಗಿ ಜಿಲ್ಲಾಮಟ್ಟದ ಸಮಿತಿಗೆ ನಾಮ ನಿರ್ದೇಶಿತ ಸದಸ್ಯರನ್ನು ನೇಮಕ ಮಾಡಲು ಅರ್ಹರಿಂದ ಜಿಲ್ಲೆಯ ಪರಿಶಿಷ್ಟ ಪಂಗಡಗಳ ಅಲೆಮಾರಿ ಸಮುದಾಯಕ್ಕೆ ಸೇರಿದ ಮತ್ತು ಸದರಿ ಸಮುದಾಯಗಳಿಗೆ ಸಂಬಂಧಿಸಿದಂತೆ ಕಾರ್ಯನಿರ್ವಹಿಸಿರುವ ಹಾಗೂ ಗುರುತಿಸಿಕೊಂಡಿರುವವರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು, ಆದರೆ ಅರ್ಜಿಗಳು ಸ್ವಿಕೃತವಾಗದೇ ಇರುವ ಕಾರಣ 02 ಸದಸ್ಯರ ಆಯ್ಕೆಗೆ ಮತ್ತೊಮ್ಮೆ ಅರ್ಜಿಯನ್ನು ಆಹ್ವಾನಿಸಲಾಗಿದೆ ಎಂದು ಕಲಬುರಗಿ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರು ತಿಳಿಸಿದ್ದಾರೆ.

ನಿಗದಿತ ಅರ್ಜಿ ನಮೂನೆಯನ್ನು ಕಲಬುರಗಿ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರ ಕಚೇರಿಯಿಂದ ಅಥವಾ ಅಥವಾ ಎಲ್ಲಾ ತಾಲ್ಲೂಕಗಳ ಸಹಾಯಕ ನಿರ್ದೇಶಕರು (ಗ್ರೇಡ–1/1) ಸಮಾಜ ಕಲ್ಯಾಣ ಇಲಾಖೆರವರ ಕಛೇರಿಯಿಂದ ಪಡೆದುಕೊಂಡು ಭರ್ತಿ ಮಾಡಿ 2025ರ ನವೆಂಬರ್ 21ರ ಸಂಜೆ 5 ಗಂಟೆಯೊಳಗಾಗಿ ಕಲಬುರಗಿ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರ ಕಚೇರಿಯಲ್ಲಿ ಅರ್ಜಿ ಸಲ್ಲಿಸಬೇಕು.

ಮತ್ತಿತರ ಹೆಚ್ಚಿನ ಮಾಹಿತಿಗಾಗಿ ಕಲಬುರಗಿ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರ ಕಚೇರಿಯನ್ನು ಹಾಗೂ ಕಚೇರಿ ದೂರವಾಣಿ ಸಂಖ್ಯೆ 08472–278621ಗೆ ಸಂಪರ್ಕಿಸಲು ಕೋರಲಾಗಿದೆ.




ಕಲಬುರಗಿ: ಕೆ.ಪಿ.ಸಿ.ಸಿ. ಅಸಂಘಟಿತ ಕಾರ್ಮಿಕ ಕಾಂಗ್ರೆಸ್ ಸಮಿತಿ ರಾಜ್ಯ ಅಧ್ಯಕ್ಷರಾದ ವೆ.ಎಸ್. ಮಂಜುನಾಥ ಇವರ ಅನುಮೋದನೆ ಶಾಸಕಿ ಖನೀಜ್ ಫಾತಿಮಾ ಜಿಲ್ಲಾ ಅಧ್ಯಕ್ಷ ಜಗದೇವ ಗುತ್ತೇದಾರ, ಕೆ.ಪಿ.ಯು. ಡಬ್ಲ್ಯೂ.ಸಿ.ಯ ರಾಜ್ಯ ಉಪಾಧ್ಯಕ್ಷ ಕಿಶೋರ ಗಾಯಕವಾಡ ಇವರ ಶಿಫಾರಸ್ಸಿನ ಮೇರೆಗೆ ಕರ್ನಾಟಕ ಪ್ರದೇಶ ಕಾಂಗ್ರೆಸ್ ಅಸಂಘಟಿತ ವತಿಯಿಂದ ಚಂದ್ರಶೇಖರ್ ಶೆಟ್ಟಿ ಅವರನ್ನು ಕಾರ್ಮಿಕ ಘಟಕದ ಕಲಬುರಗಿ ಜಿಲ್ಲಾ ಕಾರ್ಯಧ್ಯಕ್ಷರಾಗಿ ನೇಮಕ ಮಾಡಲಾಯಿತು.

# ಶಹಾಬಾದ: ಬೀದಿ ನಾಯಿಗಳು ವಾಸವಿದ್ದಲ್ಲಿ ಮಾಹಿತಿ ನೀಡಲು ಸೂಚನೆ

**ಮಲ್ಲಮ್ಮ ನುಡಿ ವಾರ್ತೆ**

**ಕಲಬುರಗಿ:** ,ನ,ಸರ್ವೋಚ್ಚ ನ್ಯಾಯಾಲಯವು ಸ್ವಯಂ ಪ್ರೇರಿತ ರಿಟ್ ಅರ್ಜಿ ಸಂಖ್ಯೆ 5/2025 ರಲ್ಲಿ ನೀಡಿರುವ ನಿರ್ದೇಶನದಂತೆ ನಗರ ಸ್ಥಳೀಯ ಸಂಸ್ಥೆಯ ವ್ಯಾಪ್ತಿಯಲ್ಲಿನ ಖಾಸಗಿ ಹಾಗೂ ಸರ್ಕಾರಿ ಶಿಕ್ಷಣ ಸಂಸ್ಥೆಗಳು, ಖಾಸಗಿ ಹಾಗೂ ಸರ್ಕಾರಿ ಆಸ್ಪತ್ರೆಗಳು, ಕ್ರೀಡಾ ಸಂಕೀರ್ಣಗಳು, ಬಸ್‌ನಿಲ್ದಾಣ, ರೈಲ್ವೆ ನಿಲ್ಧಾಣಗಳ ಮುಖ್ಯಸ್ಥರು ತಮ್ಮ ಸಂಸ್ಥೆಯ ಆವರಣದಲ್ಲಿ ಯಾವುದೇ ಬೀದಿ ನಾಯಿಗಳು ವಾಸವಿದ್ದಲ್ಲಿ ಅದನ್ನು ಪರಿಶೀಲಿಸಿ ಕೂಡಲೇ ಅದರ ಸಂಖ್ಯೆಯನ್ನು ಲೆಕ್ಕ ಮಾಡಿ ಶಹಾಬಾದ ನಗರಸಭೆಯ ಪೌರಾಯುಕ್ತರಿಗೆ ತಿಳಿಸಬೇಕೆಂದು ಶಹಾಬಾದ ನಗರಸಭೆಯ ಪೌರಾಯುಕ್ತರು ತಿಳಿಸಿದ್ದಾರೆ.

ತಮ್ಮ ಸಂಸ್ಥೆಯ ಆವರಣದಲ್ಲಿ ಬೀದಿ ನಾಯಿಗಳ ಉಪಟಳ ತಡೆಯಲು ಹಾಗೂ ಅವುಗಳ ಪ್ರದೇಶ ನಿಯಂತ್ರಿಸಲು ಕ್ರಮವಹಿಸಬೇಕು. ನಗರ ಸ್ಥಳೀಯ ಸಂಸ್ಥೆಯಿಂದ ಬೀದಿ ನಾಯಿಗಳನ್ನು ಸ್ಥಳಾಂತರಿಸಲು ಸಹಕರಿಸಲು ಹಾಗೂ ಅವುಗಳ ಪ್ರವೇಶ ನಿರ್ಭಂದಿಸುವದನ್ನು ಮೇಲ್ವಿಚಾರಣೆ ಮಾಡಲು ತಮ್ಮ ಸಂಸ್ಥೆ ವತಿಯಿಂದ ಒಬ್ಬ ಜವಾಬ್ದಾರಿಯುತ ನೌಕರರನ್ನು ನೋಡಲ್ ಅಧಿಕಾರಿಯಾಗಿ ನೇಮಕ ಮಾಡಬೇಕು.

ಸರ್ವೋಚ್ಛ ನ್ಯಾಯಾಲಯದ ನಿರ್ದೇಶನದಂತೆ ತಮ್ಮ ಸಂಸ್ಥೆಯ ವ್ಯಾಪ್ತಿಯಲ್ಲಿ ಪುನ: ನಾಯಿಗಳು ವಾಸ ಮಾಡಲು ಅವಕಾಶ ಕೊಟ್ಟಲ್ಲಿ ಅವನ್ನು ಸ್ಥಳಾಂತರಿಸುವ ವೆಚ್ಚವನ್ನು ತಮ್ಮ ಸಂಸ್ಥೆಯಿಂದ ವಸೂಲಿ ಮಾಡಲಾಗುತ್ತದೆ. ಸರ್ವೋಚ್ಚ ನ್ಯಾಯಾಲಯದ ಆದೇಶ ಉಲ್ಲಂಘನೆ ಮಾಡಿದ್ದಲ್ಲಿ ನ್ಯಾಯಾಲಯದ ಆದೇಶದಂತೆ ತಮ್ಮ ವಿರುದ್ಧ ಕಾನೂನು ಕ್ರಮ ವಹಿಸಲಾಗುತ್ತದೆ ಎಂದು ಅವರು ತಿಳಿಸಿದ್ದಾರೆ.



ಕಲಬುರಗಿ: ನಗರದ ಕೇಂದ್ರ ಬಸ್‌ನಿಲ್ದಾಣ ಎದರುಗಡೆ ಮಹಾನಗರ ಪಾಲಿಕೆ ಹಾಗೂ ಕೆಕೆಆರ್‌ಡಿಬಿ ಮಾಗಾ ಮ್ಯಾಕ್ರೋ 2024–25 ನೇ ಸಾಲಿನ ಅನುದಾನದಲ್ಲಿ 200.00ಲಕ್ಷಗಳ (ಅಗಐಗಿಇಖಖಿ) ಕಲ್ವರ್ಟ್ ನಿರ್ಮಾಣ ಕಾಮಗಾರಿಗೆ ಶಾಸಕರಾದ ಅಲ್ಲಮಪ್ರಭು ಪಾಟೀಲ್ ಅವರು ಗುದ್ದಲಿ ಪೂಜೆ ನೆರವೇರಿಸಿದರು. ಈ ಸಂದರ್ಭದಲ್ಲಿ ಪೂಜ್ಯ ಮಹಾಪೌರರಾದ ವರ್ಷಾ ರಾಜೀವ ಜಾನೆ, ಕಾಂಗ್ರೇಸ್ ಮುಖಂಡ ರಾಜೀವ ಜಾನೆ, ಗುತ್ತಿಗೇದಾರ ಉಮೇಶ, ಸುಶಿಲಕುಮಾರ, ಪಾಂಡುರಂಗ ಸಾಂಳಕೆ ಸೇರಿದಂತೆ ಇತರರು ಇದ್ದರು.

# ಹಾಸ್ಯನಟಿ ನಯನಾ ವಿರುದ್ಧ ಕ್ರಮಕ್ಕೆ ದಲಿತ ಸೇನೆಯ ಜಿಲ್ಲಾಧ್ಯಕ್ಷ ಮಂಜುನಾಥ ಭಂಡಾರಿ ಆಗ್ರಹ

ಕಲಬುರಗಿ: ಕಾಮಿಡಿ ಕಿಲಾಡಿಗಳು ಟಿವಿ ರಿಯಾಲಿಟಿ ಶೋನಿಂದ ಬೆಳಕಿಗೆ ಬಂದಿರುವ ಹಾಸ್ಯನಟಿ ನಯನ ಕಾರ್ಯಕ್ರಮವೊಂದರಲ್ಲಿ 'ಹೊಲಸು' 'ಹೊಲಗೇರಿ' ಎಂದು ಹೇಳುವ ಮೂಲಕ ಶೋಷಿತ ಸಮುದಾಯಕ್ಕೆ ಉದ್ದೇಶ ಪೂರ್ವಕವಾಗಿ ಅವಮಾನ ಮಾಡಿರುವ ಹಿನ್ನಲೆಯಲ್ಲಿ ನಟಿ ನಯನ ವಿರುದ್ದ ದೌರ್ಜನ್ಯತಡೆ ಕಾಯ್ದೆ ಅನ್ವಯ ಕಠಿಣಕ್ರಮ ಜರುಗಿಸಬೇಕೆಂದು ಆಗ್ರಹಿಸಿ ದಲಿತ ಸೇನೆಯ ಜಿಲ್ಲಾಧ್ಯಕ್ಷ ಮಂಜುನಾಥ ಭಂಡಾರಿ ಅವರು ಕಲಬುರಗಿ ಸಬ್ ಅರ್ಬನ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.



ಅ.29ರಂದು ಮೈಸೂರು ಮೆಟ್ರೋ ಮನಿಮಿಥಾ ಚೀಟ್ ಫಂಡ್ ಸಂಸ್ಥೆ ಬಗ್ಗೆ ಮಾತನಾಡುತ್ತಾ 'ಹೊಲಗೇರಿ' ಮಾಡುತ್ತಾರಲ್ಲ ಅನ್ನೋದರ ಜೊತೆಗೆ 'ಹೊಲಸು ಹೊಲಗೇರಿ' ಎಂಬ ನಿಷೇಧಿತ ಪದ ಬಳಸುವುದರ ಮೂಲಕ ತನ್ನ ಕೊಳಕು ಬುದ್ದಿಯನ್ನು ಪ್ರದರ್ಶಿಸಿ ಜಾತಿಯತೆಯೇ ಮನಸ್ಥಿತಿಯನ್ನೂ ಬಹಿರಂಗ ಪಡಿಸಿದ್ದು ಅತ್ಯಂತ ಖಂಡನೀಯಾಗಿದ್ದು ಮತ್ತು ಇದು ಶೋಷಿತ ಸಮುದಾಯದ ಹೊಲೆಯ ಜಾತಿಗೆ ಉದ್ದೇಶಪೂರ್ವಕವಾಗಿ ಅವಹೇಳನ ಮಾಡಿ ವಿಕೃತಿ ಮೆರೆದಿದ್ದು ಸಮುದಾಯಕ್ಕೆ ಬಹಳ ನೋವುನ್ನುಂಟು ಮಾಡಿ ದ್ದಲ್ಲದೆ ಅಪಮಾನವಾಗಿದೆ ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಸರಕಾರ ಮತ್ತು ಪೊಲೀಸ್ ಅಧಿಕಾರಿಗಳು ತಕ್ಷಣವೇ ನಟಿ ನಯನಾ ಎಂಬ ಹೆಸರಿನ ನಟಿ ವಿರುದ್ಧ ದೌರ್ಜನ್ಯ ಕಾಯ್ದೆ ಅನ್ವಯ ಕ್ರಮ ಜರುಗಿಸಲೇಬೇಕೆಂದು ದಲಿತ ಸೇನೆಯ ಜಿಲ್ಲಾಧ್ಯಕ್ಷ ಮಂಜುನಾಥ ಭಂಡಾರಿ, ದಲಿತ ಸೇನೆ ನಗರ ಅಧ್ಯಕ್ಷರು ಅರವಿಂದ ಕಮಲಾಪೂರ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶಿವಕುಮಾರ ಗೋಲಾ, ದಲಿತ ಸೇನೆ ನಗರ ಪ್ರಧಾನ ಕಾರ್ಯದರ್ಶಿ ಕಾನು ಕೋವಿ ಅವರು ಆಗ್ರಹಿಸಿದ್ದಾರೆ.

# ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ ಎಸ್ಸೆಸ್ಸೆಲ್ಸಿ ಫಲಿತಾಂಶ ಸುಧಾರಿಸಲಿ:
## ಶಾಲಾ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಶ್ಮಿ ಮಹೇಶ್ ಸೂಚನೆ

**ಮಲ್ಲಮ್ಮ ನುಡಿ ವಾರ್ತೆ**

**ರಾಯಚೂರು** ನ, ಕಲ್ಯಾಣ ಕರ್ನಾಟಕಪ್ರದೇಶದರಾಯಚೂರು, ಕೊಪ್ಪಳ, ವಿಜಯನಗರ, ಕಲಬುರಗಿ, ಬೀದರ ಮತ್ತು ಬಳ್ಳಾರಿ ಜಿಲ್ಲೆಗಳ ತಾಲೂಕವಾರು ಆರು ವಿಷಯಗಳ ಸಂಪನ್ಮೂಲ ಶಿಕ್ಷಕರಿಗಾಗಿ ಹಾಗೂ ಧಾರವಾಡ ವಿಭಾಗದ ಆರು ಜಿಲ್ಲೆಗಳ ವಿಷಯಗಳ ಸಂಪನ್ಮೂಲ ಶಿಕ್ಷಕರಿಗಾಗಿ ನವೆಂಬರ್ 17ರಂದು ಒಂದು ದಿನದ ತರಬೇತಿ ಕಾರ್ಯಗಾರವು ನಗರದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆ ಪೂರ್ಣಿಮಾ ಇಂಟರ್ನ್ಯಾಷನಲ್ ಶಾಲೆಯಲ್ಲಿ ನವೆಂಬರ್ 17ರಂದು ನಡೆಯಿತು.

ಶಾಲಾ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ವ್ಹಿ. ರಶ್ಮಿ ಮಹೇಶ್ ಅವರು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಈ ಬಾರಿ ಕಲ್ಯಾಣ ಕರ್ನಾಟಕ ಭಾಗದ ಎಸ್. ಎಸ್. ಎಲ್. ಸಿ. ಪರೀಕ್ಷೆ ಫಲಿತಾಂಶ ಸುಧಾರಣೆ ಮಾಡಲು ಎಲ್ಲ ರೀತಿಯ ಅಗತ್ಯ ಕ್ರಮವಹಿಸಬೇಕು. ಈ ಕಾರ್ಯಗಾರದ ಮುಖ್ಯ ಗುರಿ ಮತ್ತು ಉದ್ದೇಶ ಇದೆ ಆಗಿದೆ ಎಂದರು.

ಫಲಿತಾಂಶ ಸುಧಾರಣೆಯ ವಿಷಯವನ್ನೇ ಈಗ ಶಿಕ್ಷಕರು ಪ್ರಥಮ ಆದ್ಯತೆ ಎಂದು ಭಾವಿಸಿ ಶಾಲಾ ಹಂತದಲ್ಲಿ ಕಾರ್ಯ ನಿರ್ವಹಿಸಬೇಕು ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದರು.

ವಿದ್ಯಾರ್ಥಿಗಳಿಗಾಗಿ ಪರೀಕ್ಷಾ ಮಂಡಳಿಯು ಬಿಡುಗಡೆ ಮಾಡಿರುವ ಮಾದರಿ ಪ್ರಶ್ನೆ ಪತ್ರಿಕೆಗಳನ್ನು ಪರಿಚಯಿಸಬೇಕು. ಪಠ್ಯ ಆಧಾರಿತ ಮೌಲ್ಯಮಾಪನದ ಬಗ್ಗೆ ಅರಿಯವೇಕು ಎಂದು ನಾನಾ ವಿಷಯ ತಿಳಿಸಿದರು. ಜನವರಿ ಮೊದಲ ವಾರ, ಕೊನೆಯ ವಾರ ಮತ್ತು ಫೆಬ್ರುವರಿಯಲ್ಲಿ ಪೂರ್ವ ಸಿದ್ಧತಾ ಪರೀಕ್ಷೆ ಕೈಗೊಳ್ಳಲು ಇಲಾಖೆಯು ತೀರ್ಮಾನಿಸಿ ವೇಳಾಪಟ್ಟಿ ನೀಡಿದೆ. ಇದನ್ನು ವಿದ್ಯಾರ್ಥಿಗಳಿಗೆ, ಪಾಲಕ ಪೋಷಕರಿಗೆ ತಿಳಿಸಬೇಕು. ಈ ಭಾಗದ ಫಲಿತಾಂಶ ಸುಧಾರಣೆ ಮಾಡಬೇಕು. ಜಿಲ್ಲಾ ಹಂತದ ಮತ್ತು ತಾಲೂಕು ಹಂತದ ಅಧಿಕಾರಿಗಳು ನವೆಂಬರ್, ಡಿಸೆಂಬರ್, ಜನೆವರಿ, ಫೆಬ್ರುವರಿ ತಿಂಗಳಲ್ಲಿ ನಿರಂತರ ಫಾಲೋ ಅಪ್ ಮಾಡಿ ನೀಡಿರುವ ಚೆಕ್ ಲಿಸ್ಟ್ ಗಳ ಪ್ರಕಾರ ಫಲಿತಾಂಶಗಳನ್ನು ವಿಶ್ಲೇಷಿಸುವ ಕಾರ್ಯಪಡೆ ರಚನೆ ಮಾಡಿ ನಮಗೆ ವರದಿ ನೀಡಬೇಕು ಎಂದು ತಿಳಿಸಿದರು. ಕಲ್ಯಾಣ ಕರ್ನಾಟಕದ ಶಾಲೆಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಅಲ್ಪಸಂಖ್ಯಾತ ಮತ್ತು ಹಿಂದುಳಿದ ವರ್ಗದ ವಿದ್ಯಾರ್ಥಿಗಳು ಹೆಚ್ಚಾಗಿರುವುದರಿಂದ ಅವರಲ್ಲಿ ಆತ್ಮವಿಶ್ವಾಸ ವೃದ್ಧಿಸುವ ಕೆಲಸ ಮಾಡಬೇಕು. ಶಿಕ್ಷಕರು ತಮ್ಮ ಜವಾಬ್ದಾರಿ ಅರಿತು ಕೆಲಸ ಮಾಡಬೇಕು. ಬಿಎಲ್ಓ ಕೆಲಸಗಳಿಗೆ ಪ್ರೌಢಶಾಲೆಯ ಶಿಕ್ಷಕರನ್ನು ನೇಮಿಸಬಾರದು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ತಿಳಿಸಿದರು. ಕಲಿಕೆಯ ನಿರಂತರತೆ-ಯು ಫಲಿತಾಂಶ ಸುಧಾರಣೆಗೆ ಮುನ್ನುಡಿ ಬರೆಯುತ್ತದೆ ಎಂದರು.

ಈ ದಿನ ತರಬೇತಿ ಪಡೆಯುವ ಸಂಪನ್ಮೂಲ ಶಿಕ್ಷಕರು ತಮ್ಮ ಬ್ಲಾಕ್ ಗಳಲ್ಲಿ ಇದೇ ಶನಿವಾರದಿಂದ ಕಾರ್ಯ ಪ್ರವೃತ್ತರಾಗಿ ವಿಷಯವಾರು ಶಿಕ್ಷಕರಿಗೆ ತರಬೇತಿ ನೀಡಬೇಕು. ಅದಕ್ಕೆ ಸಂಬಂಧಿಸಿದಂತೆ ತಯಾರಿ ಮಾಡಿಕೊಳ್ಳಬೇಕು ಎಂದರು.

ಎಲ್ಲರೂ ಚೆನ್ನಾಗಿ ಕೆಲಸ ಮಾಡೋಣ. ಫಲಿತಾಂಶ ಸುಧಾರಣೆಯೇ ನಮ್ಮ ನಿಮ್ಮ ಮೊದಲ ಆದ್ಯತೆ ಆಗಬೇಕು ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಶಾಲಾ ಶಿಕ್ಷಣ ಇಲಾಖೆ ಕಲಬುರಿಯ ಅಪರ ಆಯುಕ್ತರಾದ ಪಾಂಡ್ವೆ ರಾಹುಲ್ ತುಕಾರಾಮ ಮಾತನಾಡಿ, ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳು ಈ ಬಾರಿಯ ಎಸ್. ಎಸ್. ಎಲ್. ಸಿ. ಫಲಿತಾಂಶ ಸುಧಾರಣೆಗಾಗಿ ಇಲಾಖೆಯು ನೀಡಿದ ಅಂಶಗಳನ್ನು ಎಲ್ಲಾ ಹಂತದ ಅಧಿಕಾರಿಗಳು ಅನುಷ್ಠಾನಗೊಳಿಸಬೇಕು ಎಂದು ತಿಳಿಸಿದರು.

ಶಾಲೆಯಿಂದ ಹೊರಗುಳಿಯುವ ಮಕ್ಕಳನ್ನು ಮುಖ್ಯವಾಹಿನಿಗೆ ತರಬೇಕು. ಕಲಿಕೆಯಲ್ಲಿ ಹಿಂದುಳಿದ ಮಕ್ಕಳು ಇಲಾಖೆಯ ಕಾರ್ಯಯೋಜನೆಗೆ ಒಳಪಡಬೇಕು. ಈ ಕಾರ್ಯಾಗಾರದಲ್ಲಿ ನೀಡುವ ಸಂಪನ್ಮೂಲಗಳ ಪ್ರಕಾರ ಪ್ರತಿವಾರ ಮಾಡುವ ಹಂತ-1, 2, 3, 4 ಗಳ ಅನುಸಾರ ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ತಯಾರಿ ಮಾಡಬೇಕು.

ಈ ಬಾರಿ ನೀಡಿದ ಬ್ಲೂ ಪ್ರಿಂಟ್ ಪ್ರಕಾರ ನವೆಂಬರ್-ಡಿಸೆಂಬರ್-ಜನೆವರಿ ಮತ್ತು ಫೆಬ್ರವರಿ ತಿಂಗಳಲ್ಲಿ ಪರಿಣಾಮಕಾರಿಯಾಗಿ ವಿಷಯ ವಸ್ತು ಪುನರಾವರ್ತನೆಗೊಳ್ಳಬೇಕು ಎಂದರು.

ರಾಯಚೂರಿನ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ ಅವರು ಮಾತನಾಡಿ, ಈ ಬಾರಿ ರಾಯಚೂರು ಜಿಲ್ಲೆಯ ಎಸ್.ಎಸ್.ಎಲ್.ಸಿ ಫಲಿತಾಂಶವು ಕಳೆದ ಬಾರಿಗಿಂತ ಉತ್ತಮಪಡಿಸಬೇಕು. ಜೊತೆಗೆ ಇಲಾಖೆಯು ನೀಡಿದ ಎಲ್ಲಾ ಅಂಶಗಳನ್ನು ಶಾಲಾ ಹಂತದಲ್ಲಿ ಅನುಷ್ಠಾನಗೊಳಿಸಬೇಕು. ಕ್ರಿಯಾಯೋಜನೆಯಂತೆ ಕಾರ್ಯ ನಿರ್ವಹಿಸಬೇಕು. ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳನ್ನು ಗುರುತಿಸಿ ಅವರಲ್ಲಿ ಆತ್ಮವಿಶ್ವಾಸ ತುಂಬುವ ಕೆಲಸ ಮಾಡಬೇಕು. ಪಾಲಕ ಪೋಷಕರ ಸಭೆ ಮಾಡಿ ಅವರೊಂದಿಗೆ ಚರ್ಚಿಸಿ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಪುನಃ ಶಾಲೆಗೆ ಕರೆತರಬೇಕು ಎಂದು ಸೂಚನೆ ನೀಡಿದರು.

ಕಾರ್ಯಾಗಾರದಲ್ಲಿ ನಾಲ್ಕು ಜಿಲ್ಲೆಗಳ ಪ್ರತಿಯೊಂದು ತಾಲೂಕಿನ ಆರು ವಿಷಯಗಳ ಆರು ಸಂಪನ್ಮೂಲ ವ್ಯಕ್ತಿಗಳು ಭಾಗವಹಿಸಿ ಬರುವ ಎಸ್ . ಎಲ್. ಸಿ. ಪರೀಕ್ಷೆ ಫಲಿತಾಂಶ ಸುಧಾರಣೆಗಾಗಿ 12 ವಾರಗಳ ಕಾರ್ಯಯೋಜನೆ ಸಿದ್ಧಪಡಿಸಲಾಯಿತು. ವಿಷಯ ಸಂಪನ್ಮೂಲ ಶಿಕ್ಷಕರೊಂದಿಗೆ ಉಪನಿರ್ದೇಶಕರು, ಡಯಟ್ ಪ್ರಾಂಶುಪಾಲರು, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಡಯಟ್ ಉಪನ್ಯಾಸಕರು, ವಿಷಯ ಪರಿವೀಕ್ಷಕರು, ಶಿಕ್ಷಣಾಧಿಕಾರಿಗಳು ಎಲ್ಲರನ್ನೊಳಗೊಂಡು ಒಟ್ಟು 190 ಜನ ಸಂಪನ್ಮೂಲ ವ್ಯಕ್ತಿಗಳು ಭಾಗವಹಿಸಿದ್ದರು. ಕಾರ್ಯಾಗಾರದಲ್ಲಿ ಹಾಜರಾದ ಎಲ್ಲಾ 190 ಸಂಪನ್ಮೂಲ ಶಿಕ್ಷಕರು /ಅಧಿಕಾರಿಗಳು ತರಬೇತಿಯನ್ನಾಧರಿಸಿ ಬರುವ ವರ್ಷದ ಎಸ್. ಎಸ್ . ಎಲ್. ಸಿ. ಫಲಿತಾಂಶವನ್ನು ಪ್ರತಿ ಶತದಷ್ಟು ಸಾಧಿಸುವ ದೃಢ ನಿಶ್ಚಯದೊಂದಿಗೆ ಇಲಾಖೆಯ ಕಾರ್ಯಯೋಜನೆಯ ಶಸ್ವಿಗೊಳಿಸಲು ತಿಳಿಸಲಾಯಿತು.

ಕಾರ್ಯಕ್ರಮದಲ್ಲಿ ಹಿರಿಯ ಅಧಿಕಾರಿಗಳಾದ ಪ್ರಕಾಶ್ ನಿಟ್ಟಾಲಿ, ರಾಯಚೂರಿನ ಜಿಲ್ಲಾ ಮುಖ್ಯ ಕಾರ್ಯನಿರ್ವಾಹಕಧಿಕಾರಿಗಳಾದ ಈಶ್ವರಕುಮಾರ್ ಕಾಂದೂ, ಶಾಲಾ ಶಿಕ್ಷಣ ಇಲಾಖೆ ಧಾರವಾಡದ ಅಪರ ಆಯುಕ್ತರಾದ ಮಾನ್ಯ ಈಶ್ವರ ಉಳ್ಳಾಗಡ್ಡಿ, ಕೆ.ಎಸ್.ಈ.ಎ.ಬಿ ಮತ್ತು ಡಿ.ಎಸ್.ಈ.ಆರ್.ಟಿ ಬೆಂಗಳೂರು ನಿರ್ದೇಶಕರಾದ ಮಾನ್ಯ ಗೋಪಾಲಕೃಷ್ಣ, ಹೆಚ್. ಎನ್. ಕಲ್ಯಾಣ ಕರ್ನಾಟಕ ಪ್ರದೇಶದ ರಾಯಚೂರು, ಕೊಪ್ಪಳ, ವಿಜಯನಗರ ಮತ್ತು ಬಳ್ಳಾರಿ ಜಿಲ್ಲೆಗಳ ನೋಡಲ್ ಅಧಿಕಾರಿಗಳು ಹಾಗೂ ತಾಲೂಕವಾರು ಆರು ವಿಷಯಗಳ ಸಂಪನ್ಮೂಲ ಶಿಕ್ಷಕರುಗಳು ಜೊತೆಗೆ ಧಾರವಾಡ ವಿಭಾಗದ ಆಯುಕ್ತರುಗಳು, ಅಧಿಕಾರ ವೃಂದದವರು ಮತ್ತು ಆರು ವಿಷಯಗಳ ಸಂಪನ್ಮೂಲ ಶಿಕ್ಷಕರುಗಳು ಸೇರಿ ಒಟ್ಟು 190 ಜನ ಹಾಜರಿದ್ದರು. ಕೆ.ಡಿ.ಬಡಿಗೇರ ಉಪನಿರ್ದೇಶಕರು(ಆ) ಶಾಲಾ ಶಿಕ್ಷಣ ಇಲಾಖೆ ರಾಯಚೂರು ಸ್ವಾಗತಿಸಿದರು.



# ಸಂವಿಧಾನ ಸಂರಕ್ಷಣಾ ಪಡೆಯಿಂದ ಭವ್ಯ ಜಾಗೃತಿ ಜಾಥ.
## ವಿಜೃಂಭಣೆಯಿಂದ ಜರುಗಿದ ಸಂವಿಧಾನ ಜಾಗೃತಿ ಜಾಥ



**ಮಲ್ಲಮ್ಮ ನುಡಿ ವಾರ್ತೆ**

**ರಾಯಚೂರು, ನ,** ರಾಯಚೂರು ಸಂವಿಧಾನ ಸಮರ್ಪಣಾ ದಿನದ ಅಂಗವಾಗಿ ಮಂಗಳವಾರ ನಗರದೊಳಗೆ ಸಂವಿಧಾನ ಸಂರಕ್ಷಣಾ ಪಡೆ ಹಾಗೂ ವಿವಿಧ ಸಂಘಟನೆಗಳ ನೇತೃತ್ವದಲ್ಲಿ ಜಾಗೃತಿ ಜಾಥ ವಿಜೃಂಭಣೆಯಿಂದ ಜರುಗಿತು.

ಕರ್ನಾಟಕ ಸಂಘದಿಂದ ಶಾಂತಮಲ್ಲ ಶಿವಾಚಾರ್ಯ ಸ್ವಾಮೀಜಿ ಹಾಗೂ ಪೂಜೆ ಬಂತೆ ನಾಗರತ್ನ. ಬಸವ ಸ್ವಾಮೀಜಿ ಇವರಿಂದ ಜಾಥಕ್ಕೆ ಚಾಲನೆ ನೀಡಲಾಯಿತು. ಬಳಿಕ ಶೆಟ್ಟಿಭಾವಿ ವೃತ್ತ, ಬಂಗಾರ ಬಜಾರ್, ತೀನ್ ಕಂದಿಲ್, ತಹಶೀಲ್ದಾರ್ ಕಚೇರಿ, ಮಹಾನಗರ ಪಾಲಿಕೆ ಕಚೇರಿ, ಕೇಂದ್ರ ಬಸ್ ನಿಲ್ದಾಣ ಮಾರ್ಗವಾಗಿ ಡಾ. ಬಿ.ಆರ್. ಅಂಬೇಡ್ಕರ್ ವೃತ್ತದ ಮೂಲಕ ಜಿಲ್ಲಾ ಮಹಾತ್ಮ ಗಾಂಧಿ ಕ್ರೀಡಾಂಗಣದವರೆಗೆ ಜಾಥ ಸಾಗಿ-ತು. ನೇತಾಜಿ ನಗರ ಹಾಗೂ ನಗರಸಭೆ ರಸ್ತೆ ಸೇರಿದಂತೆ ಪ್ರಮುಖ ಬೀದಿಗಳಲ್ಲಿ ಜಾಥ ಕುತೂಹಲ ಮೂಡಿಸಿತು. ಜಾಥದಲ್ಲಿ ದಲಿತ ಮತ್ತು ಪ್ರಗತಿಪರ ಸಂಘಟನೆಗಳು, ವಿವಿಧ ಧರ್ಮಗಳ ಧರ್ಮಗುರುಗಳು, ಯುವಕರು, ಮಹಿಳೆಯರು, ಕಾಲೇಜು ವಿದ್ಯಾರ್ಥಿಗಳು ಸೇರಿದಂತೆ ವಿವಿಧ ಸಮುದಾಯದ ಜನರು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದರು. "ಜೈ ಭೀಮ್" ಘೋಷಣೆಗಳು, ಸಂವಿಧಾನ ಪೀಠಿಕೆಯ ಘೋಷಣೆಗಳು ನಿರಂತರವಾಗಿ ಮೊಳಗುತ್ತಿದ್ದವು. ಅನೇಕರು ಕೈಯಲ್ಲಿ ಸಂವಿಧಾನದ ಪ್ರತಿಗಳನ್ನು ಹಿಡಿದು ಸಂವಿಧಾನದ ಮೌಲ್ಯಗಳತ್ತ ನಿಷ್ಠೆಯನ್ನು ವ್ಯಕ್ತಪಡಿಸಿದರು. ಸರ್ವಧರ್ಮ ಸಾಮರಸ್ಯದ ಸಂಕೇತವಾಗಿ ಎಲ್ಲಾ ಧರ್ಮ-ಸಮುದಾಯದ ಜನರ ಪಾಲ್ಗೊಳ್ಳುವಿಕೆ ಗಮನಾರ್ಹವಾಗಿತ್ತು.

ನೀಲಿ ಪ್ಯಾಂಟ್, ಬಿಳಿ ಅಂಗಿ, ಟೋಪಿ ಧಾರಣೆ ಮಾಡಿದ ಯುವಕರು ಹಾಗೂ ನೀಲಿ ಬಾರ್ಡರ್ ಇರುವ ಬಿಳಿ ಸೀರೆ ತೊಟ್ಟ ಮಹಿಳೆಯರ ಸಾನ್ನಿಧ್ಯ ಜಾಥಕ್ಕೆ ವಿಶೇಷ ಆಕರ್ಷಣೆಯಾಗಿತ್ತು.

ನ. 26 ರಂದು ಸಂವಿಧಾನ ಕರಡು ಸಮಿತಿಯು ರಾಷ್ಟ್ರಪತಿಗಳಿಗೆ ಕರಡು ಸಂವಿಧಾನವನ್ನು ಸಮರ್ಪಿಸಿದ ದಿನವಾಗಿದ್ದು, ಇದನ್ನೇ ಸಂವಿಧಾನ ಸಮರ್ಪಣಾ ದಿನವಾಗಿ ಆಚರಿಸಲಾಗುತ್ತದೆ. ಸಂವಿಧಾನ ಜಾರಿಯಾದ ದಶಕಗಳಾದರೂ ಅದರ ಆಶಯಗಳು ಇನ್ನೂ ಸಾಮಾನ್ಯ ಜನರಿಗೆ ತಲುಪಿಲ್ಲವೆಂಬ ಹಿನ್ನಲೆಯಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಈ ಜಾಥವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಂಚಾಲಕರು ತಿಳಿಸಿದ್ದಾರೆ.

ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯ ಎ. ವಸಂತಕುಮಾರ, ಜೆಡಿಎಸ್ ಜಿಲ್ಲಾಧ್ಯಕ್ಷ ಎಂ. ವಿರೂಪಾಕ್ಷಿ, ಎಂ.ಆರ್. ಭೇರಿ, ಕೆ.ಈ. ಕುಮಾರ, ರವೀಂದ್ರನಾಥ್ ಪಟ್ಟಿ ಸೇರಿದಂತೆ ಅನೇಕ ರಾಜಕೀಯ ಹಾಗೂ ಸಾಮಾಜಿಕ ಮುಖಂಡರು ಭಾಗವಹಿಸಿದರು. ಜಾನ್ ವೆಸ್ಲಿ, ರಜಾಕ್ ಉಸ್ತಾದ್, ಜೆ.ಬಿ. ರಾಜು, ವಿಶ್ವನಾಥ್ ಪಟ್ಟಿ, ತಮ್ಮಣ್ಣ ವಕೀಲರು, ಆಸ್ಲಾಂ ಪಾಷಾ, ಹನುಮಂತ ಮನ್ನಾವರಿ, ವಿಜಯಲಕ್ಷ್ಮಿ, ಅರ್ಚನಾ ಸುಂಕಾರಿ, ರಾಜಶೇಖರ್ ಮಾಚರ್ಲಾ ಸೇರಿದಂತೆ ಅನೇಕರು ಜಾಥವನ್ನು ಯಶಸ್ವಿಗೊಳಿಸಿದರು. ಸಾಮಾಜಿಕ ನ್ಯಾಯ, ಸಮಾನತೆ, ಸ್ವಾತಂತ್ರ್ಯ ಮತ್ತು ಬಾಂಧವ್ಯ ಸೇರಿದಂತೆ ಸಂವಿಧಾನದ ಮೂಲ ತತ್ವಗಳನ್ನು ಜನಸಾಮಾನ್ಯರ ನಡುವೆ ಹರಡುವುದು ಈ ಜಾಥದ ಪ್ರಮುಖ ಉದ್ದೇಶ. ರಾಯಚೂರು ಹಾಗೂ ತಾಲೂಕುಗಳಿಂದ ಬಂದ ನಾಗರಿಕರ ಉತ್ಸಾಹಭರಿತ ಭಾಗವಹಿಕೆಯಿಂದ ಜಾಥವು ಯಶಸ್ವಿಯಾಗಿ ನೆರವೇರಿತು.




ಬಳ್ಳಾರಿ . ಸಹಕಾರ ಇಲಾಖೆ, ಸಹಕಾರ ಮಹಾಮಂಡಳಿ, ಬಿಡಿಸಿಸಿ ಬ್ಯಾಂಕ್, ಸಹಕಾರಿ ಯೂನಿಯನ್ ಮತ್ತು ಇತರೆ ಸಂಘಗಳು ನೇತೃತ್ವದಲ್ಲಿ ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತರನ್ನು ಅದ್ದೂರಿಯಾಗಿ ಮೇರವಣಿಗೆ ಮಾಡಿ, ಸನ್ಮಾನಿಸಿ, ಅಭಿನಂದಿಸಿದರು ಶುಭಾಶಯಗಳನ್ನು ತಿಳಿಸಿದರು.

# ತರಕಾರಿ ಬೀಜದ ಕೀಟಗಳ ವಿತರಿಸಲು ಅರ್ಜಿ ಆಹ್ವಾನ

**ಮಲ್ಲಮ್ಮ ನುಡಿ ವಾರ್ತೆ**

**ರಾಯಚೂರು:** ನ, ಇಲ್ಲಿನ ತೋಟಗಾರಿಕೆ ಇಲಾಖೆಯಿಂದ 2025-26ನೇ ಸಾಲಿನಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ, ವಿವೋಚನ ನಿಧಿಯ ಸಾಮಾನ್ಯ ಉಪಯೋಜನೆಯಡಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ರೈತರಿಗೆ ವಿವಿಧ ಬಗೆಯ ತರಕಾರಿ ಬೀಜದ ಕೀಟಗಳನ್ನು ವಿತರಿಸಲು ಅರ್ಹ ರೈತರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಈ ಯೋಜನೆಯಡಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ರೈತರಿಗೆ ಪ್ರದೇಶ ವಿಸ್ತರಣೆ ಲಭ್ಯತೆಗೆ ಅನುಗುಣವಾಗಿ ಗರಿಷ್ಠ ರೂ.20000 ಮೊತ್ತದ ವಿವಿಧ ಬಗೆಯ ತರಕಾರಿ ಬೀಜದ ಕೀಟಗಳನ್ನು ತೋಟಗಾರಿಕೆ ಇಲಾಖೆಯಿಂದ ವಿತರಿಸಲಾಗುತ್ತಿದ್ದು, ಆಸಕ್ತಿಯುಳ್ಳ ರೈತರು ತಮ್ಮ ತಾಲೂಕಿನ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಜಿಲ್ಲಾ ಪಂಚಾಯತ್ ಹಾಗೂ ತಾಲೂಕಿನ ಕಚೇರಿಗಳ ಹೋಬಳಿ ಮಟ್ಟದ ರೈತಸಂಪರ್ಕ ಕೇಂದ್ರದ ಸಹಾಯಕ ತೋಟಗಾರಿಕೆ ಅಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಪಂಚಾಯತ್ ತೋಟಗಾರಿಕೆ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಹಫೀಜಾಬಿ ಅತನೂರೆ ನಿಧನ ವಾರ್ತೆ



**ಮಲ್ಲಮ್ಮ ನುಡಿ ವಾರ್ತೆ**

**ಕಮಲನಗರ:** ಕಮಲನಗರ ತಾಲೂಕಿನ ಮುಧೋಳ್(ಬಿ) ಗ್ರಾಮದ ಹಿರಿಯ ಜೀವಿ, ಪತ್ರಕರ್ತ ಮೋಹಿನ ಅತನೂರೆ ಅವರ ತಾಯಿ ಹಫೀಜಾಬಿ ಅಮೀರಸಾಬ ಅತನೂರೆ(65) ಅವರು ಮಂಗಳವಾರ ಮಧ್ಯಾಹ್ನ ನಿಧನರಾದರು. ಮೃತರು ಪತಿ ಹಾಗೂ ನಾಲ್ಕು ಪುತ್ರರು ಸೇರಿದಂತೆ ಅಪಾರ ಬಂಧು ಬಳಗ ಅಗಲಿದ್ದಾರೆ. ಬುಧವಾರ ಮುಂಜಾನೆ 10:00 ಗಂಟೆಗೆ ಸ್ವ-ಗ್ರಾಮದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

# ಸಹಕಾರ ರತ್ನ ಪ್ರಶಸ್ತಿ: ಗಣ್ಯರಿಂದ ಗೌರವ ಸನ್ಮಾನ



**ಮಲ್ಲಮ್ಮ ನುಡಿ ವಾರ್ತೆ**

**ರಾಯಚೂರು:** ನವೆಂಬರ್, ರಾಯಚೂರು ಒಕ್ಕಲುತನ ಹುಟ್ಟುವಳಿ ಮಾರಾಟ ಹಾಗೂ ಸಂಸ್ಕರಣ ಸಹಕಾರ ಸಂಘದ ನಿರ್ದೇಶಕರಾದ ಶರಬಣ್ಣ ಪಾಟೀಲ್ ಹಾಗೂ ಮೈಸೂರಿನ ಕರ್ನಾಟಕ ರಾಜ್ಯ ಮೀನುಗಾರರ ಸಹಕಾರ ಮಹಾಮಂಡಲ ಸೈಯದ್ ಸಾಬ ಮನ್ಸಲಾಪೂರು ಅವರಿಗೆ ಸಹಕಾರ ರತ್ನ ಪ್ರಶಸ್ತಿ ಲಭಿಸಿದೆ.

ಕರ್ನಾಟಕ ರಾಜ್ಯ ಸಹಕಾರ ಚಳುವಳಿಯ ಬೆಳವಣಿಗೆಗೆ ಇವರು ಸಲ್ಲಿಸಿರುವ ಅವಿರತ ಸೇವೆಗಾಗಿ ಈ ಪುರಸ್ಕಾರ ಲಭಿಸಿದೆ. ಬೆಂಗಳೂರಿನ ಗಾಯಿತ್ರಿ ವಿಹಾರ್ ಮೇಕ್ರಿ ಸರ್ಕಲ್ ಬಳಿಯಲ್ಲಿ ಇತ್ತೀಚೆಗೆ ನಡೆದ ಸಮಾರಂಭದಲ್ಲಿ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರು ಸಹಕಾರ ಇಲಾಖೆಯ ಪ್ರತಿಷ್ಠಿತ ಸಹಕಾರ ರತ್ನ ಪ್ರಶಸ್ತಿ ನೀಡಿ ಅಭಿನಂದಿಸಿದರು. ಅದೇ ರೀತಿ, ರಾಯಚೂರಿನ ಕೃಷಿ ವಿಶ್ವವಿದ್ಯಾಲಯದಲ್ಲಿ ಇತ್ತೀಚೆಗೆ ಜರುಗಿದೆ 72ನೇ ಅಖಿಲ ಭಾರತ ಸಹಕಾರ ಸಪ್ತಾಹ ಕಾರ್ಯಕ್ರಮದಲ್ಲಿ ಸಹ ಶರಬಣ್ಣ ಪಾಟೀಲ್ ಹಾಗೂ ಸೈಯದ್ ಸಾಬ ಇವರಿಗೆ ಸಚಿವರಾದ ಎನ್. ಎಸ್. ಭೋಸರಾಜು, ಶಾಸಕರಾದ ಶಿವರಾಜ್ ಪಾಟೀಲ್, ಬಸನಗೌಡ ದದ್ದಲ್, ಎ.ವಸಂತಕುಮಾರ್ ಹಾಗೂ ಇನ್ನಿತರರು ಸನ್ಮಾನಿಸಿದರು.

ನವೆಂಬರ್ 18ರಂದು ರಾಯಚೂರು ಒಕ್ಕಲುತನ ಹುಟ್ಟುವಳಿ ಮಾರಾಟ ಹಾಗೂ ಸಂಸ್ಕರಣ ಸಹಕಾರ ಸಂಘ ರಾಯಚೂರಿನ ಮುಖ್ಯ ಕಚೇರಿಯಲ್ಲಿ ಸಹ ಶರಬಣ್ಣ ಪಾಟೀಲ್ ಹಾಗೂ ಸೈಯದ್ ಸಾಬ ಅವರಿಗೆ ಸಂಘದ ಅಧ್ಯಕ್ಷ ಪತಂಗೆ ಜಯವಂತರಾವ್, ಉಪಾಧ್ಯಕ್ಷ ಶಶಿಧರ ಪಾಟೀಲ್, ಮಲ್ಲನಗೌಡ ಪಾಟೀಲ್ ಇನ್ನಿತರರು ಸನ್ಮಾನಿಸಿ ಗೌರವಿಸಿದರು.



ಕಲಬುರಗಿ: ನಗರದ ರಾಜಾಪೂರ ಬಡಾವಣೆಯಲ್ಲಿ ಯುವ ಮುಖಂಡರು ಹಾಗೂ ಸಮಾಜ ಸೇವಕರು ಮತ್ತು ಆಲ್ ಇಂಡಿಯಾ ಕ್ರಿಶ್ಚಿಯನ್ ವೆಲ್ಪೇರ್ ಸೊಸೈಟಿ ಅಧ್ಯಕ್ಷರಾದ ಪ್ರಮೋದಕುಮಾರ (ಮೊಂಟಿ) ಅವರ ಜನ್ಮದಿನವನ್ನು ದಕ್ಷಿಣ ಮತಕ್ಷೇತ್ರದ ಶಾಸಕರಾದ ಅಲ್ಲಮಪ್ರಭು ಪಾಟೀಲ ಅವರ ಸಮ್ಮುಖದಲ್ಲಿ ಕೇಕ್ ಕತರಿಸುವ ಮೂಲಕ ಆಚರಿಸಲಾಯಿತು. ಈ ಸಂದರ್ಭದಲ್ಲಿ ಪೂಜ್ಯ ಮಹಾಪೌರರಾದ ವರ್ಷಾ ರಾಜೀವ ಜಾನೆ, ಮಾಜಿ ಮಹಾಪೌರರಾದ ರವಿಂದ್ರನಾಥ ಹೊನ್ನಳ್ಳಿ, ಮಹಾನಗರ ಪಾಲಿಕೆ ಮಾಜಿ ಸದಸ್ಯ ರಾಹುಲ ಹೊನ್ನಳ್ಳಿ, ಅಲೆಮಾರಿ ಒಕ್ಕೂಟದ ಜಿಲ್ಲಾಧ್ಯಕ್ಷ ಕುಮಾರ ಕೆ.ಯಾದವ್, ಕಾಂಗ್ರೆಸ್ ಮುಖಂಡ ಸಂಘಪಾಲ ಕಾಂಬಳೆ ಸೇರಿದಂತೆ ಇತರರು ಇದ್ದರು.

# ನಿಧಿ ಆಪ್ಕೆ ನಿಕಟ್ ಕಾರ್ಯಕ್ರಮ

**ಮಲ್ಲಮ್ಮ ನುಡಿ ವಾರ್ತೆ**

**ಬಳ್ಳಾರಿ:** ಕಾರ್ಮಿಕರ ಭವಿಷ್ಯ ಸಂಸ್ಥೆ ಬಳ್ಳಾರಿ ಪ್ರಾದೇಶಿಕ ಕಚೇರಿ ವತಿಯಿಂದ ಭವಿಷ್ಯ ನಿಧಿ ನಿಮ್ಮ ಹತ್ತಿರಕ್ಕೆ ಎಂಬ ಅಂಶದಡಿ ನ.27 ರಂದು ಬೆಳಿಗ್ಗೆ 09 ರಿಂದ ಸಂಜೆ 06 ಗಂಟೆಯವರೆಗೆ ಸಂಡೂರು ತಾಲ್ಲೂಕಿನ ಎರಬನಹಳ್ಳಿ ಗ್ರಾಮದ ಸುಲ್ತಾನಪುರ ರಸ್ತೆಯ ಮಿನಿರ ಸ್ಟೀಲ್ಸ್ ಅಂಡ್ ಪವರ್ ಲಿಮಿಟೆಡ್ ಕಾರ್ಖಾನೆಯ ಸಭಾಂಗಣದಲ್ಲಿ 'ನಿಧಿ ಆಪ್ಕೆ ನಿಕಟ್' ಕಾರ್ಯಕ್ರಮ ಏರ್ಪಡಿಸಲಾಗಿದೆ. ಕಾರ್ಯಕ್ರಮದಲ್ಲಿ ಕಾರ್ಮಿಕರ,ಪಿಂಚಣಿದಾರರ ಮತ್ತು ಉದ್ಯೋಗದಾತರರ ಕುಂದು ಕೊರತೆ ಪರಿಹಾರ, ಮಾಹಿತಿ ವಿನಿಮಯ ಮಾಡಿಕೊಳ್ಳಬಹುದು.

ಉದ್ಯೋಗದಾತರ ಕರ್ತವ್ಯ ಮತ್ತು ಜವಾಬ್ದಾರಿಗಳ ಕುರಿತು ಅರಿವು, ಕಾರ್ಮಿಕರಿಗೆ, ಉದ್ಯೋಗದಾತರಿಗೆ, ಪ್ರಧಾನ ಉದ್ಯೋಗದಾತರಿಗೆ ಮತ್ತು ಗುತ್ತಿಗೆದಾರರಿಗೆ ಲಭ್ಯವಿರು ಆನ್‌ಲೈನ್ ಸೇವೆಗಳ ಮಾಹಿತಿ, ಹೊಸ ಉಪಕ್ರಮಗಳು ಹಾಗೂ ಸುಧಾರಣೆ ಕ್ರಮಗಳ ಕುರಿತು ಮಾಹಿತಿ ಸಹ ಒದಗಿಸಲಾಗುತ್ತದೆ.

ಹಾಗಾಗಿ ಕಾರ್ಮಿಕರು, ಪಿಂಚಣಿದಾರರು, ಉದ್ಯೋಗದಾತರು ನ.27 ರಂದು ನಡೆಯುವ ನಿಧಿ ಆಪ್ಕೆ ನಿಕಟ್ ಕಾರ್ಯಕ್ರಮದಲ್ಲಿ ಭಾಗವಹಿಸಿ ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಪ್ರಾದೇಶಿಕ ಭವಿಷ್ಯ ನಿಧಿ ಬಳ್ಳಾರಿ ಪ್ರಾದೇಶಿಕ ಕಚೇರಿಯ ಆಯುಕ್ತ ಕೆ.ವಿ ಪ್ರವೀಣ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರಾಷ್ಟ್ರೀಯ ಅಪಸ್ಮಾರ ದಿನಾಚರಣೆ ಕಾರ್ಯಕ್ರಮ

**ಮಲ್ಲಮ್ಮ ನುಡಿ ವಾರ್ತೆ**

**ಬಳ್ಳಾರಿ:** ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕರ್ನಾಟಕ ಮೆದುಳಿನ ಉಪಕ್ರಮ ಕಾರ್ಯಕ್ರಮ, ಜಿಲ್ಲಾ ಆಸ್ಪತ್ರೆ, ಚೆಳ್ಳಗುರ್ಕಿ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಅಮರಾಪುರ ಗ್ರಾಮ ಪಂಚಾಯತಿ ಇವರ ಸಂಯುಕ್ತಾಶ್ರಯದಲ್ಲಿ ನ.19 ರಂದು ಬೆಳಿಗ್ಗೆ 10 ಗಂಟೆಗೆ ಬಳ್ಳಾರಿ ತಾಲ್ಲೂಕಿನ ಅಮರಾಪುರ ಗ್ರಾಮದ ಗ್ರಾಮ ಪಂಚಾಯತಿ ಆವರಣದಲ್ಲಿ "ರಾಷ್ಟ್ರೀಯ ಅಪಸ್ಮಾರ ದಿನಾಚರಣೆ" ಕಾಯಕ್ರಮ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮವನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್ ಬಾಬು ಅವರು ಉದ್ಘಾಟಿಸುವರು. ಅಮರಾಪುರ ಗ್ರಾಮದ ಗ್ರಾಮ ಪಂಚಾಯತಿಯ ಅಧ್ಯಕ್ಷರಾದ ಭಾರತಿ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು.

ಅಮರಾಪುರ ಗ್ರಾಮದ ಗ್ರಾಮ ಪಂಚಾಯತಿಯ ಉಪಾಧ್ಯಕ್ಷ ಜಿ.ಗಾಧಿಲಿಂಗಪ್ಪ, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಬಸರೆಡ್ಡಿ.ಎನ್., ಜಿಲ್ಲಾ ಯೋಜನಾಭಿವೃದ್ಧಿ ಅಧಿಕಾರಿ ಡಾ.ಆರ್.ಅಬ್ದುಲ್ಲಾ, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಮರಿಯಂಬಿ ವಿ.ಕೆ., ಜಿಲ್ಲಾ ಜಾರಿ ಅಧಿಕಾರಿ ಡಾ.ಪೂರ್ಣಿಮಾ ಕಟ್ಟಿಮನಿ, ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ ಡಾ.ಇಂದ್ರಾಣಿ.ವಿ., ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ.ಹನುಮಂತಪ್ಪ, ಜಿಲ್ಲಾ ಆಸ್ಪತ್ರೆಯ ಕರ್ನಾಟಕ ಮೆದುಳಿನ ಆರೋಗ್ಯ ಉಪಕ್ರಮ ಕಾರ್ಯಕ್ರಮದ ತಜ್ಞ ವೈದ್ಯರು ಹಾಗೂ ನೋಡಲ್ ಅಧಿಕಾರಿ ಡಾ.ರಾಕೇಶ್, ಮೆದುಳಿನ ಆರೋಗ್ಯ ಚಿಕಿತ್ಸಾ ಕೇಂದ್ರದ ವೈದ್ಯಾಧಿಕಾರಿ ಡಾ.ಪ್ರಿಯಾಂಕ ಪ್ರಸಾದ್, ಚೆಳ್ಳಗುರ್ಕಿ ಪ್ರಾಥಮಿಕ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿ ಡಾ.ಕಾವ್ಯಶ್ರೀ ಕೆ.ಎಂ., ಅಮರಾಪುರ ಗ್ರಾಪಂ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಮಂಜುನಾಥ ಸೇರಿದಂತೆ ಇತರರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ಜಿಲ್ಲಾ ಅಸಾಂಕ್ರಾಮಿಕ ರೋಗಗಳ ನಿರ್ಮೂಲನಾಧಿಕಾರಿ ಡಾ.ಕೆ.ಜಿ.ವೀರೇಂದ್ರಕುಮಾರ್ ಅವರು ಕಾರ್ಯಕ್ರಮದ ಕುರಿತು ಪ್ರಾಸ್ತಾವಿಕವಾಗಿ ಮಾತನಾಡುವರು. ಜಿಲ್ಲಾ ಆಸ್ಪತ್ರೆಯ ಕರ್ನಾಟಕ ಮೆದುಳಿನ ಆರೋಗ್ಯ ಉಪಕ್ರಮ ಕಾರ್ಯಕ್ರಮದ ಜಿಲ್ಲಾ ಕಾರ್ಯಕ್ರಮ ಸಂಯೋಜಕ ಸಣ್ಣ ಕೇಶವ ಅವರು ಗಣ್ಯರನ್ನು ಸ್ವಾಗತಿಸುವರು. ಪ್ರಭಾರಿ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಖುರ್ಷಿದ್ ಬೇಗಮ್ ಅವರು ಕಾರ್ಯಕ್ರಮ ನಿರೂಪಿಸುವರು ಎಂದು ಪ್ರಕಟಣೆ ತಿಳಿಸಿದೆ.

# ಅತಿಥಿ ಶಿಕ್ಷಕರ ನೇಮಕ: ಅರ್ಜಿ ಆಹ್ವಾನ

**ಮಲ್ಲಮ್ಮ ನುಡಿ ವಾರ್ತೆ**

**ಬಳ್ಳಾರಿ:** ನಗರದ ಈದ್ಗಾ ರಸ್ತೆಯ ಹಿರಾಳ್ ಕುಡಂನ ಸರ್ಕಾರಿ ಆದರ್ಶ ವಿದ್ಯಾಲಯದಲ್ಲಿ ಇಂಗ್ಲೀಷ್ ಮಾಧ್ಯಮದ ಆಂಗ್ಲ ಭಾಷಾ ಅತಿಥಿ ಶಿಕ್ಷಕರು ಮತ್ತು ಇಂಗ್ಲೀಷ್ (ಕಲಾ) ಭಾಷಾ ವಿಷಯ ಶಿಕ್ಷಕರು ಹುದ್ದೆಗೆ ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ. ವಿದ್ಯಾಲಯವು ಆಂಗ್ಲ ಮಾಧ್ಯಮವಾಗಿದ್ದು, 6ನೇ ತರಗತಿ ಯಿಂದ 10ನೇ ತರಗತಿಯವರೆಗೆ ಒಟ್ಟು 510 ವಿದ್ಯಾರ್ಥಿಗಳಿದ್ದಾರೆ. ಎನ್‌ಸಿಆರ್‌ಟಿ ಪಠ್ಯಕ್ರಮ ಹೊಂದಿರುವುದರಿಂದ ಆಂಗ್ಲ ಭಾಷೆ ವಿಷಯ ಭೋದಿಸುವ ಆಂಗ್ಲ ಭಾಷಾ ಅತಿಥಿ ಶಿಕ್ಷಕರ ಹುದ್ದೆ ಖಾಲಿ ಇದ್ದು, ಆಸಕ್ತ ಅರ್ಹ ಶಿಕ್ಷಕರು ಅರ್ಜಿ ಸಲ್ಲಿಸಬಹುದಾಗಿದೆ.

ಹೆಚ್ಚಿನಮಾಹಿತಿಗಾಗಿಮೊ.9740738762 ಗೆ ಸಂಪರ್ಕಿಸಬಹುದು ಎಂದು ಸರ್ಕಾರಿ ಆದರ್ಶ ವಿದ್ಯಾಲಯದ ಮುಖ್ಯೋಪಾಧ್ಯಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪೋಷಕರ ಪತ್ತೆಗೆ ಮನವಿ



**ಮಲ್ಲಮ್ಮ ನುಡಿ ವಾರ್ತೆ**

**ಬಳ್ಳಾರಿ:** ನಗರದಸರ್ಕಾರಿಬಾಲಕರಬಾಲಮಂದಿರದಲ್ಲಿ ನ.01 ರಂದು ರಕ್ಷಣೆ ಮಾಡಿ ದಾಖಲಿಸಿಕೊಂಡ ಮೈಲಾರಜ್ಜ ತಂದೆ ಅರುಣ್(ವರುಣ್) ಎನ್ನುವ 10 ವರ್ಷದ ಬಾಲಕನು ತನ್ನ ವಿಳಾಸವನ್ನು ಹಳೇ ಹುಬ್ಬಳ್ಳಿಯ ಸಿದ್ಧರೂಢ ಮಠದ ಹತ್ತಿರದ ಹತ್ತಿಪೇಟೆ ಎಂದು ಹೇಳುತ್ತಿದ್ದು, ಸ್ಪಷ್ಟ ವಿಳಾಸ ತಿಳಿಸುತ್ತಿಲ್ಲ. ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ಆದೇಶದ ಮೇರೆಗೆ ಬಾಲಕನ ಪೋಷಕರ ಪತ್ತೆಗೆ ಸಹಕರಿಸಬೇಕು ಎಂದು ಬಳ್ಳಾರಿಯ ಸರ್ಕಾರಿ ಬಾಲಕರ ಬಾಲಮಂದಿರದ ಅಧೀಕ್ಷಕರು ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

ಬಾಲಕ ಚಹರೆ: ಎತ್ತರ 128 ಸೆಂ.ಮೀ., ತೂಕ 24.5 ಕೀ.ಗ್ರಾಂ., ಕಪ್ಪು ಮೈ ಬಣ್ಣ, ಬಲಗೈ ಸಣ್ಣ ಪುಟ್ಟ ಗಾಯದ ಗುರುತು, ಬಾಲಕ ದೊರೆತಾಗ ಕೆಂಪು ಬಣ್ಣ ಟೀ-ಶರ್ಟ್, ನೀಲಿ ಬಣ್ಣದ ಚಡ್ಡಿ, ಹಳದಿ ಬಣ್ಣ ಜೋಳಿಗೆ ಹಾಗೂ ಕರಿ ಕಂಬಳಿ ಧರಿಸಿರುತ್ತಾನೆ. ಹಿಂದಿ ಭಾಷೆ ಮಾತನಾಡುತ್ತಾನೆ.

ಬಾಲಕನ ಪೋಷಕರ ಬಗ್ಗೆ ಮಾಹಿತಿ ಸಿಕ್ಕಲ್ಲಿ ಬಳ್ಳಾರಿಯ ಸರ್ಕಾರಿ ಬಾಲಕರ ಬಾಲಮಂದಿರದ ಅಧೀಕ್ಷಕರ ಮೊ.9900754615 ಅಥವಾ ಕಂಟೋನ್‌ಮೆಂಟ್‌ನ ಶಾಂತಿಧಾಮ ಆವರಣದ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ದೂ.08392-297436, ಆಪ್ತಸಮಾಲೋಚಕರ ಮೊ.8880466645 ಹಾಗೂ ಗೃಹಪಾಲಕರ ಮೊ.9538177767 ಗೆ ಮಾಹಿತಿ ನೀಡಬಹುದು ಎಂದು ತಿಳಿಸಿದ್ದಾರೆ.

# 150 ಏಕತಾ ಮಾರ್ಚ್ ಪಾದಯಾತ್ರೆ

**ಮಲ್ಲಮ್ಮ ನುಡಿ ವಾರ್ತೆ**

**ಬಳ್ಳಾರಿ:** ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕೇಂದ್ರ ಸರ್ಕಾರದ ಯುವ ಕಾರ್ಯ ಮತ್ತು ಕ್ರೀಡಾ ಸಚಿವಾಲಯದಡಿಯ ಮೇರಾ ಯುವ ಭಾರತ್ ಕೇಂದ್ರ, ಮಹಾನಗರ ಪಾಲಿಕೆ, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ರಾಷ್ಟ್ರೀಯ ಯೋಜನಾ ಘಟಕ, ಜಿಲ್ಲೆಯ ಎಲ್ಲಾ ಪದವಿಪೂರ್ವ ಕಾಲೇಜುಗಳು, ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಇವರ ಸಂಯುಕ್ತಾಶ್ರಯದಲ್ಲಿ ಉಕ್ಕಿನ ಮನುಷ್ಯ ಮತ್ತು ರಾಷ್ಟ್ರೀಯ ಏಕತೆಯ ಪ್ರತಿಪಾದಕ ಸರ್ದಾರ್ ವಲ್ಲಭಭಾಯ್ ಅವರ 150 ನೇ ಜನ್ಮ ದಿನಾಚರಣೆ ಅಂಗವಾಗಿ ನ.19 ರಂದು ಬೆಳಿಗ್ಗೆ 09 ಗಂಟೆಗೆ ನಗರದ ಡಾ.ರಾಜ್ ಕುಮಾರ್ ರಸ್ತೆಯ ಸರ್ಕಾರಿ (ಮಾ.ಪು) ಪದವಿಪೂರ್ವ ಕಾಲೇಜು ಮೈದಾನದಲ್ಲಿ ಸರ್ದಾರ್@150 ಏಕತಾ ಮಾರ್ಚ್ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ. ಮಾರ್ಗ: ಸರ್ಕಾರಿ (ಮಾ.ಪು) ಪದವಿಪೂರ್ವ ಕಾಲೇಜು ಮೈದಾನದಿಂದ ಆರಂಭಗೊಂಡು ಪಾದಯಾತ್ರೆಯು ಗಡಿಗಿ ಚೆನ್ನಪ್ಪ ವೃತ್ತ- ಬೆಂಗಳೂರು ರಸ್ತೆ- ಹಳೆಯ ಬ್ರೂಸ್ ಪೇಟೆ ಪೊಲೀಸ್ ಠಾಣೆಯ ಮುಂಭಾಗ- ಹೆಚ್.ಆರ್.ಗವಿಯಪ್ಪ ವೃತ್ತ- ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದ ವರೆಗೆ ನಡೆಯಲಿದೆ.

ಪಾದಯಾತ್ರೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು, ಸಾರ್ವಜನಿಕರು ಭಾಗವಹಿಸಬಹುದು ಎಂದು ಮೇರಾ ಯುವ ಭಾರತ್ ಕೇಂದ್ರದ ಜಿಲ್ಲಾ ಯುವ ಅಧಿಕಾರಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಚರ್ಚಾಸ್ಪರ್ಧೆಗಳಿಂದ ಜ್ಞಾನಾಭಿವೃದಿ



**ಮಲ್ಲಮ್ಮ ನುಡಿ ವಾರ್ತೆ**

**ಬಳ್ಳಾರಿ:** ಚರ್ಚಾಸ್ಪರ್ಧೆಗಳಲ್ಲಿ ಮಂಡಿತವಾಗುವ ವಿಷಯಗಳಿಂದ ಆಯಾ ವಲಯದ ಆಳ-ಆಗಲ ಅರಿಯಲು ಮತ್ತು ಜ್ಞಾನಾಭಿವೃದ್ಧಿಗೆ ಸಹಾಯವಾಗುತ್ತದೆ ಎಂದು ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಎಂ.ಮುನಿರಾಜು ಅವರು ಹೇಳಿದರು.

ವಿವಿಯ ಡಾ.ಬಿ.ಆರ್.ಅಂಬೇಡ್ಕರ್ ಸಭಾಂಗಣದಲ್ಲಿ ಮಂಗಳವಾರ ವಿದ್ಯಾರ್ಥಿ ಕಲ್ಯಾಣ ಘಟಕ ಮತ್ತು ರಾಜ್ಯ ಸಹಕಾರ ಮಹಾಮಂಡಳ ಜಂಟಿ ಸಹಭಾಗಿತ್ವದಲ್ಲಿ ಸ್ನಾತಕ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಸಹಕಾರ ಕ್ಷೇತ್ರದ ಕುರಿತು ಏರ್ಪಡಿಸಿದ್ದ ಚರ್ಚಾಸ್ಪರ್ಧೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸ್ಪರ್ಧಾತ್ಮಕತೆ ಎಂಬುದು ಎಲ್ಲೆಡೆ ಅಗತ್ಯವಿರುವ ವಸ್ತು ವಿಷಯವಾಗಿದೆ. ಪ್ರಚಲಿತ ವಿದ್ಯಮಾನಗಳ ಅಥವಾ ಗಾಂಧೀಜಿ, ಅಂಬೇಡ್ಕರ್ ಅವರ ಂತಹ ಪ್ರಮುಖ ವ್ಯಕ್ತಿಗಳ ವಿಷಯಗಳನ್ನು ವಿದ್ಯಾರ್ಥಿಗಳು ಆಯ್ದುಕೊಂಡು ಪರಸ್ಪರ ಚರ್ಚೆ, ಗುಂಪು ಸಂವಹನ ನಡೆಸಬೇಕು. ಇದರಿಂದ ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿಗೆ ಅನುಕೂಲವಾಗುತ್ತದೆ ಎಂದು ಸಲಹೆ ನೀಡಿದರು. ವೈಯಕ್ತಿಕ ಮತ್ತು ರಾಷ್ಟ್ರದ ಭವಿಷ್ಯ ಅಭಿವೃದ್ಧಿಗೆ ಚರ್ಚಾಸ್ಪರ್ಧೆಗಳು ದಾರಿದೀಪವಾಗುತ್ತವೆ ಇದೇ ಸಂದರ್ಭದಲ್ಲಿ ಎಂದು ಅಭಿಪ್ರಾಯಪಟ್ಟರು. ಕಾರ್ಯಕ್ರಮದ ಸಂಯೋಜಕರಾದ ವಿದ್ಯಾರ್ಥಿ ಕಲ್ಯಾಣ ಘಟಕದ ನಿರ್ದೇಶಕರಾದ ಪ್ರೊ. ಗೌರಿ ಮಾಣಿಕ ಮಾನಸ ಅವರು ಮಾತನಾಡಿ, ಸಹಕಾರ ಕ್ಷೇತ್ರದ ಚರ್ಚಾಸ್ಪರ್ಧೆಯಲ್ಲಿ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಯ ಸುಮಾರು 60ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದಾರೆ. ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನಗಳಿಗೆ ಕ್ರಮವಾಗಿ ರೂ.3 ಸಾವಿರ, 2 ಸಾವಿರ ಮತ್ತು 1 ಸಾವಿರ ನಗದು ಬಹುಮಾನ ನೀಡಲಾಗುವುದು ಎಂದು ತಿಳಿಸಿದರು. ಸ್ಪರ್ಧೆಗಳ ನಿರ್ಣಾಯ ಕರಾಗಿ ಆಗಮಿಸಿದ್ದ ವಿವಿಯ ಶುದ್ಧ ನಿಕಾಯ ಡೀನ್ ಪ್ರೊ.ಖಡ್ಕೆ ಉದಯಕುಮಾರ್, ಇಂಗ್ಲೀಷ್ ವಿಭಾಗದ ಮುಖ್ಯಸ್ಥ ಪ್ರೊ. ರಾಬರ್ಟ್ ಜೋಸ್, ರಸಾಯನಶಾಸ್ತ್ರ ವಿಭಾಗದ ಪ್ರೊ.ಅರುಣ್‌ಕುಮಾರ್ ಲಗಶೆಟ್ಟಿ ವೇದಿಕೆಯಲ್ಲಿದ್ದರು.

ವಿವಿಯ ವಿವಿಧ ನಿಕಾಯಗಳ ಡೀನರು, ವಿಭಾಗಗಳ ಮುಖ್ಯಸ್ಥರು, ಬೋಧಕ-ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿಗಳು ಇದ್ದರು.

# ಮಕ್ಕಳ ಹಕ್ಕುಗಳು ಉಲ್ಲಂಘನೆಯಾದಲ್ಲಿ ಮಕ್ಕಳ ಸಹಾಯವಾಣಿ1098 ಗೆ ಕರೆ ಮಾಡಿ

ಬಳ್ಳಾರಿ:ಜಿಲ್ಲೆಯಲ್ಲಿ ಶಾಲೆ, ಕಾಲೇಜು, ವಸತಿ ನಿಲಯ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಮಕ್ಕಳ ಮೇಲೆ ನಡೆಯಬಹುದಾದಂತಹ ದೌರ್ಜನ್ಯಗಳಾದ ದೈಹಿಕ, ಮಾನಸಿಕ ಮತ್ತು ಲೈಂಗಿಕ ಕಿರುಕುಳ, ಬಾಲ್ಯವಿವಾಹ, ಭಿಕ್ಷಾಟನೆ, ಬಾಲಕಾರ್ಮಿಕ, ಕಾನೂನು ಬಾಹಿರ ದತ್ತು ಸೇರಿದಂತೆ ಮುಂತಾದ ಮಕ್ಕಳ ಹಕ್ಕುಗಳು ಉಲ್ಲಂಘನೆಯಾದಲ್ಲಿ ಮಕ್ಕಳ ಸಹಾಯವಾಣಿ ಸಂಖ್ಯೆ 1098 ಅಥವಾ ಬಳ್ಳಾರಿ ನಗರದ ಕಂಟೋನ್‌ಮೆಂಟ್ ಪ್ರದೇಶದ ಶಾಂತಿಧಾಮ ಆವರಣದ ಜಿಲ್ಲಾ ಮಕ್ಕಳ ರಕ್ಷಣಾ ಘಟಕ(ದೂ.08392-241373) ಕಚೇರಿಗೆ ಸಂರ್ಪಕಿಸಬಹುದು ಎಂದು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಸುಭದ್ರದೇವಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮೋಳಕೇರಾ:ಬಸ್ ನಿಲ್ದಾಣ ನಿರ್ಮಿಸಲು ಒತ್ತಾಯ



**ಮಲ್ಲಮ್ಮನುಡಿವಾರ್ತೆ**

**ಹುಮನಾಬಾದ:** ಸರ್ಕಾರ ಉಚಿತ ಬಸ್ ಪ್ರಯಾಣ ಘೋಷಣೆಮಾಡುವುದರ ಮೂಲಕಮಹಿಳೆಯರು ಖುಷಿ ಪಡುವಂತೆ ಮಾಡಿದೆ. ಆದರೆ, ತಾಲ್ಲೂಕಿನಮೊಳಕೇರಾ ಗ್ರಾಮದಹತ್ತಿರಬಸ್ ನಿಲ್ದಾಣವಿಲ್ಲದೇಸೂಕ್ತ ಮೂಲಸೌಕರ್ಯಗಳಿಲ್ಲದೆ ಶಾಲೆಯ ಮಕ್ಕಳು ಹಾಗೂ ಗ್ರಾಮದ ಜನರು ಪ್ರತಿನಿತ್ಯ ಸಂಕಷ್ಟ ಎದುರಿಸುತ್ತಿದ್ದಾರೆ ಎಂದು ಆಶ್ರಯ ದೀಪ ಟ್ರಸ್ಟ್‌ನ ಸದಸ್ಯ ಶಶಿಕುಮಾರ ಜಮಾದಾರ ಒತ್ತಾಯಿಸಿದ್ದಾರೆ. ಬಸ್ ನಿಲ್ದಾಣವಿಲ್ಲದೇ ಶಾಲೆಯ ಮಕ್ಕಳಿಗೆ ಹಾಗೂ ಸಾರ್ವಜನಿಕರಿಗೆ ಸಾಕಷ್ಟು ತೊಂದರೆ ಎದರಾಗುತ್ತಿವೆ. ಬಸ್ ನಿಲ್ದಾಣ ಇಲ್ಲದಿರುವುದರಿಂದ ಪ್ರಯಾಣಿಕರಿಗೆ ಅನುಕೂಲ ನೀಡುವಬದಲು ಆಟೋರಿಕ್ಷಾ, ಕ್ಯಾಬ್ ಹಾಗೂ ಖಾಸಗಿವಾಹನಗಳ ನಿಲುಗಡೆಸ್ಥಳವಾಗಿ ಮಾರ್ಪಟಿವೆಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಮೊಳಕೇರಾ ಗ್ರಾಮದಿಂದ ಹುಮನಾಬಾದಕ್ಕೆ ತೆರಳಲು ಶಾಲೆಯ ಮಕ್ಕಳು ಹಾಗೂ ಸಾಕಷ್ಟು ಜನರು ರಸ್ತೆಯ ಮೇಲೆಯೇ ನಿಂತುಕೊಂಡು ಸುಸ್ತಾಗುವ ಪರಿಸ್ಥಿತಿ ನಿರ್ಮಾಣವಾಗಿದೆ. ಹಾಗೂ ಈ ಮೊಳಕೇರಾಗ್ರಾಮಕ್ಕೆಸಂಬಂಧಪಟ್ಟ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿ ಚಿಕ್ಕದೊಂದು ಬಸ್ ನಿಲ್ದಾಣ ನಿರ್ಮಿಸಬೇಕೆಂದು ಒತ್ತಾಯಿಸಿದ್ದಾರೆ.

# ವಿವಿಧ ಪ್ರೋತ್ಸಾಹಧನ ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನ

**ಮಲ್ಲಮ್ಮ ನುಡಿ ವಾರ್ತೆ**

**ಬಳ್ಳಾರಿ:** ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಅರ್ಹ ಸಾಧಕ ಕ್ರೀಡಾಪಟುಗಳು ಹಾಗೂ ಇತರರಿಂದ ವಿವಿಧ ಪ್ರಶಸ್ತಿ ಮತ್ತು ವಿವಿಧ ಪ್ರೋತ್ಸಾಹಧನ ನೀಡುವ ಯೋಜನೆಗಳಿಂದ ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ.

ಪ್ರಶಸ್ತಿ ವಿವರ:

ಏಕಲವ್ಯ ಪ್ರಶಸ್ತಿ-2024, ಜೀವಮಾನ ಸಾಧನೆ ಪ್ರಶಸ್ತಿ-2024, ಕರ್ನಾಟಕ ಕ್ರೀಡಾ ಪೋಷಕರ ಪ್ರಶಸ್ತಿ-2024, ಗುರಿ ಒಲಂಪಿಕ್ ಪದಕ-2025/26, ನಗದು ಪುರಸ್ಕಾರ-2023 ಮತ್ತು 2024, ಶೈಕ್ಷಣಿಕ ಶುಲ್ಕ ಮರುಪಾವತಿ-2025/26, ಕ್ರೀಡಾ ವಿದ್ಯಾರ್ಥಿ ವೇತನ-2025/26.

ಅರ್ಹ ಕ್ರೀಡಾಪಟುಗಳು ಅರ್ಜಿಗಳನ್ನು ಆನ್ ಲೈನ್ ಅಧಿಕೃತ ಜಾಲತಾಣ: https://sevasindhu.karnataka.gov.in ಮೂಲಕ ಡಿಸೆಂಬರ್ 03 ರೊಳಗಾಗಿ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ನಗರದ ನಲ್ಲಚೇರುವು ಪ್ರದೇಶದ ಯುವ ಸಬಲೀಕರಣ

ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಗೆ ಭೇಟಿ ನೀಡಿ ಸಂಪರ್ಕಿಸಬಹುದು ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರಕ್ತದಾನ ಜೀವದಾನಕ್ಕೆ ಸಮಾನ: ಡಾ. ಹುಕ್ಕೇರಿ




**ಮಲ್ಲಮ್ಮ ನುಡಿ ವಾರ್ತೆ**

**ತಾಳಿಕೋಟಿ:** ರಕ್ತದಾನ ಎಲ್ಲ ದಾನಗಳಲ್ಲಿ ಶ್ರೇಷ್ಠ ದಾನವಾಗಿದೆ. ಒಬ್ಬನ ರಕ್ತ ಮೂರು ಜೀವಗಳನ್ನು ಉಳಿಸಲು ಕಾರಣವಾಗುತ್ತದೆ. ರಕ್ತವನ್ನು ಕೊಡುವುದರಿಂದ ಉತ್ತಮ ಆರೋಗ್ಯ ಲಭ್ಯವಾಗುತ್ತದೆ ಎಂದು ಸಮುದಾಯ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿ ಡಾ.ಶ್ರೀಶೈಲ ಹುಕ್ಕೇರಿ ಹೇಳಿದರು.ಮಂಗಳವಾರ ಪಟ್ಟಣ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಟೀಪು ಸುಲ್ತಾನ್ ಜಯಂತಿ ಅಂಗವಾಗಿ ಹಜರತ್ ಟೀಪು ಸುಲ್ತಾನ್ ರಕ್ಷಣಾ ಸಮಿತಿ, ವಿಜಯಪುರ ಸರ್ಕಾರಿ ಆಸ್ಪತ್ರೆ ರಕ್ತ ನಿಧಿ ವಿಭಾಗ ಹಾಗೂ ತಾಳಿಕೋಟಿ ಸಮುದಾಯ ಆರೋಗ್ಯ ಕೇಂದ್ರದ ಸಹಯೋಗದಲ್ಲಿ ಹಮ್ಮಿಕೊಂಡ ಬೃಹತ್ ರಕ್ತದಾನ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಜಯಂತಿ ಅಂಗವಾಗಿ ಇಂತಹ ಒಳ್ಳೆಯ ಕಾರ್ಯಕ್ರಮಗಳನ್ನು ಮಾಡುತ್ತಿರುವ ಟಿಪ್ಪು ಸಮಿತಿಯ ಪದಾಧಿಕಾರಿಗಳಿಗೆ ಅಭಿನಂದಿಸುತ್ತೇನೆ ಎಂದರು.

ದಲಿತ ಮುಖಂಡ ಜೈ ಭೀಮ್ ಮುತ್ತಗಿ ಮಾತನಾಡಿ ದೇಶದ ರಕ್ಷಣೆಗಾಗಿ ಬ್ರಿಟಿಷರ ವಿರುದ್ಧ ಕೆಚ್ಚೆದೆಯಿಂದ ಹೋರಾಡಿ ಅವರ ಜೊತೆ ರಾಜಿ ಮಾಡಿಕೊಳ್ಳದೆ ತನ್ನಿಬ್ಬರು ಮಕ್ಕಳನ್ನು ಅಡವು ಇಟ್ಟ ಮಹಾನ್ ಅರಸ್ ಟಿಪ್ಪು ಸುಲ್ತಾನ್ ಅವರ ಕೊಡುಗೆ ನಾಡಿಗೆ ಅಪಾರವಾಗಿದೆ ಎಂದರು. ಸಮಾರಂಭದ ಸಾನಿಧ್ಯ ವಹಿಸಿದ ಧಾರ್ಮಿಕ ಮುಖಂಡ ಸೈಯದ್ ಶಕೀಲ ಅಹಮದ್ ಖಾಜಿ ಅವರು ಮಾತನಾಡಿ ಬ್ರಿಟಿಷರ ವಿರುದ್ಧ ಹೋರಾಡಿದ ವೀರ ಅರಸ ಟಿಪ್ಪು ಸುಲ್ತಾನ್ ರ ದೇಶಪ್ರೇಮ ಅನುಕರಣೆಯವಾಗಿದ್ದು ಅವರ ತ್ಯಾಗದ ಬದುಕು ನಮಗೆಲ್ಲರಿಗೂ ಮಾದರಿಯಾಗಬೇಕು,ಈ ಶಿಬಿರದಲ್ಲಿ ರಕ್ತದಾನ ಮಾಡುವುದರೊಂದಿಗೆ ದೇಶದ ರಕ್ಷಣೆಗಾಗಿ ಅಗತ್ಯ ಬಿದ್ದರೆ ಪ್ರಾಣವನ್ನೂ ಕೊಡಲು ಸಿದ್ದರಾಗಿದ್ದೇವೆ ಎಂಬುದನ್ನು ಸಾರಿ ಹೇಳಬೇಕಾಗಿದೆ.

ಇಂತಹ ಪುಣ್ಯದ ಕಾರ್ಯ ಮಾಡಿದ ಸಮುದಾಯದ ಯುವಕರಿಗೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು. ಶಿಬಿರದ ಉದ್ಘಾಟನಾ ಸಮಾರಂಭದಲ್ಲಿ ಸಮುದಾಯ ಆರೋಗ್ಯ ಕೇಂದ್ರದ ವೈದ್ಯೆ ಶ್ರೀಮತಿ ಡಾ.ಮಧುಬಾಲಾ ಸಿಂಘಾಲ,ಡಾ. ಗೌರಿ ಕಂತಲಗಾಂವಿ,ಡಾ.ಪಟೇಲ,ಡಾ.ನಮೀರಾ ತೇಲಿ, ಮುಖಂಡರಾದ ಪ್ರಭುಗೌಡ ಮದರಕಲ್ಲ, ಸಿದ್ದನಗೌಡ ಪಾಟೀಲ ನಾವದಗಿ, ಅಬ್ದುಲರಜಾಕ್ ಮನಗೂಳಿ, ಪರಶುರಾಮ ತಂಗಡಗಿ, ಟಿಪ್ಪು ಸುಲ್ತಾನ್ ರಕ್ಷಣಾ ಸಮಿತಿ ಅಧ್ಯಕ್ಷ ಉಮರ ಫಾರೂಖ ಮನಗೂಳಿ, ಉಪಾಧ್ಯಕ್ಷ ರಿಯಾಜ ಡೋಣಿ, ಕಾರ್ಯದರ್ಶಿ ಅಲ್ಲಾಭಕ್ಷ ಚಳ್ಳಿಗಿಡದ, ಮೆಹಬೂಬ ಲಾಹೋರಿ, ಸದ್ದಾಮ್ ಹೊನ್ನಳ್ಳಿ, ಸದ್ದಾಂ ಬೇಪಾರಿ, ರಾಜು ಚಿತ್ತರಗಿ ರೆಹಮಾನ ವಠಾರ,ಅಯಾನ್ ಮಕಾಂದಾರ,ಇಂತಿಯಾಜ ಉಸ್ತಾದ, ಮೋದಿನಸಾ ನಗಾರ್ಚಿ, ಆಸೀಫ ಕೆಂಭಾವಿ, ಇಸಾಕ ಚೌಧರಿ,

ಇಬ್ರಾಹಿಂ ಆರಬೋಳ, ಬುರಾನ ಕಲಾಸಿ,ಶಫೀಕ ಇನಾಮದಾರ, ರಕ್ತನಿಧಿ ವಿಭಾಗದ ಅರುಣಕುಮಾರ ಕಾಂಬಳೆ, ಪ್ರತಿಭಾ ಘೋರ್ಪಡೆ, ಟೆಕ್ನಿಷಿಯನ್ ಅನ್ನಪೂರ್ಣ ದ್ಯಾಪೂರ, ಟಿಪ್ಪು ಸುಲ್ತಾನ್ ರಕ್ಷಣಾ ಸಮಿತಿಯ ಪದಾಧಿಕಾರಿಗಳು ಹಾಗೂ ಸಮುದಾಯ ಆರೋಗ್ಯ ಕೇಂದ್ರದ ಸಿಬ್ಬಂದಿಗಳು ಇದ್ದರು. ಈ ರಕ್ತದಾನ ಶಿಬಿರದಲ್ಲಿ 40 ದಾನಿಗಳು ಸ್ವಯಂ ಪ್ರೇರಿತರಾಗಿ ರಕ್ತದಾನ ಮಾಡಿದರು.

# ಮದೀನಾ ಅಗ್ನಿ ದುರಂತ ಅಬ್ದುಲ್ ಗನಿ ಕುಟುಂಬಕ್ಕೆ ನೆರವಾದ ಸಚಿವ ಜಮೀರ್ ಅಹಮದ್ ಖಾನ್



**ಮಲ್ಲಮ್ಮ ನುಡಿ ವಾರ್ತೆ**

**ಬೆಂಗಳೂರು :** ಮದೀನಾ ಅಗ್ನಿ ದುರಂತದಲ್ಲಿ ಮೃತಪಟ್ಟ ಹುಬ್ಬಳ್ಳಿ ಮೂಲದ ಅಬ್ದುಲ್ ಗನಿ ಶಿರಹಟ್ಟಿ ಅವರ ಕುಟುಂಬಕ್ಕೆ ಸಚಿವ ಜಮೀರ್ ಅಹಮದ್ ಖಾನ್ ನೆರವಾಗಿದ್ದಾರೆ.

ಮೃತ ಅಬ್ದುಲ್ ಗನಿ ಅವರ ಪಾರ್ಥಿವ ಶರೀರದ ಅಂತ್ಯಕ್ರಿಯೆ ನಡೆಸಲು ಅವರ ಕುಟುಂಬದ ಮೂವರು ಸದಸ್ಯರು ಮದೀನಾ ಗೆ ತೆರಳಲು ವೀಸಾ ಸೇರಿದಂತೆ ವಿಮಾನ ಟಿಕೆಟ್, ಅಲ್ಲಿ ಉಳಿದುಕೊಳ್ಳಲು ಹೋಟೆಲ್ ಹಾಗೂ ಇತರೆ ವ್ಯವಸ್ಥೆ ಮಾಡಿಕೊಡುವ ಮೂಲಕ ಮಾನವೀಯತೆ ಮೆರೆದಿದ್ದಾರೆ.

ಅಬ್ದುಲ್ ಗನಿ ಅವರ ಕುಟುಂಬ ಸದಸ್ಯರಾದ ಉಮರ್ ಸಾಬ್, ಮೌಲಾ ಅಲಿ,ಮೈನುದ್ದಿನ್ ಮಖಂದರ್ ಅವರು ಮಂಗಳವಾರ ಬೆಂಗಳೂರಿಂದ ಮದೀನಾ ಗೆ ತೆರಳಿದರು.

ಅಂತ್ಯಕ್ರಿಯೆ ನಂತರ ಮೂವರು ಉಮ್ರಾ ಯಾತ್ರೆ ಮಾಡಿ ವಾಪಸ್ ಬರಲು ಸಚಿವರು ವ್ಯವಸ್ಥೆ ಮಾಡಿಕೊಟ್ಟಿದ್ದಾರೆ. ಮಾರ್ಗ ಮಧ್ಯೆ ವೆಚ್ಚಕ್ಕೆ ಆರ್ಥಿಕ ಸಹಾಯ ಮಾಡಿದ್ದಾರೆ.

ಘಟನೆ ಹಿನ್ನಲೆ ಯಲ್ಲಿ ಅಬ್ದುಲ್ ಗನಿ ಕುಟುಂಬ ಸದಸ್ಯರು ಮದೀನಾ ಗೆ ತೆರಳಲು ಸಂಕಷ್ಟ ಎದುರಿಸುತ್ತಿರುವ ಬಗ್ಗೆ ಮಾಹಿತಿ ಪಡೆದ ಸಚಿವರು ಖುದ್ದು ಬೆಂಗಳೂರಿಗೆ ಕರೆಸಿಕೊಂಡು ವ್ಯವಸ್ಥೆ ಮಾಡಿದರು. ಅವರ ಕುಟುಂಬಕ್ಕೆ ಬೇಕಾದ ಎಲ್ಲ ರೀತಿಯ ನೆರವು ಕಲ್ಪಿಸುವಂತೆ ಹಜ್ ಸಮಿತಿ ಕಾರ್ಯ ನಿರ್ವಹಣಾ ಧಿಕಾರಿ ಸರ್ಫಾರಾಜ್ ಖಾನ್ ಅವರಿಗೆ ಸೂಚನೆ ನೀಡಿದರು.

# ಫಂಡ್ ಎ ಚೈಲ್ಡ್ ಇನ್ ಇಂಡಿಯಾ ಸಂಸ್ಥೆಯಲ್ಲಿ ಮಕ್ಕಳ ದಿನಾಚರಣೆ ಪ್ರಯುಕ್ತ ಚಿತ್ರಕಲಾ ಸ್ಪರ್ಧೆ




**ಮಲ್ಲಮ್ಮ ನುಡಿ ವಾರ್ತೆ**

**ಬೆಂಗಳೂರು:** 2025:*ಫಂಡ್ ಎ ಚೈಲ್ಡ್ ಇನ್ ಇಂಡಿಯಾ (ಎಫ್‌ಸಿಐ) ಸಂಸ್ಥೆಯು "ನಿಮ್ಮ ಕನಸುಗಳನ್ನು ಚಿತ್ರಿಸಿ" ಎಂಬ ಚಿತ್ರಕಲಾ ಸ್ಪರ್ಧೆಯನ್ನು ಯಶಸ್ವಿಯಾಗಿ ಆಯೋಜಿಸುವ ಮೂಲಕ ಈ ವರ್ಷದ ಮಕ್ಕಳ ದಿನಾಚರಣೆಯನ್ನು ಆಚರಿಸಿದೆ. ಆರ್ಥಿಕವಾಗಿ ಹಿಂದುಳಿದ ವರ್ಗದ ಮಕ್ಕಳ ಜೊತೆ ಮಕ್ಕಳ ದಿನಾಚರಣೆಯನ್ನು ಸಂಭ್ರಮಿಸುವ ಉದ್ದೇಶದಿಂದ ಈ ಸ್ಪರ್ಧೆಯನ್ನು ರೂಪಿಸಲಾಗಿತ್ತು. ಕೊಳಗೇರಿಗಳ ಮತ್ತು ಎನ್‌ಜಿಓ ನಡೆಸುತ್ತಿರುವ ಶಾಲೆಗಳ ಮಕ್ಕಳಿಗೆ ತಮ್ಮ ಕನಸುಗಳನ್ನು ಚಿತ್ರಗಳ ಮೂಲಕ ವ್ಯಕ್ತಪಡಿಸುವ ಅವಕಾಶವನ್ನು ಈ ಮೂಲಕ ಒದಗಿಸಲಾಗಿತ್ತು.

ನವೆಂಬರ್ 16ರ ಭಾನುವಾರ ಬೆಂಗಳೂರಿನ ಬಸವನಗುಡಿಯ ಬಿಎಂಎಸ್ ಇಂಜಿನಿಯರಿಂಗ್ ಕಾಲೇಜಿನ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಈ ಕಲಾಸ್ಪರ್ಧೆಯಲ್ಲಿ 1ರಿಂದ 10ನೇ ತರಗತಿವರೆಗಿನ ಸುಮಾರು 500 ಮಕ್ಕಳು ಭಾಗವಹಿಸಿದ್ದರು. 150ಕ್ಕೂಮಂದಿ ಸ್ವಯಂಸೇವಕರ ಬೆಂಬಲದೊಂದಿಗೆ ನಡೆದ ಈ ಸ್ಪರ್ಧೆಯಲ್ಲಿ ಕಾಕ್ಸ್ ಟೌನ್-ದೊಡ್ಡಿಗುಂಟ, ಬೈಯ್ಯಪ್ಪನಹಳ್ಳಿ, ಶ್ರೀರಾಮಪುರದ ಕೊಳಗೇರಿಯ ಮಕ್ಕಳು ಹಾಗೂ ಆರ್ಕ್ ಆಫ್ ದಿ ರೈನ್‌ಬೋ, ಸಮರ್ಥನಂ ಟ್ರಸ್ಟ್ ಫಾರ್ ದಿ ಡಿಸೇಬಲ್ಡ್, ಬ್ರೈಟ್‌ವೇಸ್ ಶಾಲೆ ಮುಂತಾದ ಎನ್‌ಜಿಓ ನಡೆಸುತ್ತಿರುವ ಶಾಲೆಗಳ ಮಕ್ಕಳು ಪಾಲ್ಗೊಂಡರು.

ಬಿಎಂಎಸ್‌ಸಿಇ ಅಧ್ಯಕ್ಷ ಮತ್ತು ಬಿಎಂಎಸ್‌ಇಟಿ ಜೀವಮಾನ ಟ್ರಸ್ಟಿ ಡಾ. ಪಿ. ದಯಾನಂದ ಪೈ ಅವರು, ಬಿಎಂಎಸ್‌ಸಿಇ ಪ್ರಾಂಶುಪಾಲ ಡಾ. ಭೀಮ್ ಷಾ ಆರ್ಯ ಅವರು ಮತ್ತು ಮಾಜಿ ಪ್ರಾಂಶುಪಾಲ ಡಾ. ಸಾಕೇಯ್ ಶಮ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಸಹ-ಪ್ರಾಯೋಜಕರಾದ ಬೆಟರ್ ವರ್ಲ್ಡ್, ಡಾ. ಸುಜಾತಾ ನೇತೃತ್ವದ ಬಿಎಂಎಸ್‌ಸಿಇ ಎನ್‌ಎಸ್‌ಎಸ್ ತಂಡ, ಪ್ರಾಯೋಜಕರು, ದಾನಿಗಳು ಮತ್ತು ಸ್ವಯಂಸೇವಕರು ಎಲ್ಲರಿಗೂ ಎಫ್‌ಸಿಐ ಧನ್ಯವಾದ ಸಲ್ಲಿಸಿದೆ. ವಿಶೇಷವಾಗಿ ಬಿಎಂಎಸ್‌ಸಿಇ ಈ ಸ್ಪರ್ಧೆಯ ಮುಖ್ಯ ಪ್ರಾಯೋಜಕರು ಮತ್ತು ಆತಿಥೇಯ ಸಂಸ್ಥೆಯಾಗಿದ್ದು, ಅವರಿಗೆ ಎಫ್‌ಸಿಐ ತನ್ನ ಕೃತಜ್ಞತೆಗಳನ್ನು ಸಲ್ಲಿಸಿದೆ.

## ಮೇ॥ ಸೋಮಜಾಳ ಕಾಟನ ಮಿಲ್‌ನಲ್ಲಿ ಸಿಸಿಐ ತುರಾಗಿ ಪ್ರಾರಂಭಿಸಬೇಕೆಂದು ಪ್ರತಿಭಟನೆ

ಮಲ್ಲಮ್ಮ ನುಡಿ ವಾರ್ತೆ

**ಕಲಬುರಗಿ:** ಜಿಲ್ಲೆಯ ಜೇವರ್ಗಿ ತಾಲೂಕಿನ ಜೇರಟಗಿ ಗ್ರಾಮದಲ್ಲಿರುವ ಮೇ॥ಸೋಮಜಾಳ ಕಾಟನ ಮಿಲ್‌ನಲ್ಲಿ ಸಿಸಿಐ ತುರಾಗಿ ಪ್ರಾರಂಭಿಸಬೇಕೆಂದು ಭೀಮ ಆರ್ಮಿ ಭಾರತ ಎಕತಾ ಮೀಷನ ವತಿಯಿಂದ ಜಿಲ್ಲಾಧಿಕಾರಿಗಳ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಕಲಬುರಗಿ ಜಿಲ್ಲೆಯ ಜೇವರ್ಗಿ ತಾಲೂಕಿನ ಜೇರಟಗಿ ಗ್ರಾಮದಲ್ಲಿರುವ ಮೇ॥ ಸೋಮಜಾಳ ಕಾಟನ ಮಿಲನಲ್ಲಿ ಸಿನಿಐ ಪ್ರಾರಂಬಿಸದೆ ಇರುವುದರಿಂದ ಸುತ್ತಮುತ್ತಲಿನ ಹಳ್ಳಿಗಳ ಹತ್ತಿ ಬೆಳೆ ಬೆಳೆದ ರೈತರು ತಮ್ಮ ಹತ್ತಿಯನ್ನು ಖರೀದಿ ಕೇಂದ್ರಕ್ಕೆ ನೀಡಲು ರೈತರಿಗೆ ತುಂಬಾ ತೊಂದರೆಯಾಗುತ್ತಿದ್ದು ಸುಮಾರು 40/50 ಕಿಲೋಮಿಟರ ದೂರದ ಜೇವರ್ಗಿಗೆ ಬಂದು ಸಿಸಿಐ ತೆಗೆದುಕೊಳ್ಳಲು ತುಂಬಾ ಹರಸಾಹಸ ಪಡುತ್ತಿದ್ದಾರೆ. ಕೂಡಲೇ ತಾವು ರಿ ಟೆಂಡರ್ ಮಾಡಿ ರೈತರಿಗೆ ಸಹಾಯ ಮಾಡಬೇಕು ಇದರಿಂದ ಕೂಡಲೇ ಸದರಿ ಜೇರಟಗಿ ಗ್ರಾಮದಲದಲ್ಲಿರುವ ಮೇ॥ ಸೋಮಜಾಳ ಕಾಟನ ಮಿಲನಲ್ಲಿ ತುರ್ತಾಗಿ ಸಿಸಿಐ ಪ್ರಾರಂಬಿಸಿ ಸುತ್ತಮುತ್ತಲಿನ ಹಳ್ಳಿಗಳ ರೈತರಿಗೆ 02 – 03 ದಿನಗಳಲ್ಲಿ ಅನುಕೂಲ ಮಾಡಿ ಕೊಡಬೇಕೆಂದು.

ಒಂದು ವೇಳೆ ನಮ್ಮ ಮನವಿಯನ್ನು ವಿಳಂಬ ನೀತಿ ಅನುಸರಿಸಿದರೆ 02–03 ದಿನಗಳ ಆದ ನಂತರ ನಾವು ಎಲ್ಲಾ ರೈತರೊಂದಿಗೆ ಭೀಮ ಆರ್ಮಿ (ಭಾರತ ಎಕತಾ ಮೀಷನ) ಸಂಘಟನೆಯ ವತಿಯಿಂದ ಜಿಲ್ಲಧಿಕಾರಿಗಳ ಕಛೇರಿಯ ಎದುರಗಡೆ ಉಗ್ರಹೋರಾಟ ಹಮ್ಮಿಕೊಳ್ಳಲು ಅನಿವಾರ್ಯವಾಗುತ್ತದೆ ಎಂದು ಮನವಿಯಲ್ಲಿ ತಿಳಿಸಿದ್ದಾರೆ.ಭೀಮ ಆರ್ಮಿ–ಕನಾಟಕ ಜಿಲ್ಲಾಧ್ಯಕ್ಷ ಯಮನೇಶ ಎಂ. ಅಂಕಲಗಿ, ಭೀಮ ಆರ್ಮಿ ಜಿಲ್ಲಾ ಯುವ ಘಟಕದ ಅಧ್ಯಕ್ಷ ಪ್ರದೀಪ ಕಟ್ಟಿ, ಕ.ಕರ್ನಾಟಕ ರೈತ ಘಟಕದ ಕಾರ್ಯಧ್ಯಕ್ಷ ಭೂತಾಳಿ ಕರಗೊಂಡ,ಭೀಮ ಆರ್ಮಿ ಜೇವರ್ಗಿ ಅಧ್ಯಕ್ಷ ಯಮನೇಶ ಹರವಾಳ, ಕ.ಕರ್ನಾಟಕ ರೈತ ಘಟಕದ ಉಪಾಧ್ಯಕ್ಷ ಸಂಜೀವಕುಮಾರ ಕುಡಕಿ, ಕನ್ನಡಪರ ಹೋರಾಟಗಾರ ದೇವಿಂದ್ರ ಮಯೂರ, ಬಸವರಾಜ ಕಣಮೇಶ್ವರ, ನಾಗೇಶ ಹರನಾಳ, ಬುದ್ದು ಅಂಕಲಗಿ, ಶಿವಕುಮಾರ ಕಡಗಂಚಿ, ಜೇಟ್ಟೆಪ್ಪ ಗೊಬ್ಬುರ, ರವಿ ಸಂಗೋಳಗಿ, ನಿಂಗಣ್ಣ ಹಾದಿಮನಿ ಸೇರಿದಂತೆ ಇತರರು ಇದ್ದರು.

# ಬಸವೇಶ್ವರ ಕಾಮರ್ಸ ಕಾಲೇಜಿನಲ್ಲಿ ಕನ್ನಡ ಹಬ್ಬ

# ದೇಶೀ ಉಡುಗೆಯ ರಂಗು–ಜಾನಪದ ನೃತ್ಯ ಸಂಭ್ರಮ



ಮಲ್ಲಮ್ಮ ನುಡಿ ವಾರ್ತೆ

**ಬಾಗಲಕೋಟೆ:** ನ.18–ನಗರದ ಪ್ರತಿಷ್ಠಿತ ಬಿ.ವ್ಹಿ.ವ್ಹಿ. ಸಂಘದ ಬಸವೇಶ್ವರ ವಾಣಿಜ್ಯ ಮಹಾವಿದ್ಯಾಲಯದಲ್ಲಿ ಐಕ್ಯೂಎಸಿ ಅಡಿಯಲ್ಲಿ ಕನ್ನಡ ಸಂಘ, ಕನ್ನಡ ವಿಭಾಗ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಸಮಿತಿಯ ಸಂಯುಕ್ತ ಆಶ್ರಯದಲ್ಲಿ ಕನ್ನಡ ರಾಜ್ಯೋತ್ಸವದ ಅಂಗವಾಗಿ ಕನ್ನಡ ಹಬ್ಬವನ್ನು ಹಮ್ಮಿಕೊಳ್ಳಲಾಗಿತ್ತು.

ಮಹಾವಿದ್ಯಾಲಯದ ಆವರಣವನ್ನು ಬಣ್ಣ ಬಣ್ಣದ ರಂಗೋಲಿ, ಕನ್ನಡ ಬಾವುಟ ಹಾಗೂ ತಳಿರು ತೋರಣಗಳಿಂದ ಸಿಂಗರಿಸಿ ಹಬ್ಬದ ವಾತಾವರಣ ನಿರ್ಮಿಸಲಾಗಿತ್ತು.ಬಿ.ವ್ಹಿ.ವ್ಹಿ.ಸಂಘದ ಕಾಲೇಜು ಆಡಳಿತ ಮಂಡಳಿಯ ಕಾರ್ಯಧ್ಯಕ್ಷ ಗುರುಬಸವ ಸೂಳಿಬಾವಿ ದೀಪ ಬೆಳಗಿಸುವುದರ ಮೂಲಕ ಕನ್ನಡ ಹಬ್ಬಕ್ಕೆ ಚಾಲನೆ ನೀಡಿದರು. ಆಡಳಿತ ಮಂಡಳಿಯ ಪದನಿಮಿತ್ಯ ಕಾರ್ಯದರ್ಶಿ ಡಾ.ಎಸ್.ಎಂ.ಗಾಂವಕರ ಕನ್ನಡ ಧ್ವಜವನ್ನು ಅನಾವರಣಗೊಳಿಸಿ ಮಾತನಾಡಿ, ಭಾಷಾ ಕಲಿಕೆಯಿಂದ ಪ್ರಬುದ್ಧತೆ ಬೆಳೆಯುತ್ತದೆ. ಕನ್ನಡ ನಮ್ಮ ಭಾವೈಕ್ಯತೆಯ ಸೇತುವೆ. ಮಾತೃಭಾಷೆಯಾದ ಕನ್ನಡ ವ್ಯಾಪಾರ–ವ್ಯವಹಾರಗಳನ್ನೂ ಸಾಗಿಸುವ ಅನ್ನದ ಭಾಷೆಯಾಗಿದೆ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ ಕಾಲೇಜಿನ ಪ್ರಾಚಾರ್ಯ ಡಾ.ಜಗನ್ನಾಥ ಚವ್ಹಾಣ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಸಂಸ್ಕೃತಿಯ ಬಗ್ಗೆ ಕಾಳಜಿ ಮೂಡಿಸುವುದು, ನಾಡು–ನುಡಿಯ ಸಂಸ್ಕೃತಿಕ ಸಾಮರ್ಥ್ಯವನ್ನು ವೃದ್ಧಿಸುವುದು ಹಾಗೂ ನಡೆ–ನುಡಿಗಳ ಸಾಂಪ್ರದಾಯಿಕ ಪರಂಪರೆಯ ಬಗ್ಗೆ ಜಾಗೃತಿ ತರಿಸುವುದು ಕನ್ನಡ ಹಬ್ಬದ ಮುಖ್ಯ ಉದ್ದೇಶವಾಗಿದೆ ಎಂದು ವಿವರಿಸಿದರು.

ಕಾರ್ಯಕ್ರಮದ ಸಂಯೋಜಕಿ ಶ್ರೀಮತಿ ಜಿ.ಎಂ.ನಾವದಗಿ, ಕನ್ನಡ ಸಂಘದ ಕಾರ್ಯಧ್ಯಕ್ಷ ಡಾ.ಎಂ.ನಂಜುಂಡಸ್ವಾಮಿ, ಕಾರ್ಯದರ್ಶಿ ಡಾ.ಬಸವರಾಜ ಖೋತ ಸೇರಿದಂತೆ ಕನ್ನಡ ಸಂಘದ ಪದಾಧಿಕಾರಿಗಳು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಕನ್ನಡ ರಾಜ್ಯೋತ್ಸವ ಪ್ರಯುಕ್ತ ಹಮ್ಮಿಕೊಂಡ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರಶಸ್ತಿಗಳನ್ನು ವಿತರಿಸಲಾಯಿತು.

ಡಾ.ಎಂ.ಎಂ.ಹುದ್ದಾರ ನಿರೂಪಿಸಿದರು. ವಿದ್ಯಾರ್ಥಿನಿಯರ ಇಲಕಲ್ ಸೀರೆಯ ಸೊಬಗು, ದೇಶೀಯ ಉಡುಗೆ ಹಾಗೂ ಜಾನಪದ ಹಾಡಿಗೆ ಹಾಕಿದ ಹೆಜ್ಜೆ ಕಾರ್ಯಕ್ರಮಕ್ಕೆ ಕಳೆ ತಂದವು.

## ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷರ ಪ್ರವಾಸ

ಮಲ್ಲಮ್ಮ ನುಡಿ ವಾರ್ತೆ

**ಬಾಗಲಕೋಟೆ:** ನ.18–ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಪಲ್ಲವಿ ಜಿ ಅವರು ನವೆಂಬರ 21 ರಿಂದ 22 ರವರೆಗೆ ಬಾಗಲಕೋಟೆ ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ.

ನವೆಂಬರ 21 ಬೆಳಿಗ್ಗೆ 9.30 ಗಂಟೆಗೆ ಬಾದಾಮಿ ಬನಶಂಕರಿದೇವಿ ದರ್ಶನ ಪಡೆದು 10.30ಕ್ಕೆ ಬಾದಾಮಿ ನಗರದ ಕೊರಚರ ಕಾಲೋನಿ, ಶಿವಪುರ ಗ್ರಾಮಕ್ಕೆ ಭೇಟಿ ನೀಡಿ ಸಮುದಾಯ ಕುಟುಂಬಗಳ ಕುಂದು ಕೊರತೆ ಆಲಿಸಲಿದ್ದಾರೆ. ನಂತರ 12.30ಕ್ಕೆ ದುರ್ಗಾದೇವಿ ದೇವಸ್ಥಾನ ಆನಂದ ನಗರ, ಮಖಾನಗಲ್ಲಿಗೆ ಭೇಟಿ, ಸಂಜೆ 4 ಗಂಟೆಗೆ ಹುನಗುಂದ ತಾಲೂಕಿನ ಉಪ್ಪನಾಳ ಗ್ರಾಮ, ಭೀಮನಘಡ, ಚಿಕ್ಕನಾಳ ಗ್ರಾಮಗಳಿಗೆ ಭೇಟಿ, ಸಂಜೆ 6 ಗಂಟೆಗೆ ಐಹೊಳೆ ಗ್ರಾಮಗಳಿಗೆ ಭೇಟಿ ನೀಡಿ ಶಿಳ್ಳೇಕ್ಯಾತ, ಕೊರಮ ಸಮುದಾಯಗಳನ್ನು ಭೇಟಿ ಮಾಡಿ ಕುಂದುಕೊರತೆ ಆಲಿಸಿ ಬಾಗಲಕೋಟೆ ಪ್ರವಾಸಿ ಮಂದಿರದಲ್ಲಿ ವ್ಯಾಸ್ತವ್ಯ ಹೂಡಲಿದ್ದಾರೆ.

22 ರಂದು ಬೆಳಿಗ್ಗೆ 9.30ಕ್ಕೆ ಜರಗುವ ಶಿವಶರಣ ಮೇದಾರ ಕೇತಯ್ಯನವರ 895ನೇ ರಾಜ್ಯ ಮಟ್ಟದ ಜಯಂತೋತ್ಸವ ಮೆರವಣಿಗೆ ಹಾಗೂ 11.30ಕ್ಕೆ ಜರಗುವ ಬೃಹತ್ ಸಮಾವೇಶ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ನಂತರ ಮಧ್ಯಾಹ್ನ 3.30ಕ್ಕೆ ಕಲಾದಗಿ ಗ್ರಾಮದ ಹರಣಶಿಕಾರಿ ಕಾಲೋನಿಗೆ ಭೇಟಿ ನೀಡಿ ಹರಣಶಿಕಾರಿ ಸಮುದಾಯದವರನ್ನು ಭೇಟಿ ಮಾಡಿ ಕುಂದು ಕೊರತೆ ಆಲಿಸಲಿದ್ದಾರೆ. ಸಂಜೆ 7ಕ್ಕೆ ತಿಮ್ಮಾಪೂರ ಗ್ರಾಮಕ್ಕೆ ಭೇಟಿ ನೀಡಿ ದಿವಂಗತ ಎಚ್.ವಾಯ್.ಮೇಟಿ ಅವರ ಕುಟುಂಬಕ್ಕೆ ಸಾಂತ್ವನ ಹೇಳಲಿದ್ದಾರೆ. ರಾತ್ರಿ 9 ಗಂಟೆಗೆ ಬೆಂಗಳೂರಿಗೆ ಮರು ಪ್ರಯಾಣ ಬೆಳೆಸಲಿದ್ದಾರೆಂದು ಪ್ರಕಟಣೆ ತಿಳಿಸಿದೆ.

## ಆರೋಗ್ಯಕರ ಬದುಕಿಗೆ ಕ್ರೀಡೆ ಬಹು ಮುಖ್ಯ–ಸೂಳಿಭಾವಿ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೊಟೆ,ನ.18–ವಿದ್ಯಾರ್ಥಿಗಳ ಆರೋಗ್ಯಕರ ಬದುಕಿಗೆ ಕ್ರೀಡೆ ಬಹುಮುಖ್ಯವಾಗಿದ್ದು, ಮಾನಸಿಕ ಸ್ಥೈರ್ಯವನ್ನು ಕಟ್ಟಿಕೊಡುವಲ್ಲಿ ಕ್ರೀಡಾಕ್ಷೇತ್ರದ ಪಾತ್ರದೊಡ್ಡದಾಗಿದೆ ಎಂದು ಬಿ.ವಿ.ವಿ. ಸಂಘದ ಕಾಲೇಜುಗಳ ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಗುರುಬಸವ ಸೂಳಿಭಾವಿ ಹೇಳಿದರು.

ನಗರದ ಬಿ.ವಿ.ವಿ. ಸಂಘದ ಅಕ್ಕಮಹಾದೇವಿ ಮಹಿಳಾ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ವಿಜಯಪುರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ಇವರ ಸಂಯುಕ್ತ ಆಶ್ರಯದಲ್ಲಿ 2025–26ನೇ ಸಾಲಿನ ಅಂತರ್ ಕಾಲೇಜುಗಳ ಹಾಕಿ ಮತ್ತು ಫುಟ್ಬಾಲ್ ಪಂದ್ಯಾಟ ಮತ್ತು ವಿಶ್ವವಿದ್ಯಾನಿಲಯ ತಂಡಗಳ ಆಯ್ಕೆಯ ಪ್ರಕ್ರಿಯೆಯನ್ನು ಮಂಗಳವಾರ ಉದ್ಘಾಟಿಸಿ ಮಾತನಾಡಿದ ಅವರು, ಕ್ರೀಡಾಕ್ಷೇತ್ರದಲ್ಲಿ ಭಾರತ ಜಗತ್ತಿನಲ್ಲಿಯೇ ಬಹುದೊಡ್ಡ ಸಾಧನೆ ಮಾಡುತ್ತಿದೆ, ಉತ್ತಮ ಸಾಧಕರನ್ನು ದೇಶಕ್ಕೆ ನೀಡುತ್ತಿದೆ, ಅಲ್ಲದೆ ವಿದ್ಯಾರ್ಥಿಗಳ ಬದು–ಕಿಗೆ ಮಾನಸಿಕ ಹಾಗೂ ದೈಹಿಕ ಸದೃಡತೆಗೆ ಕ್ರೀಡೆ ಅತಿ ಮುಖ್ಯವಾಗಿದೆ ಎಂದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಮಹಿಳಾ ವಿಶ್ವವಿದ್ಯಾಲಯದ ದೈಹಿಕ ಶಿಕ್ಷಣ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ಕಿರಣ್ ಜಿ.ಎನ್. ಮಾತನಾಡಿ, ವಿದ್ಯಾರ್ಥಿನಿಯರಿಗೆ ಕ್ರೀಡೆಯಲ್ಲಿ ಇಂದಿನ ದಿನಗಳಲ್ಲಿ ಹಲವಾರು ಅವಕಾಶಗಳಿವೆ. ಹಲವು ಕಾರಣಗಳಿಂದ ಕ್ರೀಡೆಯಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ತುಂಬಾ ಕಡಿಮೆಯಾಗಿದೆ ಎಂದು ಹೇಳಿ, ಶಿಕ್ಷಣದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿಯೂ ಕೂಡ ವಿದ್ಯಾರ್ಥಿಗಳು ಹೆಚ್ಚು ಪಾಲ್ಗೊಳ್ಳುವುದರಿಂದ ದೈಹಿಕವಾಗಿ, ಮಾನಸಿಕ, ಸಾಮಾಜಿಕ, ಭಾವನಾತ್ಮಕವಾಗಿ ಆರೋಗ್ಯವಾಗಿರಲು ಸಹಾಯಕವಾಗುವುದು ಎಂದರು.

ಅಧ್ಯಕ್ಷತೆಯನ್ನು ಮಹಾವಿದ್ಯಾಲಯದ ಪ್ರಾಚಾರ್ಯೆ ಎಸ್.ಜೆ.ಒಡೆಯರ ವಹಿಸಿದ್ದರು, ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಕ್ರೀಡಾ ನಿರ್ದೇಶನಾಲಯದ ಸಹಾಯಕ ನಿರ್ದೇಶಕರಾದ ಡಾ.ವಿಶ್ವನಾಥ ನಡಕಟ್ಟಿ, ಬಸವೇಶ್ವರ ದೈಹಿಕ ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯ ಡಾ.ಎಸ್.ಎಸ್.ಬಿರಾದಾರ, ನಿವೃತ್ತ ಹಾಕಿ ತರಬೇತಿಗಾರ ಶರಣ ಎ. ನಾವಲಗಿ, ಡಾ.ಎಸ್.ಎಮ್. ಗಾಂವಕರ, ಡಾ.ಎಂ.ವ್ಹಿ.ಬಾಜಪ್ಪನವರ ಪ್ರತಿಜ್ಞಾವಿಧಿ ಬೋಧಿಸಿದರು.

ಅನುಷಾ ಬಾಳಾಗೋಳ ಪ್ರಾರ್ಥಿಸಿದರು. ಪಿ.ಕೆ.ಚೌಗಲಾ ಸ್ವಾಗತಿಸಿದರು. ಎಸ್.ಕೆ.ಹಿರೇಮಠ ನಿರೂಪಿಸಿದರು. ವಿಶ್ವವಿದ್ಯಾಲಯದ ಬೇರೆಬೇರೆ ಮಹಾವಿದ್ಯಾಲಯಗಳಿಂದ ಹಾಕಿ ಹಾಗೂ ಫುಟ್ಬಾಲ್‌ನ 5 ತಂಡಗಳು ಪಾಲ್ಗೊಂಡಿದ್ದವು.

## ಹುಬ್ಬಳ್ಳಿಯಲ್ಲಿ ವಿಶ್ವಕರ್ಮ ಸಾಹಿತ್ಯ ಗ್ರಂಥಾಲಯ ಅಸ್ತಿತ್ವಕ್ಕೆ

## ಸಾಮಾನ್ಯ ಓದುಗರಿಗೂ ಗ್ರಂಥಾಲಯ ಸಹಾಯಕ–ಈರಣ್ಣ



ಮಲ್ಲಮ್ಮ ನುಡಿ ವಾರ್ತೆ

**ಬಾಗಲಕೋಟೆ,ನ.18–** ಪ್ರತಿಯೊಂದು ಸಮಾಜಕ್ಕೆ ಸಾಹಿತ್ಯವೇ ಶಕ್ತಿ. ಸಮಾಜ ತನ್ನ ಇತಿಹಾಸ ಮರೆತರೆ, ಆ ಸಮಾಜ ತನ್ನ ಅಸ್ಮಿತೆಯನ್ನು ಉಳಿಸಿಕೊಳ್ಳಲು ಸಾಧ್ಯವಿಲ್ಲ. ಆದ್ದರಿಂದ ಸಮಾಜ ಬಾಂಧವರು ಸಾಹಿತ್ಯ ಅಧ್ಯಯನ ಕಡೆಗಣಿಸಬಾರದು ಎಂದು ಕರ್ನಾಟಕ ವಿಶ್ವವಿದ್ಯಾನಿಲಯದ ಇತಿಹಾಸ ವಿಭಾಗದ ನಿವೃತ್ತ ಪ್ರಾಧ್ಯಾಪಕ ಡಾ.ಕೆ.ಪಿ.ಈರಣ್ಣ ಹೇಳಿದರು.

ಹುಬ್ಬಳ್ಳಿ ನಗರದ ಅಕ್ಕಸಾಲಿಗರ ಓಣಿಯ ಕಾಳಿಕಾ ಸಮುದಾಯ ಭವನದಲ್ಲಿ ವಿಶ್ವಕರ್ಮ ಸಾಹಿತ್ಯ ಕೃತಿಗಳ ಕಾಳಿಕಾ ಗ್ರಂಥಾಲಯದ ಉದ್ಘಾಟನಾ ಸಮಾರಂಭದ ಮುಖ್ಯ ಅತಿಥಿಗಳಾಗಿ ಮಾತನಾಡಿ, ಹುಬ್ಬಳ್ಳಿಯ ವಿಶ್ವಕರ್ಮ ಸಮಾಜ ಬಾಂಧವರು ವಿಶ್ವಕರ್ಮ ಸಾಹಿತ್ಯ ಗ್ರಂಥಾಲಯವನ್ನು ಆರಂಭಿಸಿರುವುದು ಅವಳಿ ನಗರಗಳ ಈ ಸಮಾಜದ ಸಾಮಾನ್ಯ ಓದುಗರು, ಸಾಹಿತ್ಯ ಆಸಕ್ತರು, ಚಿಂತಕರು ಹಾಗೂ ಲೇಖಕರ ಹೆಚ್ಚಿನ ಅಭ್ಯಾಸಕ್ಕೆ ಅನುಕೂಲವಾಗಲಿದೆ ಎಂದರು.

ಶಂಕರಾಚಾರ್ಯ ಕಡ್ಲಾಸ್ಕರ್ ಗ್ರಂಥಾಲಯವನ್ನು ಉದ್ಘಾಟಿಸಿ ಮಾತನಾಡಿ, ವೈಶ್ವಕರ್ಮಣ ಸಾಹಿತ್ಯದ ಮೇಲೆ ಸಂಶೋಧನೆ ಮಾಡುವ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ವಿಶ್ವಕರ್ಮ ಸಮಾಜದ ಮಹತ್ವದ 500ಕ್ಕೂ ಹೆಚ್ಚು ಸಾಹಿತ್ಯ ಕೃತಿಗಳನ್ನು ಈ ಗ್ರಂಥಾಲಯದಲ್ಲಿ ಸಂಗ್ರಹಿಸಿರುವುದು ವಿಶೇಷವಾಗಿದ್ದು, ಧರ್ಮ ಗ್ರಂಥಗಳ ಅಧ್ಯಯನಾಕಾಂಕ್ಷಿಗಳಿಗೂ ಸಹ ವಿಶ್ವಕರ್ಮ ಸಾಹಿತ್ಯದ ಅಧ್ಯಯನಕ್ಕೆ ಈ ಗ್ರಂಥಾಲಯ ಅನುಕೂಲವಾಗಲಿದೆ. ಇಲ್ಲಿ ಸಮಾಜದ ಪ್ರಮುಖ ಲೇಖಕರ ಕೃತಿಗಳನ್ನು ಸಂಗ್ರಹಿಸಿರುವುದು, ಈ ಗ್ರಂಥಾಲಯಕ್ಕೆ ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಮಹತ್ವ ಪ್ರಾಪ್ತವಾಗಲಿದೆ ಎಂದು ಹೇಳಿದರು.

ಹಳೆ ಹುಬ್ಬಳ್ಳಿಯ ಕಾಳಿಕಾ ಮಹಿಳಾ ಮಂಡಳದ ಅಧ್ಯ–ಕ್ಷೆ ಶ್ರೀಮತಿ ವೀಣಾ ಲಕ್ಕುಂಡಿ ಮತ್ತು ವಿಶ್ವಕರ್ಮ ಮಹಾಸಭಾದ ಮಹಿಳಾ ತಾಲೂಕು ಘಟಕದ ಅಧ್ಯಕ್ಷೆ ಶ್ರೀಮತಿ ಭಾರತಿ ಆಚಾರ್ಯ ಮಾತನಾಡಿದರು.

ವಿಶ್ವಮಯ ಸಾಹಿತ್ಯ ಪ್ರಚಾರ ಸಮಿತಿಯ ಸಂಚಾಲಕ ಭೀಮಸೇನ ಬಡಿಗೇರ ಸ್ವಾಗತಿಸಿದರು. ಇತಿಹಾಸ ತಜ್ಞ ದಿ. ಡಾ.ಶಿಲಾಕಾಂತ ಪತ್ತಾರ ಮತ್ತು ಧಾರವಾಡದ ಸಮಾಜ ಸೇವಕ ದಿ. ಶಿವಣ್ಣ ಬಡಿಗೇರ ಅವರ ಪರಿವಾರದವರು ಗ್ರಂಥಾಲಯಕ್ಕೆ ತಮ್ಮ ಸಂಗ್ರಹದ ಅಮೂಲ್ಯ ಪುಸ್ತಕಗಳನ್ನು ನೀಡಿದರು. ವಿಶ್ವಕರ್ಮ ಪ್ರಮುಖ ಲೇಖಕರುಗಳಾದ ಪುಣೆ–ಯ ಪದ್ಮಾಕರಶಾಸ್ತ್ರಿ ಕ್ಷೀರಸಾಗರ, ಎಂ. ಗಂಗಾಧರಮೂರ್ತಿ, ನಾ.ಭಾ.ಚಂದ್ರಶೇಖರಚಾರ್ಯ, ಜಿ.ಜ್ಞಾನಾನಂದ ಮತ್ತು ಶ್ರೀಮತಿ ಸರಿತಾ ಜ್ಞಾನಾನಂದ, ಟಿ.ವಿ.ಮುತ್ತಾಚಾರ್ಯ, ವಾಸುದೇವಾಚಾರ್ಯ, ಡಾ.ಎಂ. ಎಫ್.ಮೋಹನರಾವ್, ಮಾಗೋಡು ಲಿಂಗಾಚಾರ್ಯ, ಪ್ರೊ.ವಿ.ಜಿ.ದೀಕ್ಷಿತ, ಡಾ.ಕೆ.ಪಿ.ಈರಣ್ಣ, ಅರ್ಜುನಾಚಾರ್ಯ ತೆಂಗಲೀಕರ, ಮತ್ತು ನರಸಿಂಹರಾವ್ ಹೇಮನೂರ ಅವರ ಪ್ರಮುಖ ಕೃತಿಗಳು ಸೇರಿವೆ ಈ ಗ್ರಂಥಾಲಯದಲ್ಲಿ ಲಭ್ಯವಿವೆ ಎಂದು ಭೀಮಸೇನ ಬಡಿಗೇರ ತಿಳಿಸಿದರು.

ಶ್ರೀಮತಿ ಶ್ಯಾಮಲಾ ಶಿಲಾಕಾಂತ ಪತ್ತಾರ ಉಪಸ್ಥಿತರಿದ್ದರು ಹುಬ್ಬಳ್ಳಿಯ ವಿಶ್ವಕರ್ಮ ದೇವಸ್ಥಾನ ಟ್ರಸ್ಟಿನ ಅಧ್ಯಕ್ಷ ಮನೋಹರ ಲಕ್ಕುಂಡಿ ಅಧ್ಯಕ್ಷತೆ ವಹಿಸಿದ್ದರು. ಶ್ರೀಮತಿ ಜ್ಯೋತಿ ಬೆಳ್ಳಿಗಟ್ಟಿ ಸಹೋದರಿಯರು ಪ್ರಾರ್ಥಿಸಿದರು. ಮೋಹನ ನರಗುಂದ ವಂದಿಸಿದರು.

## ರಸ್ತೆ ಅಪಘಾತ-ಓರ್ವ ಸಾವು

ಮಲ್ಲಮ್ಮ ನುಡಿ ವಾರ್ತೆ

**ಬಾಗಲಕೋಟೆ:** ನ.18–ಬಾಗಲಕೋಟೆ–ರಾಂಪುರ ರಸ್ತೆಯಲ್ಲಿ ಸಂಗಮಕ್ರಾಸ್ ಬಳಿ ಮಂಗಳವಾರ ಸಾಯಂಕಾಲ ಕೆಎಸ್‌ಆರ್‌ಟಿಸಿ ಬಸ್ ಹಾಗೂ ಬೈಕ್ ಮಧ್ಯೆ ಡಿಕ್ಕಿ ಸಂಭವಿಸಿ ಬೈಕ್ ಸವಾರ ಸ್ಥಳದಲ್ಲಿಯೇ ಮೃತಪಟ್ಟ ಘಟನೆ ನಡೆದಿದೆ.

ಮೃತ ಬೈಕ್ ಸವಾರನನ್ನು ಬಾಗಲಕೋಟೆ ತಾಲ್ಲೂಕಿನ ಅಚನೂರ ಗ್ರಾಮದ ಚಂದ್ರಶೇಖರ ಬಸನಗೌಡ ಪಾಟೀಲ(57) ಎಂದು ಗುರುತಿಸಲಾಗಿದೆ.

ಬಾಗಲಕೋಟೆ ಘಟಕಕ್ಕೆ ಸೇರಿದ ಬಸ್ಸು ಮುದ್ದೇಬಿಹಾಳದಿಂದ ಬಾಗಲಕೋಟೆಗೆ ಹೊರಟಿದ್ದು, ಬೈಕ್ ಸವಾರ ಸಂಗಮಕ್ರಾಸ್ ಕಡೆಯಿಂದ ಅಚನೂರ ಗ್ರಾಮಕ್ಕೆ ತೆರಳುತ್ತಿದ್ದನು. ಈ ಕುರಿತು ಬಾಗಲಕೋಟೆ ಗ್ರಾಮೀಣ ಪೋಲಿಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ನ.25 ತ್ರೈಮಾಸಿಕ ಕೆಡಿಪಿ ಸಭೆ

ಮಲ್ಲಮ್ಮ ನುಡಿ ವಾರ್ತೆ

**ಬಾಗಲಕೋಟೆ:** ನ.18–ಪ್ರಸಕ್ತ ಸಾಲಿನ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ ದ್ವಿತೀಯ ತ್ರೈಮಾಸಿಕ ಕೆಡಿಪಿ ಪ್ರಗತಿ ಪರಿಶೀಲನಾ ಸಭೆ ನವೆಂಬರ 25 ರಂದು ಬೆಳಿಗ್ಗೆ 10.30 ಗಂಟೆಗೆ ಜಿಲ್ಲಾ ಪಂಚಾಯತ ನೂತನ ಸಭಾಭವನದಲ್ಲಿ ಅಬಕಾರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಜರುಗಲಿದೆ ಎಂದು ಜಿ.ಪಂ ಸಿಇಓ ಶಶಿಧರ ಕುರೇರ ತಿಳಿಸಿದ್ದಾರೆ.

## ಶಿವಣಿ ಪಿಕೆಪಿಎಸ್‌ನಲ್ಲಿ ಸೋಯಾ ಖರೀದಿಗೆ ಚಾಲನೆ



ಮಲ್ಲಮ್ಮ ನುಡಿ ವಾರ್ತೆ

**ಭಾಲ್ಕಿ:** ತಾಲೂಕಿನ ಗಡಿಭಾಗದ ಶಿವಣಿ ಗ್ರಾಮದಲ್ಲಿ ಸೋಯಾ ಅವರೆ ಖರೀದಿಗೆ ಕೇಂದ್ರ–ಕ್ಕೆ ಚಾಲನೆ ನೀಡಲಾಯಿತು. ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ(ಪಿಕೆಪಿಎಸ್)ದಲ್ಲಿ ಮಂಗಳವಾರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಶಿವಾಜಿ ಪಾಟೀಲ್ ತೂಕದ ಯಂತ್ರಕ್ಕೆ ಪೂಜೆ ನೆರವೇರಿಸಿ ಖರೀದಿ ಕೇಂದ್ರಕ್ಕೆ ಚಾಲನೆ ನೀಡಿದರು. ನಂತರ ಮಾತನಾಡಿದ ಅವರು, ಗಡಿಭಾಗದ ರೈತರ ಅನುಕೂಲಕ್ಕಾಗಿ ಸೋಯಾ ಅವರೆ ಖರೀದಿ ಕೇಂದ್ರ ತೆರೆಯಲಾಗಿದೆ. ಪ್ರತಿ ಕ್ವಿಂಟಲ್ ಸೋಯಾ ಅವರೆಗೆ ಸರಕಾರ 5328 ರೂ ನಿಗದಿಪಡಿಸಿದ್ದು ಪ್ರತಿ ರೈತರಿಂದ 5 ರಿಂದ 20 ಕ್ವಿಂಟಲ್ ವರೆಗೂ ಸೋಯಾ ಅವರೆ ಖರೀದಿಗೆ ಅವಕಾಶ ಇದೆ.

ಶಿವಣಿ, ಭಾಟಸಾಂಗವಿ ಮತ್ತು ತಮಗ್ಯಾಳ ಗ್ರಾಮದ ರೈತರು ತಾವು ಬೆಳೆದ ಸೋಯಾ ಅವರೆ ಈ ಖರೀದಿ ಕೇಂದ್ರಕ್ಕೆ ಪೂರೈಸಿ ಸರಕಾರದ ಬೆಂಬಲ ಬೆಲೆಯ ಸದುಪಯೋಗಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಸಂಘದ ಉಪಾಧ್ಯಕ್ಷ ರಾಜಕುಮಾರ ಮಡಿವಾಳ, ನಿರ್ದೇಶಕರಾದ ಬಾಬುರಾವ ಬೇಲೂರೆ, ರಾಮರತನ ಭುಜಂಗೆ, ಅಪ್ಪರಾವ ಭದಾಡೆ, ವಾಮನ ಕಾನೇಕರ್, ಸಿದ್ರಾಮ ಬೋಗಳೆ, ಮಲ್ಲಿಕಾರ್ಜುನ ತುಕ್ಕಣ್ಣ, ಕಲ್ಯಾಣಿ ಪಾರಶೆಟ್ಟಿ, ಕಾರ್ಯದರ್ಶಿ ರಮೇಶ ಕನಶೆಟ್ಟೆ ಸೇರಿದಂತೆ ಸಿಬ್ಬಂದಿ ವರ್ಗದವರು ಇದ್ದರು.

# ಇಂದಿನಿಂದ ಶಿರಸಂಗಿಯಲ್ಲಿ ವಿಶ್ವಕರ್ಮ ಪೂಜಾ ಮಹೋತ್ಸವ

ಮಲ್ಲಮ್ಮ ನುಡಿ ವಾರ್ತೆ

**ಬಾಗಲಕೋಟೆ:** ನ.18–ಬೆಳಗಾವಿ ಜಿಲ್ಲೆ ಶಿರಸಂಗಿಯಲ್ಲಿರುವ ವಿಶ್ವಕರ್ಮರ ಕುಲದೇವತೆ ಶ್ರೀ ಕಾಳಿಕಾದೇವಿ ಕ್ಷೇತ್ರದಲ್ಲಿ ನ.19 ರಿಂದ ಎರಡು ದಿನಗಳ ಕಾಲ 25 ನೇ ವಿಶ್ವಕರ್ಮ ಪೂಜಾ ಮಹೋತ್ಸವ ಜರುಗಲಿದೆ ಎಂದು ವಿಶ್ವಕರ್ಮ ಸಮಾಜ ವಿಕಾಸ ಸಂಸ್ಥೆಯ ಅಧ್ಯಕ್ಷ ಪ್ರೊ. ಪಿ.ಬಿ ಬಡಿಗೇರ ತಿಳಿಸಿದ್ದಾರೆ.

ಪೂಜಾ ಮಹೋತ್ಸವದ ಅಂಗವಾಗಿ ಶ್ರೀಕಾಳಿಕಾ ದೇವಸ್ಥಾನದ ಆವರಣದಲ್ಲಿ ರಾಜ್ಯಮಟ್ಟದ ಕಲಾ ಪ್ರದರ್ಶನ ಹಾಗೂ ಮಹಿಳಾ ಕರಕುಶಲ ವಸ್ತುಗಳ ಪ್ರದರ್ಶನ, ವಿಶ್ವಶಿಲ್ಪಿ ಡಂಕಣಾಚಾರ್ಯ ಪ್ರಶಸ್ತಿ ಹಾಗೂ ವಿವಿಧ ಕ್ಷೇತ್ರಗಳಲ್ಲಿನ ಸಾಧಕರಿಗೆ ವಿಶ್ವಕರ್ಮ ಭೂಷಣ ಪ್ರಶಸ್ತಿ ಪ್ರದಾನ, ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಕಲಾವಿದರ ಸನ್ಮಾನ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.

ನ.19ರಂದು ಬೆಳಿಗ್ಗೆ 8 ಗಂಟೆಗೆ ಸಂಸ್ಥೆಯ ಅಧ್ಯಕ್ಷ ಪ್ರೊ.ಪಿ.ಬಿ.ಬಡಿಗೇರ ಅವರಿಂದ ವಿಶ್ವಕರ್ಮ ಧ್ವಜಾರೋಹಣದೊಂದಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗುವುದು. ನಂತರ ಶ್ರೀ ಕಾಳಿಕಾದೇವಿ ಹಾಗೂ ವಿಶ್ವಕರ್ಮ ದೇವರುಗಳಿಗೆ ಅಭಿಷೇಕ ಹಾಗೂ ಪೂಜಾ ಕಾಣಿಕೆಗಳ ಅರ್ಪಣೆಯೊಂದಿಗೆ ಧಾರ್ಮಿಕ ವಿಧಿಗಳು ಆರಂಭಗೊಳ್ಳುವವು. 10 ಗಂಟೆಗೆ ಶಿರಸಂಗಿ ಗ್ರಾಮದಲ್ಲಿ ಪೂರ್ಣಕುಂಭ ಹಾಗೂ ಕಲಾ ಮೇಳಗಳೊಂದಿಗೆ ವಿಶ್ವಕರ್ಮ ಪ್ರಭುವಿನ ಪಂಚಲೋಹದ ಮೂರ್ತಿಯ ಮೆರವಣಿಗೆ ಜರುಗುವುದು.

11 ಗಂಟೆಗೆ ಆರಂಭವಾಗುವ ವೇದಿಕೆ ಕಾರ್ಯಕ್ರಮಕ್ಕೆ ಸವದತ್ತಿ ಶಾಸಕ ವಿಶ್ವಾಸ ವೈದ್ಯ ಅವರು ಚಾಲನೆ ನೀಡುವರು. ನಂತರ ವಿದ್ಯಾರ್ಥಿ ಪ್ರತಿಭಾ ಪುರಸ್ಕಾರ ಹಾಗೂ ವಿವಿಧ ಕ್ಷೇತ್ರಗಳ ಪ್ರಶಸ್ತಿ ಪುರಸ್ಕೃತ ಕಲಾವಿದರುಗಳನ್ನು ಸನ್ಮಾನಿಸಲಾಗುವುದು.

ಪ್ರತಿ ವರ್ಷ ನೀಡಲಾಗುತ್ತಿರುವ ವಿಶ್ವಶಿಲ್ಪಿ ಡಂಕಣಾಚಾರ್ಯ ಪ್ರಶಸ್ತಿಯನ್ನು ಈ ಬಾರಿ ಉಡುಪಿಯ ಶಿಲ್ಪಿ ಶರತ್ ಎಲ್.ಆಚಾರ್ ಅವರಿಗೆ ಪ್ರದಾನ ಮಾಡಲಾಗುತ್ತಿದೆ. ಉಳಿದಂತೆ ವಿಶ್ವಕರ್ಮ ಭೂಷಣ ಪ್ರಶಸ್ತಿಗಳನ್ನು ಹಿಂದುಸ್ತಾನಿ ಸಂಗೀತ ಕಲಾವಿದ ಪಂ.ದೇವೇಂದ್ರಕುಮಾರ್ ಪತ್ತಾರ, ಬೆಂಗಳೂರು ಶಿಲ್ಪಿ ಬಸಣ್ಣ ಬಡಿಗೇರ, ಯಾದಗಿರ ರಜತ ಶಿಲ್ಪಿ ನಾಗಪ್ಪ ಗಂಗೂರ, ಬಾಗಲಕೋಟ ರಂಗಕರ್ಮಿ ಸಿ.ಟಿ.ಬ್ರಹ್ಮಾಚಾರ, ಸಾಗರದ ಸಾಹಿತಿ ನರಸಿಂಗರಾವ ಹೇಮನೂರ, ಕಲಬುರ್ಗಿಯ ಚಿತ್ರಕಲಾವಿದ ಎಂ.ಕೆ.ಪತ್ತಾರ, ವಿಜಯಪುರದ ಬಿ.ಎ.ಆಚಾರ್, ಮಣಿಪಾಲದ ಕಾಷ್ಠ ಶಿಲ್ಪಿ ಚಂದ್ರಶೇಖರ ವೈ.ಶಿಲ್ಪಿ, ಕಲಬುರ್ಗಿಯ ಪುರೋಹಿತ ವೇ.ಮೂ. ಮುಕುಂದಾಚಾರ್ ಗುರುವಿನ, ಹುಬ್ಬಳ್ಳಿಯ ಶಿಲ್ಪಿ ಶ್ರೀಮತಿ ಶಕುಂತಲಾ ಬಡಿಗೇರ, ಕಲಬುರ್ಗಿಯ ಸಮಾಜಸೇವಕ ನಾಗಲಿಂಗಪ್ಪ ಪತ್ತಾರ, ಗಂಗಾವತಿ ಅವರಿಗೆ ಪ್ರದಾನ ಮಾಡಲಾಗುವುದು.

ಸಮಾರಂಭದ ಸಾನಿಧ್ಯವನ್ನು ನವಲಗುಂದ ಅಜಾತ ನಾಗಲಿಂಗೇಶ್ವರ ಮಠದ ಪೀಠಾಧ್ಯಕ್ಷರಾದ ವೀರೇಂದ್ರಮಹಾಸ್ವಾಮಿಗಳು [illegible] ಕಾಳಿಕಾದೇವಿ ದೇವಸ್ಥಾನದ ಪ್ರಧಾನ ಅರ್ಚಕ ತೇಜಪ್ಪ ಆಚಾರ್ಯ ಮೂಕಿ ವಹಿಸುವರು.

ಉತ್ಸವದ ಎರಡನೇ ದಿನ ನ.20ರಂದು ಧಾರ್ಮಿಕ ಸಭೆ ಬೆಳಗ್ಗೆ 10 ಗಂಟೆಗೆ ಆರಂಭಗೊಳ್ಳುವುದು. ಈ ಸಭೆಯಲ್ಲಿ ರಾಜ್ಯ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮದ ಅಧ್ಯಕ್ಷ ಸುಜ್ಞಾನಮೂರ್ತಿ ಪಿ ಸೇರಿದಂತೆ ಹಲವು ಗಣ್ಯರು ಪಾಲ್ಗೊಳ್ಳುತ್ತಿದ್ದು, ಸಾನಿಧ್ಯವನ್ನು ಚಿಕ್ಕುಂಬಿಯ ಶ್ರೀ ನಾಗಲಿಂಗೇಶ್ವರ ಮಠದ ಶ್ರೀ ಅಭಿನವ ನಾಗಲಿಂಗ ಮಹಾಸ್ವಾಮಿಗಳು ವಹಿಸುವರು.

ಏಕವ್ಯಕ್ತಿ ಶಿಲ್ಪಕಲೆ ಮತ್ತು ಚಿತ್ರಕಲಾ ಪ್ರದರ್ಶನದ ಕಲಾವಿದರನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಗುವುದು. ಅಧ್ಯಕ್ಷತೆಯನ್ನು ವಿಶ್ವಕರ್ಮ ಸಮಾಜ ವಿಕಾಸ ಸಂಸ್ಥೆಯ ಅಧ್ಯಕ್ಷ ಪ್ರೊ. ಪಿ.ಬಿ.ಬಡಿಗೇರ ವಹಿಸುವರು. ವಿಶ್ವಕರ್ಮ ಪ್ರತಿಷ್ಠಾನದ ಅಧ್ಯಕ್ಷ ಮೌನೇಶ್ವರ ಸುಳ್ಳದ ನೇತೃತ್ವ ವಹಿಸುವರು.

# ವಿವಿಧೆಡೆ ಸಿಇಓ ಭೇಟಿ ಕಾಮಗಾರಿಗಳ ಪರಿಶೀಲನೆ



ಮಲ್ಲಮ್ಮ ನುಡಿ ವಾರ್ತೆ

**ಬಾಗಲಕೋಟೆ:** ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಾಹಕಅಧಿಕಾರಿ ಶಶಿಧರ ಕುರೇರ ಮಂಗಳವಾರ ಹುನಗುಂದ ಹಾಗೂ ಇಳಕಲ್ಲ ತಾಲ್ಲೂಕಿನ ಚಿಕ್ಕಕೊಡಗಲಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳು ಹಾಗೂ ಪ್ರಗತಿಯಲ್ಲಿರುವ ಕಾಮಗಾರಿಗಳ ಪರಿಶೀಲನೆ ನಡೆಸಿದರು.

ಚಿಕ್ಕ ಕೊಡಗಲಿ ಗ್ರಾಮ ಪಂಚಾಯಿತಿ ಕಚೇರಿಗೆ ಭೇಟಿ ನೀಡಿ, ಪಂಚಾಯಿತಿಯಿಂದ ಜಾರಿಗೊಳ್ಳುತ್ತಿರುವ ಕಾಯಕ ಗ್ರಾಮ ಯೋಜನೆಯ ಪ್ರಗತಿ, ವಿವಿಧ ಅಭಿವೃದ್ಧಿ ಯೋಜನೆಗಳ ಅನುಷ್ಠಾನ, ಗ್ರಾಮ ಮಟ್ಟದಲ್ಲಿ ನಡೆಯುತ್ತಿರುವ ಕಾಮಗಾರಿಗಳ ಹಣಕಾಸು ಬಳಕೆ, ಫಲಾನುಭವಿಗಳ ಪಟ್ಟಿ ಮತ್ತು ಇತರೆ ಆಡಳಿತಾತ್ಮಕ ವಿಷಯಗಳನ್ನು ಸಮಗ್ರವಾಗಿ ಪರಿಶೀಲಿಸಿದರು. ಯೋಜನೆಗಳ ಪರಿಣಾಮಕಾರಿ ಜಾರಿಗೆ ಅಗತ್ಯ ಸೂಚನೆಗಳನ್ನು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಿಬ್ಬಂದಿಗಳಿಗೆ ನೀಡಿದರು.

ಅದೇ ಗ್ರಾಮದಲ್ಲಿ ನಿರ್ಮಾಣ ಹಂತದಲ್ಲಿರುವ ಝೋನಲ್ ಬ್ಯಾಲೆನ್ಸ್ ಟ್ಯಾಂಕ್ ಕಾಮಗಾರಿಯ ಸ್ಥಳಕ್ಕೆ ಭೇಟಿ ನೀಡಿ ಕಾರ್ಯದ ಗುಣಮಟ್ಟ, ಕಾಮಗಾರಿಯ ವೇಗ, ತಾಂತ್ರಿಕ ಮಾನದಂಡಗಳು ಹಾಗೂ ನೀರಿನ ಸರಬರಾಜು ವ್ಯವಸ್ಥೆಗೆ ಇದರಿಂದ ಲಭ್ಯವಾಗುವ ಪ್ರಯೋಜನಗಳ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದು ಸ್ಥಳ ಪರಿಶೀಲನೆ ನಡೆಸಿದರು.

ಇದೇ ವೇಳೆ ಎಲ್.ಟಿ. ವಲಯದಲ್ಲಿರುವ ಎಸ್.ಸಿ., ಎಸ್.ಟಿ. ಕಾಲೋನಿಯಲ್ಲಿ ಪ್ರದೇಶಕ್ಕೆ ಭೇಟಿ ನೀಡಿ ಕಾಂಕ್ರೀಟ್ ರಸ್ತೆ ನಿರ್ಮಾಣ ಕಾರ್ಯವನ್ನು ಪರಿಶೀಲಿಸಿದರಲ್ಲದೇ, ನಿರ್ಮಾಣ ಹಂತದಲ್ಲಿರುವ ಶಾಲಾ ಕಟ್ಟಡ ಕಾರ್ಯವನ್ನು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಪರಿಶೀಲಿಸಿದರು. ಕಟ್ಟಡದ ಗುಣಮಟ್ಟ, ತರಗತಿ ಕೊಠಡಿಗಳ ವಿನ್ಯಾಸ, ಶೌಚಾಲಯ ಹಾಗೂ ಕುಡಿಯುವ ನೀರಿನ ವ್ಯವಸ್ಥೆ, ಮಕ್ಕಳಿಗೆ ಬೇಕಾಗಿರುವ ಮೂಲ ಸೌಕರ್ಯಗಳ ಪ್ರಸ್ತುತ ಸ್ಥಿತಿ ಹಾಗೂ ಕಾಮಗಾರಿಯ ನಿರೀಕ್ಷಿತ ಪೂರ್ಣಗೊಳಿಸುವಿಕೆ ಕುರಿತು ಸಂಬಂಧಿಸಿದ ಇಂಜಿನಿಯರ್‌ಗಳು ಮತ್ತು ಗುತ್ತಿಗೆದಾರರೊಂದಿಗೆ ಸಮಾಲೋಚನೆ ಮಾಡಿದರು.

ಇಳಕಲ್ಲ ತಾಲ್ಲೂಕಿನ ಬಲಕುಂದಿ ಗ್ರಾಮಕ್ಕೆ ಭೇಟಿ ನೀಡಿ ಪ್ರಗತಿಯಲ್ಲಿರುವ ಎಫ್‌ಎಸ್‌ಟಿಪಿ ಕಾಮಗಾರಿಯ ಸ್ಥಳ ಪರಿಶೀಲನೆ ನಡೆಸಿದರು. ಕಾಮಗಾರಿಯ ತಾಂತ್ರಿಕ ಮಾನದಂಡಗಳು, ಕಾರ್ಯದ ಗುಣಮಟ್ಟ, ಕಾಮಗಾರಿಯ ಪ್ರಗತಿ, ಪರಿಸರ ಸುರಕ್ಷತಾ ಕ್ರಮಗಳು ಹಾಗೂ ಯೋಜನೆಯ ಸಮಯ ಪಾಲನೆ ಕುರಿತು ಸಂಬಂಧಿತ ಅಧಿಕಾರಿಗಳು ಮತ್ತು ಇಂಜಿನಿಯರ್‌ಗಳಿಂದ ಮಾಹಿತಿಯನ್ನು ಪಡೆದುಕೊಂಡರಲ್ಲದೇ ಕಾರ್ಯವನ್ನು ನಿಗದಿತ ಅವಧಿಯೊಳಗೆ ಗುಣಮಟ್ಟದೊಂದಿಗೆ ಪೂರ್ಣಗೊಳಿಸಲು ಅಗತ್ಯ ಸೂಚನೆಗಳನ್ನು ನೀಡಿದರು.

ಈ ಸಂದರ್ಭದಲ್ಲಿ ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ ಬಾಗಲಕೋಟೆಯ ಕಾರ್ಯನಿರ್ವಾಹಕ ಅಭಿಯಂತರ ಆಕಾಶ ವಂದೆ,

ಹುನಗುಂದ ಹಾಗೂ ಇಳಕಲ್ಲ ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಮುರಳಿ ದೇಶಪಾಂಡೆ ಸೇರಿದಂತೆ ಇತರರು ಇದ್ದರು.

# ಹೊಸ ಬಸ್ ನಿಲ್ದಾಣದ ಮುಂಭಾಗದಲ್ಲಿ ವ್ಯಾಪಾರಕ್ಕೆ ಅನುವು ನಗರಸಭೆಯಿಂದ ಕ್ರಮ

ಮಲ್ಲಮ್ಮ ನುಡಿ ವಾರ್ತೆ

**ಯಾದಗಿರಿ:** ಕಳೆದ ಕೆಲ ದಿನಗಳ ಹಿಂದೆ ತೆರವು ಮಾಡಲಾಗಿದ್ದ ಹೊಸ ಬಸ್ ನಿಲ್ದಾಣದ ಮುಂಭಾಗದ ಸ್ಥಳದಲ್ಲಿ ಈಗ ಹೂ, ಹಣ್ಣು ಮಾರುವ ಕೈ ಬಂಡಿ ವ್ಯಾಪಾರಿಗಳಿಗೆ ಸ್ಥಳಾವಕಾಶ ಮಾಡಿಕೊಡಲು ನಗರಸಭೆ ನಿರ್ಧರಿಸಿದ್ದು, ಇದೇ ವೇಳೆ ಈಗಿದ್ದ ಆಟೋ ನಿಲ್ದಾಣದಲ್ಲಿಯೇ ತಕ್ಕ ಮಟ್ಟಿನ ಆಟೋರಿಕ್ಷಾಗಳು ನಿಲ್ಲಿಸಲು ಕೂಡಾ ಅನುಮತಿ ನೀಡಿದೆ. ಆದರೇ ಇದೇ ಸ್ಥಳದಲ್ಲಿ ಮೊದಲು ಇದ್ದ ಉಪಹಾರದ ಕೈಬಂಡಿ ವ್ಯಾಪಾರಿಗಳಿಗೆ ಬಸ್ ನಿಲ್ದಾಣದ ಕಂಪೌಂಡ ಗೋಡೆ ಪಕ್ಕದ ಎಪಿಎಂಸಿ ಸ್ಥಳದಲ್ಲಿ ಜಾಗ ನೀಡುವ ಮೂಲಕ ಮೂರು ತರಹ ವ್ಯಾಪಾಸ್ಥರಿಗೆ ನಗರಸಭೆ ಸಮಾಧಾನಕರ ಬಹುಮಾನ ನೀಡಿದೆ.

ನಿಲ್ದಾಣದ ಮುಂಭಾಗದಲ್ಲಿಯೇ ವ್ಯಾಪಾರಕ್ಕೆ ಮೊದಲಿದ್ದ ಚಹಾ, ಉಪಹಾರ ಮತ್ತು ಹೂ,

ಹಣ್ಣಿನ ವ್ಯಾಪಾರಿಗಳು ನಗರಸಭೆ ಆಯುಕ್ತರಿಗೆ ಸೋಮವಾರ ಭೇಟಿಯಾಗಿ ಮನವಿ ಸಲ್ಲಿಸಿ ಪಟ್ಟು ಹಿಡಿದಿದ್ದರು. ಇದರಿಂದಾಗಿ ಮಂಗಳವಾರ ಸ್ಥಳಕ್ಕೆ ಭೇಟಿ ನೀಡಿದ್ದ ಪೌರಾಯುಕ್ತ ಉಮೇಶ ಚವ್ಹಾಣ ಹಾಗೂ ಶಿವಪುತ್ರಪ್ಪ ಇತರೇ ಅಧಿಕಾರಿ ಮತ್ತು ಸಿಬ್ಬಂದಿ ತೆರವುಗೊಳಿಸಿದ್ದ ಆ ಸ್ಥಳವನ್ನು ಸಂಪೂರ್ಣವಾಗಿ ಪರಿಶೀಲಿಸಿದರು. ಈ ವೇಳೆ ನಿಲ್ದಾಣದ ಮುಂಭಾಗದ ಮೊದಲಿನ ಸ್ಥಳದಲ್ಲಿ ಒಂದರ ಪಕ್ಕ ಒಂದು ಬಂಡಿಗಳನ್ನು ಇಟ್ಟು ಹೂ, ಹಣ್ಣು ಮಾರಾಟ ಮಾಡಲು ಅನುವು ಮಾಡಿಕೊಡಲಾಗಿದೆ. ಹಿಂದೆ ಇದ್ದ ಆಟೋ ನಿಲ್ದಾಣ ಯಥಾಸ್ಥಳದಲ್ಲಿ ಇದ್ದು ಹೆಚ್ಚಿನ ಆಟೋಗಳನ್ನು ನಿಲ್ಲಿಸಿ ಮುಖ್ಯ ರಸ್ತೆ ಸ್ಥಳ ಜಾಮ್ ಮಾಡಬಾರದೆಂದು ಆಯುಕ್ತರು ಆಟೋ ಚಾಲಕರಿಗೆ ತಿಳಿಸಿದ್ದಾರೆ. ಇನ್ನೂ ಚಹಾ, ಉಪಹಾರಗಳ ಕೈಬಂಡಿ ವ್ಯಾಪಾರಿಗಳು ಯಾವುದೇ ತರಹದ. ಕಿರಿ, ಕಿರಿ ಮಾಡದೇ ಬಸ್ ನಿಲ್ದಾಣದ ಪಕ್ಕದ ಸ್ಥಳದಲ್ಲಿ ವ್ಯಾಪಾರ ಮಾಡಬೇಕೆಂದು ತಿಳಿಸುವ ಮೂಲಕ ವ್ಯಾಪಾರಿಗಳ ಬೇಡಿಕೆಗೆ ಸ್ಪಂಧಿಸಿದೆ.



### ಸಂಚಾರಿ ಪೊಲೀಸರು ಇರಲಿ

ಹೊಸ ಬಸ್ ನಿಲ್ದಾಣದ ಮುಂದೆ ದಿನದ 15 ತಾಸು ಹೆಚ್ಚಿನ ಸಂಚಾರ ಇರುತ್ತದೆ. ಅದರಲ್ಲಿ ನಿಲ್ದಾಣದಿಂದ ಬಸ್‌ಗಳು ಹೊರಗೆ ಹೋಗುವುದು ಮತ್ತೇ ಹೊರಗಿದ ಅನೇಕ ಬಸ್ ಗಳು ಒಳಗೆ ಹೋಗುವಾಗ ಎದುರಿಗೆ ಬರುವ ವಾಹನಗಳಿಂದ ಭಾರಿ ಕಿರಿ, ಕಿರಿ ಅನುಭವಿಸುವ ಸ್ಥಿತಿ ಇಲ್ಲಿದ್ದು, ಸಂಚಾರಿ ಪೊಲೀಸರು ದಿನದ 15 ತಾಸು ಕರೆಟ್ಟ್ ಆಗಿ ಕೆಲಸ ಮಾಡಿದರೇ ಸಂಚಾರ ನಿಯಂತ್ರಣಕ್ಕೆ ಬರುತ್ತದೆ ಎಂದು ಬಸ್ ನಿಲ್ದಾಣದ ಮುಂಭಾಗದ ಸಿಮೆಂಟ್ ವ್ಯಾಪಾರಿ ಮಹಿಪಾಲರೆಡ್ಡಿ ಅವರ ಆಗ್ರಹವಾಗಿದೆ.

### ಕೈ ಬಂಡಿ ವ್ಯಾಪಾರಿಗಳಿಂದ ನಗರಸಭೆ ಮನವಿ: ಪೌರಾಯುಕ್ತರಿಂದ ಸ್ಥಳ ಪರಿಶೀಲನೆ

# ರೌಡಿ ಶೀಟರ್ ಶೇಖ್ ಶೋಹೆಬ್ ಹುಸೈನ್ ಗಡಿಪಾರು



ಮಲ್ಲಮ್ಮ ನುಡಿ ವಾರ್ತೆ

**ಕಲಬುರಗಿ:** ನಗರದ ಎಂ.ಬಿ.ನಗರ ಪೊಲೀಸ್ ಠಾಣೆ ವ್ಯಾಪ್ತಿಯ ರೌಡಿ ಶೀಟರ್ ಶೇಖ್ ಶೋಹೆಬ್ ಹುಸೈನ್ (30) ಅವರನ್ನು ಕೊಡಗು ಜಿಲ್ಲೆಯ ವಿರಾಜಪೇಟ್ ರೂರಲ್ ಪೊಲೀಸ್ ಠಾಣೆ ವ್ಯಾಪ್ತಿಗೆ ಗಡಿಪಾರು ಮಾಡಲಾಗಿದೆ.

ನಗರದ ಸಂತ್ರಸವಾಡಿ ನಿವಾಸಿಯಾದ ರೌಡಿಶೀಟರ್ ಶೇಖ್ ಶೋಹೆಬ್ ಹುಸೈನ್ ಮೇಲೆ ಎಂ.ಬಿ.ನಗರ ಪೊಲೀಸ್ ಠಾಣೆಯಲ್ಲಿ ವಿವಿಧ ಕಲಂಗಳ ಅಡಿಯಲ್ಲಿ ಒಟ್ಟು 9 ಪ್ರಕರಣಗಳು ದಾಖಲಾಗಿವೆ. ಈತ ರೂಢಿಗತ ಅಪರಾಧಿಯಾಗಿದ್ದು, 2009 ರಿಂದ 2025ನೇ ಸಾಲಿನವರೆಗೆ ಭಾರತೀಯ ದಂಡ ಸಂಹಿತೆ ಅಡಿಯಲ್ಲಿ 5 ಪ್ರಕರಣಗಳು, ಬಿಎಸ್ ಕಾಯ್ದೆ-2023ರಲ್ಲಿ 1 ಪ್ರಕರಣ ಮತ್ತು ದಂಡ ಪ್ರಕ್ರಿಯೆ ಅಡಿಯಲ್ಲಿ 3 ಸೇರಿ ಒಟ್ಟು 9 ಪ್ರಕರಣ ದಾಖಲಾಗಿವೆ. ಈತ ರೂಢಿಗತ ಅಪಾದಿತನಾಗಿದ್ದು, ಆರೋಪಿಯನ್ನು "ಎ"ರೌಡಿ ಎಂದು ಗುರುತಿಸಲಾಗಿದೆ.

ಆರೋಪಿಯು ಸಾರ್ವಜನಿಕ ಸ್ಥಳಗಲಲ್ಲಿ ಹೊಡೆದಾಟ, ಅಪಾಯಕಾರಿ ಆಯುಧಗಳಿಂದ ಸ್ವ ಇಚ್ಛೆಯಿಂದ ಗಾಯವನ್ನುಂಟು ಮಾಡುವುದು, ಅಕ್ರಮ ಪ್ರತಿಬಂಧಕ, ಶಾಂತಿ ಭಂಗವನ್ನುಂಟು ಮಾಡಲು ಪ್ರಚೋದನೆ ನೀಡುವುದು ಮತ್ತು ಕೊಲೆ ಹಾಗೂ ಅಕ್ರಮವಾಗಿ ಗಾಂಜಾ ಹೊಂದುವಂತಹ ಕಾನುನು ಬಾಹಿರ ಚಟುವಟಿಕೆಗಳಲ್ಲಿ ಭಾಗಿಯಾಗುತ್ತ ಸಾರ್ವಜನಿಕರ ಶಾಂತಿ ಮತ್ತು ನೆಮ್ಮದಿಗೆ ಭಂಗ ತರುವ ಪ್ರಕರಣಗಳಲ್ಲಿ ಪ್ರಮುಖ ಆರೋಪಿಯಾಗಿದ್ದಾನೆ. ನಗರ ಪೊಲೀಸ್ ಆಯುಕ್ತ ಡಾ.ಶರಣಪ್ಪ ಎಸ್.ಡಿ.ಅವರ ನಿರ್ದೇಶನದ ಮೇರೆಗೆ ಆರೋಪಿಯನ್ನು ಗಡಿಪಾರು ಮಾಡುವುದು ಸೂಕ್ತ ಎಂದು ಎಂ.ಬಿ.ನಗರ ಪೊಲೀಸ್ ಠಾಣೆ ಪಿಐ ಶಿವಾನಂದ ವಾಲಿಕರ್ ಅವರು ವರದಿ ನೀಡಿರುವ ಹಿನ್ನೆಲೆಯಲ್ಲಿ ಉಪ-ಪೊಲೀಸ್ ಆಯುಕ್ತರು ಹಾಗೂ ನ್ಯಾಯಾಲಯದ ವಿಶೇಷ ಕಾರ್ಯನಿರ್ವಾಹಕ ದಂಡಾಧಿಕಾರಿ ಅವರು ವಿಚಾರಣೆ ಕೈಗೊಂಡು ಆರೋಪಿಯನ್ನು ಕೊಡಗು ಜಿಲ್ಲೆಯ ವಿರಾಜ್ ಪೇಟೆ ರೂರಲ್ ಪೊಲೀಸ್ ಠಾಣೆ ವ್ಯಾಪ್ತಿಗೆ ಗಡಿಪಾರು ಮಾಡಿ ಆದೇಶ ಹೊರಡಿಸಿದ್ದಾರೆ.

# ಭಾರತವು ಅಧ್ಯಾತ್ಮದ ಬಲದಿಂದ ವಿಶ್ವಗುರುವಾಗಿ ಹೊರಹೊಮ್ಮುವುದು: ಅಶೋಕ ಹಂಚಲಿ

ಮಲ್ಲಮ್ಮ ನುಡಿ ವಾರ್ತೆ

**ಭಾಲ್ಕಿ:** ಜಗತ್ತಿನ ಎಲ್ಲಾ ರಾಷ್ಟ್ರಗಳಲ್ಲಿಯೂ ಭಾರತವೇ ಶ್ರೇಷ್ಠರಾಷ್ಟ್ರವಾಗಿದೆ. ತನ್ನ ಅಧ್ಯಾತ್ಮದ ಬಲದಿಂದ ಭಾರತವು ಜಗತ್ಪ್ರಸಿದ್ಧ ರಾಷ್ಟ್ರವಾಗಿ ಹೊರಹೊಮ್ಮಲಿದೆ ಎಂದು ಚಿಂತಕ, ಶಿಕ್ಷಣ ತಜ್ಞ ಅಶೋಕ ಹಂಚಲಿ ವಿಜಯಾಪೂರ ಹೇಳಿದರು.

ಪಟ್ಟಣದ ಪುರಭವನ (ಟೌನ್‌ಹಾಲ)ನಲ್ಲಿ ಮಂಗಳವಾರ ಅಭಿನವ ಭಾರತ ಯುವಸಂಘಟನೆಯ ವತಿಯಿಂದ ಸರ್ದಾರ ವಲ್ಲಭಭಾಯಿ ಪಟೇಲರ 150ಜೇ ಜಯಂತಿ ಮಹೋತ್ಸವ ನಿಮಿತ್ಯ ಆಯೋಜಿಸಿದ್ದ ಸರ್ದಾರ ಎಟ್ 150 ಯುನಿಟ್ ಮಾರ್ಚ ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸ ಮಂಡಿಸಿದ ಅವರು, ಭಾರತದ ನವ ನಿರ್ಮಾಪಕರಲ್ಲಿ ಒಬ್ಬರಾದ ಸರ್ದಾರ ವಲ್ಲಭಭಾಯಿ ಪಟೇಲರು, ತ್ಯಾಗ ಮತ್ತು ಕರ್ತವ್ಯನಿಷ್ಠೆಯ ಸಾಕಾರಮೂರ್ತಿಯಾಗಿದ್ದರು. ಭೂಲೋಕದ ಮೇಲಿನ ಸ್ವರ್ಗಎಂದು ಕರೆಸಿಕೊಳ್ಳುವ ಸ್ವಿಜರ್‌ಲೆಂಡಿನ ಒಬ್ಬ ಮಹಿಳೆ ಮುಂದಿನ ಜನ್ಮ ಒಂದಿದ್ದರೆ ನಾನು ಭಾರತದಲ್ಲಿಯೇ ಹುಟ್ಟಬೇಕು ಎಂದು ಬೇಡಿಕೊಳ್ಳುವ ಉದಾಹರಣೆ ಹೊಂದಿರುವ ದೇಶ ನಮ್ಮದು. ಜಗತ್ತಿನ ದಾರ್ಶನಿಕರು ಭಾರತದ ಬಗ್ಗೆ ಹೆಮ್ಮೆಪಡುವಾಗ ನಾವು ನಮ್ಮ ದೇಶದ ಶಕ್ತಿಯ ಬಗ್ಗೆ ವಿಚಾರ ಶೂನ್ಯರಾಗಿದ್ದೇವೆ. ಬದುಕಿನ ಪರಂಧಾಮ ಭಾರತ, ಇಂತಹ ದೇಶದಲ್ಲಿ ಹುಟ್ಟಿರುವ ನಾವೇ ಧನ್ಯರು ಎಂದರು. ದೇಶಕ್ಕಾಗಿ ಹೋರಾಡಿ ಪ್ರಾಣತ್ಯಾಗ ಮಾಡಿದ ದೇಶಭಕ್ತರನ್ನು ನಾವು ನಮ್ಮ ರಿಯಲ್ ಹೀರೋ ಆಗಿ ಆದರ್ಶಿಸಬೇಕು ಎಂದು ಯುವಕರಿಗೆ ಕಿವಿಮಾತು ಹೇಳಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಯುವ ಮುಖಂಡ ಚನ್ನಬಸವಣ್ಣ ಬಳತೆ, ತ್ಯಾಗ ಮತ್ತು ಕರ್ತವ್ಯ ನಿಷ್ಠೆಯನ್ನು ನಾವು ಸರ್ದಾರ ವಲ್ಲಭಭಾಯಿ ಪಟೇಲರಿಂದ ಕಲಿಯಬೇಕು. ಸರ್ದಾರ ಪಟೇಲರ ಕೆಲಸದಲ್ಲಿಯ ಪ್ರಾಮುಖ್ಯತೆ ಎಲ್ಲರೂ ಮೆಚ್ಚುವಂತಹದ್ದಾಗಿತ್ತು. ನಮ್ಮ ಯುವಕರು ಪಟೇಲರ ಆದರ್ಶ ಜೀವನದಲ್ಲಿ ಅಳವಡಿಸಿಕೊಂಡಾಗ ಭವ್ಯ ಭಾರತ ನಿರ್ಮಾಣ ಸಾಧ್ಯ ಎಂದು ಹೇಳಿದರು.

ಅಭಿನವ ಭಾರತ ಯುವ ಸಂಘಟನೆಯ ಮುಖಂಡ ಈಶ್ವರ ರುಮ್ಮಾ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಪ್ರಮುಖರಾದ ಅಮರ ಹಲಮಂಡಗೆ, ವಿಷ್ಣುವರ್ಧನ ಕೋಟೆ, ಪತ್ರಕರ್ತರ ಸಂಘದ ಅಧ್ಯಕ್ಷ ಜಯರಾಜ ದಾಬಶೆಟ್ಟಿ, ಶಿವಶರಣ ಚಾಂಬೋಳ, ಲಿಂಗರಾಜ ಕೋಟೆ, ಅರವಿಂದ ಕುಲಕರ್ಣಿ, ನವನಾಥ ಕಾರಬಾರಿ, ಹರೀಶ ಹೆಡಗಾಪೂರೆ, ಪ್ರವೀಣ ಹಡಪದ, ಡಾ। ಜಗದೀಶ ಭೂರೆ ಉಪಸ್ಥಿತರಿದ್ದರು.




### ಯುನಿಟಿ ಮಾರ್ಚ

ಅಭಿನವ ಭಾರತ ಯವಸಂಘಟನೆಯ ವತಿಯಿಂದ ಮಂಗಳವಾರ ಬೆಳಿಗ್ಗೆ ಯುನಿಟಿ ಮಾರ್ಚ ಆಯೋಜಿಸಲಾಗಿದ್ದು, ಪಟ್ಟಣದ ವಿವಿಧ ಬೀದಿಗಳಲ್ಲಿ ಯುವಕರು ಮತ್ತು ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಯುನಿಟಿ ಮಾರ್ಚ ಡಾ. ಬಿ.ಆರ್.ಅಂಬೇಡ್ಕರ್ ವೃತ್ತದಿಂದ ಪ್ರಾರಂಭವಾಗಿ ಪಟ್ಟಣದ ವಿವಿಧ ಬೀದಿಗಳಾದ ಮಹಾತ್ಮಾಗಾಂಧಿ ವೃತ್ತ, ಬಸವೇಶ್ವರ ವೃತ್ತ, ಚನ್ನಬಸವಾಶ್ರಮ, ಸರ್ದಾರ ವಲ್ಲಭಭಾಯಿ ಪಟೇಲರ ವೃತ್ತದ ಮೂಲಕ ಸಾಗಿ ಪುರಭವನದಲ್ಲಿ ಸಮಾವೇಶ ಗೊಂಡಿತು. ಯುನಿಟಿ ಮಾರ್ಚನಲ್ಲಿ ಚಿಂತಕ ಅಶೋಕ ಹಂಚಲಿ, ಮುಖಂಡರಾದ ಚನ್ನಬಸವಣ್ಣ ಬಳತೆ, ಈಶ್ವರ ರುಮ್ಮಾ, ಅಮರ ಹಲಮಂಡಗೆ, ವಿಷ್ಣುವರ್ಧನ ಕೋಟೆ, ಪತ್ರಕರ್ತರ ಸಂಘದ ಅಧ್ಯಕ್ಷ ಜಯರಾಜ ದಾಬಶೆಟ್ಟಿ, ಶಿವಶರಣ ಚಾಂಬೋಳ, ಲಿಂಗರಾಜ ಕೋಟೆ, ಅರವಿಂದ ಕುಲಕರ್ಣಿ, ನವನಾಥ ಕಾರಬಾರಿ, ಹರೀಶ ಹೆಡಗಾಪೂರೆ, ಪ್ರವೀಣ ಹಡಪದ, ಡಾ. ಜಗದೀಶ ಭೂರೆ ಮತ್ತಿತರರು ಇದ್ದರು.

ದೇಶಕ್ಕಾಗಿ ಹೋರಾಡಿ ಪ್ರಾಣತ್ಯಾಗಮಾಡಿದ ಮಹನೀಯರು ನಮ್ಮ ರಿಯಲ್ ಹಿರೋಗಳೆಂದು ನಾವು ಆದರ್ಶಿಸಬೇಕು.

**ಅಶೋಕ ಹಂಚಲಿ, ಶಿಕ್ಷಣ ತಜ್ಞ, ಚಿಂತಕ ವಿಜಯಾಪೂರ.**

ಯವಕರಲ್ಲಿ ದೇಶಪ್ರೇಮ ಮೂಡಿಸುವ ನಿಟ್ಟಿನಲ್ಲಿ ಯುನಿಟ್ ಮಾರ್ಚ ಸೇರಿದಂತೆ ಹಲವಾರು ಕಾರ್ಯಕ್ರಮಗಳು ಅಭಿನವ ಭಾರತ ಯವ ಸಂಘಟನೆಯ ವತಿಯಿಂದ ಪ್ರತಿವರ್ಷ ಆಯೋಜಿಸಲಾಗುತ್ತಿದೆ. ನಮ್ಮ ಯುವಕರು ದೇಶಕ್ಕಾಗಿ ದುಡಿಯುವಂತಾಗಬೇಕು.

**ಈಶ್ವರ ರುಮ್ಮಾ, ಯುವಮುಖಂಡ, ಅಭಿನವ ಭಾರತ ಯುವಸಂಘಟನೆ ಭಾಲ್ಕಿ.**

# ನಿರ್ಗತಿಕರಿಗೆ ಹೊದಿಕೆ ಉಚಿತ ವಿತರಣೆ




ಮಲ್ಲಮ್ಮ ನುಡಿ ವಾರ್ತೆ

**ಬೀದರ್:** ಜಿಲ್ಲಾ ಪಂಚಾಯಿತಿ ಮಾಜಿ ಉಪಾಧ್ಯಕ್ಷ ವಿಜಯಕುಮಾರ ಪಾಟೀಲ ಗಾದಗಿ ಅವರ ಜನ್ಮದಿನದ ನಿಮಿತ್ತ ಅವರ ಅಭಿಮಾನಿ ಬಳಗದ ಸದಸ್ಯರು ನಗರದಲ್ಲಿ ಸೋಮವಾರ ನಿರ್ಗತಿ-ಕರಿಗೆ ಹೊದಿಕೆ ಉಚಿತವಾಗಿ ವಿತರಿಸಿದರು.

ಕೇಂದ್ರ ಬಸ್ ನಿಲ್ದಾಣ, ರೈಲ್ವೆ ನಿಲ್ದಾಣ, ಕೆ.ಇ.ಬಿ. ಕಚೇರಿ ಹತ್ತಿರ, ಜನವಾಡ ರಸ್ತೆಯಲ್ಲಿ ಇರುವ ಹನುಮಾನ ಮಂದಿರದ ಬಳಿ ಹೊದಿಕೆ ವಿತರಣೆ ಮಾಡಿದರು.

ಸಾಮಾಜಿಕ ಚಟುವಟಿಕೆಯೊಂದಿಗೆ ಗಾಂಧಿಗಂಜ್ ಸಹಕಾರ ಬ್ಯಾಂಕ್ ಅಧ್ಯಕ್ಷರೂ ಆದ ವಿಜಯಕುಮಾರ ಪಾಟೀಲ ಗಾದಗಿ ಅವರ ಜನ್ಮದಿನ ಆಚರಿಸಲಾಗಿದೆ. ಸದ್ಯ ಚಳಿಗಾಲ ಇರುವ ಕಾರಣ ಬೆಚ್ಚನೆಯ ಹೊದಿಕೆ ಬಹಳ ಅವಶ್ಯಕವಾಗಿದೆ. ಹೀಗಾಗಿ 50 ನಿರ್ಗತಿಕರಿಗೆ ಹೊದಿಕೆ ಉಚಿತವಾಗಿ ವಿತರಿಸಲಾಗಿದೆ ಎಂದು ಅಭಿಮಾನಿ ಬಳಗದ ಧನರಾಜ ಬುಯ್ಯಾ ಹೇಳಿದರು.

ವಿಜಯಕುಮಾರ ಪಾಟೀಲ ಗಾದಗಿ ಅವರು ಜಿಲ್ಲಾ ಪಂಚಾಯಿತಿ ಉಪಾಧ್ಯಕ್ಷರಾಗಿ ಜಿಲ್ಲೆಯಲ್ಲಿ ಅನೇಕ ಜನ ಪರ ಕಾರ್ಯ ಕೈಗೊಂಡಿದ್ದಾರೆ. ಡಿಸಿಸಿ ಬ್ಯಾಂಕ್ ನಿರ್ದೇಶಕ ಹಾಗೂ ಗಾಂಧಿಗಂಜ್ ಸಹಕಾರ ಬ್ಯಾಂಕ್ ಅಧ್ಯಕ್ಷರಾಗಿ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಜನರ ಪ್ರೀತಿ, ವಿಶ್ವಾಸ ಗಳಿಸಿದ್ದಾರೆ ಎಂದು ತಿಳಿಸಿದರು.

ಪ್ರಮುಖರಾದ ದೀಪಕ್ ಪಾಟೀಲ, ದಿಲೀಪ್ ನೌಬಾದೆ, ಮಹಾದಪ್ಪ ಯರನಳ್ಳಿ, ಸಂಜು ಪೋತೆ, ಉದಯ ಅಷ್ಟೂರೆ, ಅನಿಲ್ ಪಾಟೀಲ ಕಾಶೆಂಪುರ, ವಿಜಯಕುಮಾರ ಬಿರಾದಾರ, ಮಹಾರುದ್ರ ಮತ್ತಿತರರು ಇದ್ದರು.




ಭಾಲ್ಕಿ: ಪಟ್ಟಣದಲ್ಲಿ ಮಂಗಳವಾರ ಅಭಿನವ ಭಾರತ ಯುವ ಸಂಘಟನೆಯ ವತಿಯಿಂದ ಸರ್ದಾರ ವಲ್ಲಭಭಾಯಿ ಪಟೇಲರ್ 150ನೇ ಜಯಂತಿಮಹೋತ್ಸವ ಅಂಗವಾಗಿ ಯುನಿಟಿ ಮಾರ್ಚ ನಡೆಯಿತು. ಮುಖಂಡರಾದ ಚನ್ನಬಸವಣ್ಣ ಬಳತೆ, ಚಿಂತಕ ಅಶೋಕ ಹಂಚಲಿ, ಈಶ್ವರ ರುಮ್ಮಾ ಸೇರಿದಂತೆ ಶಾಲಾ ಕಾಲೇಜಿನ ವಿದ್ಯಾರ್ಥಿಗಳಿದ್ದರು. **ಮಲ್ಲಮ್ಮ ನುಡಿ ಚಿತ್ರ.**

# ಧರ್ಮಸ್ಥಳ: ನ್ಯಾಯಕ್ಕಾಗಿ ಮಹಿಳೆಯರ ಸಹಿ ಸಂಗ್ರಹ



ಮಲ್ಲಮ್ಮ ನುಡಿ ವಾರ್ತೆ

**ಬಳ್ಳಾರಿ:** ಧರ್ಮಸ್ಥಳ ದೌರ್ಜನ್ಯ ನ್ಯಾಯಕ್ಕಾಗಿ ಮಹಿಳೆಯರ ಸಹಿ ಸಂಗ್ರಹ ಅಭಿಯಾನ. ಕೊಂದವರು ಯಾರು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ,

ಬಳ್ಳಾರಿ ಜಿಲ್ಲಾ ಸಮಿತಿಯಿಂದ 555 ಸಹಿಸಂಗ್ರಹದ ಮನವಿ ಸಲ್ಲಿಕೆ.

ಜನವಾದಿ ಮಹಿಳಾ ಸಂಘಟನೆ ರಾಜ್ಯ ಸಮಿತಿಯ ಕರೆಯ ಭಾಗವಾಗಿ ಜಿಲ್ಲೆಯಾದ್ಯಂತ ಸಹಿ ಸಂಗ್ರಹಿಸಿ ಜಿಲ್ಲಾಧಿಕಾರಿಗಳು ಮುಖಾಂತರ ಸಹಿ ಸಂಗ್ರಹ ಪೊರಂಗಳು ಮಾನ್ಯ ಮುಖ್ಯಮಂತ್ರಿಗಳಗೆ ಕಳಿಸಲಾಗದೆ.

ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿ ತಾಲೂಕಿನ ಧರ್ಮಸ್ಥಳ ಗ್ರಾಮ ಮತ್ತು ಅದರ ಆಸುಪಾಸಿನಲ್ಲಿ ಹತ್ತಾರು ವರ್ಷಗಳಿಂದ ಅನೇಕ ಮಹಿಳೆಯರ ನಾಪತ್ತೆ, ಅತ್ಯಾಚಾರ, ಅಸಹಜ ಮತ್ತು ಅನುಮಾನಸ್ಪದ ಸಾವು ಹಾಗು ಕೊಲೆ ಪ್ರಕರಣಗಳಿಗೆ ಸಂಬಂಧಿಸಿ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ರಾಜ್ಯಾದ್ಯಂತ ಕನ್ನಡ ರಾಜ್ಯೋತ್ಸವದಂದು ಕನ್ನಡ ನಾಡಿನಲ್ಲಿ ನ್ಯಾಯಕ್ಕಾಗಿ ಮಹಿಳೆಯರ ಆಗ್ರಹದ ಸಹಿ ಸಂಗ್ರಹದ ಅಭಿಯಾನದ ಭಾಗವಾಗಿ ಬಳ್ಳಾರಿ ಜಿಲ್ಲೆಯ ಜನವಾದಿ ಮಹಿಳಾ ಸಂಘಟನೆ 555 ಸಹಿ ಸಂಗ್ರಹಗಳ ಮನವಿಯನ್ನು ರಾಜ್ಯದ ಮುಖ್ಯಮಂತ್ರಿಗಳಿಗೆ ಮಾನ್ಯ ಜಿಲ್ಲಾಧಿಕಾರಿಗಳ ಮುಖಾಂತರ ಸಲ್ಲಿಸುತ್ತಿದ್ದೇವೆ.

# ಕುಷ್ಟರೋಗದ ಬಗ್ಗೆ ಭಯಬೇಡ ಎಚ್ಚರಿಕೆಯಿರಲಿ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ, ನ.18 - ಕುಷ್ಠರೋಗವನ್ನು ಬಹು ಔಷಧ ಚಿಕಿತ್ಸಾ ಪದ್ಧತಿಯ ಮೂಲಕ ಗುಣಪಡಿಸಬಹುದಾಗಿದ್ದು, ಅದರ ಬಗ್ಗೆ ಭಯ ಹೊಂದದೇ ಎಚ್ಚರಿಕೆಯಿಂದ ಇರಬೇಕಷ್ಟೆ ಎಂದು ಶಿರೂರ ಪ್ರಾಥಮಿಕ ಆರೋಗ್ಯ ಕೇಂದ್ರದ ಆರೋಗ್ಯ ನಿರೀಕ್ಷಣಾಧಿಕಾರಿ ಕೆ.ಎಫ್.ಮಾಯಾಚಾರಿ ಹೇಳಿದರು.

ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಕುಷ್ಠರೋಗ ನಿವಾರಣಾಧಿಕಾರಿಗಳು, ಶಿರೂರ ಪ್ರಾಥಮಿಕ ಆರೋಗ್ಯ ಕೇಂದ್ರ ಇವರ ಸಹಯೋಗದಲ್ಲಿ ಶಿರೂರಿನ ಮುರಾರ್ಜಿ ದೇಸಾಯಿ ವಸತಿ ಶಾಲೆ ಹಾಗೂ ಆಶ್ರಯ ಕಾಲೋನಿಯ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕುಷ್ಟರೋಗ ಪತ್ತೆ ಹಚ್ಚುವ ಅಭಿಯಾನದ ಅಂಗವಾಗಿ ಸೋಮವಾರ ಹಮ್ಮಿಕೊಂಡಿದ್ದ ಕುಷ್ಟರೋಗದ ಅರಿವು ಆಂದೋಲನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕುಷ್ಟರೋಗ ವಾಸಿಯಾಗದ ರೋಗವಲ್ಲ. ಈಚಿನ ದಿನಗಳಲ್ಲಿ ಈ ರೋಗವನ್ನು ಬಹು ಔಷಧ ಚಿಕಿತ್ಸೆ ಯ ಮೂಲಕ ಬೇಗನೇ ಗುಣಪಡಿಸಹಬುದಾಗಿದ್ದು,

ಭವಿಷ್ಯದಲ್ಲಿ ಉಂಟಾಗುವ ಅಂಗವೈಕಲ್ಯತೆಯನ್ನು ತಡೆಯಬಹುದಾಗಿದೆ. ಈ ಹಿನ್ನೆಲೆಯಲ್ಲಿ ಮಚ್ಚೆಗಳಿದ್ದರೆ ಅದನ್ನು ಮುಚ್ಚಿಡದೇ ಪರೀಕ್ಷೆ ಮಾಡಿಸಿಕೊಳ್ಳಬೇಕು ಎಂದು ಮಾಯಾಚಾರಿ ಹೇಳಿದರು.

ಮುಖ್ಯಗುರುಗಳಾದ ಬಿ.ಎ.ಹೂಗಾರ ಹಾಗೂ ಎಸ್.ಟಿ.ಕರಲಿಂಗನ್ನವರ ಕುಷ್ಟರೋಗದ ಬಗ್ಗೆ ಅರಿವು ಮೂಡಿಸುವ ಮಾಹಿತಿಯುಳ್ಳ ಕರಪತ್ರಗಳನ್ನು ಬಿಡುಗಡೆಗೊಳಿಸಿದರು.

ಶಿರೂರ ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿ ಎಸ್.ಎಸ್. ಮೆಣಸಗಿ, ಶಿಕ್ಷಕರಾದ ವೆಂಕಟೇಶ ಬಾಗಲಕೋಟ, ಕೆ.ಡಬ್ಲ್ಯು.ಲಮಾಣಿ. ಎಮ್. ವ್ಹಿ.ಅಮ್ಮಣ್ಣವರ, ವಿ.ಜಿ.ಗಬ್ಬೂರಕರ, ಎಸ್.ಆರ್. ಚೌಕಿಮಠ, ವಿರೇಶರುದ್ರಸ್ವಾಮಿ, ಎಮ್.ಎಮ್.ಕುರಿ, ವಿಜಯಲಕ್ಷ್ಮಿ ಬಿರಾದಾರ, ಎಸ್.ಎಸ್.ಮಂತ್ರಿ,

ಶೈಲಾಹಿರೇಮಠ, ಆಶಾಕಾರ್ಯಕರ್ತರಾದ ಲಕ್ಷ್ಮೀಕೋಟೆಕಲ್ಲ, ಲಕ್ಷ್ಮೀಗೌಡರ ಇದ್ದರು.




Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.

PRGI NO. 120927
(RNINO:KARKAN/2011/48371)